
ಪ್ರಬೋಧನೆ

ಲಂಕೇಶ್

13 ಜುಲೈ 2016 ಪುಟ 20 ರೂ. 15/-

ಇಸ್ಲಾಂ ಧರ್ಮದ ಅರ್ಥ ವ್ಯವಸ್ಥೆ



ಮುತ್ತು ಭಾಗ್ಯ!

ಭುಗಿಲೆದ್ದ ಭಿನ್ನಮತ

ಅರಮನೆ ಮದುವೆ ಸೊರಗಿದ ಪ್ರಜಾತಂತ್ರ





ಮುಖ್ಯ ನ್ಯಾಯಮೂರ್ತಿಯ ಮತಾಂಧ ಮಾತುಗಾರಿಕೆ

ಇಸ್ಲಾಂ ಧರ್ಮದ ಅರ್ಥವ್ಯವಸ

ನೀವು ಬ್ಯಾಂಕಿನಲ್ಲಿ ಹಣವನ್ನು ಠೇವಣಿ ಇಟ್ಟರೆ, ಅದು ಐದು ವರ್ಷಗಳಲ್ಲಿ ಡಬಲ್ ಆಗುವುದು ಎಂದು ಭಾವಿಸಿ. ಇದೇ ಲೆಕ್ಕದ ಪ್ರಕಾರ ಒಂದು ಕಲ್ಪನೆ ಮಾಡೋಣ. ಇಂದು ಒಂದು ಹೋಟೆಲ್ ಊಟದ ಬೆಲೆ 25 ರೂಪಾಯಿಯಾದರೆ ಐದು ವರ್ಷಗಳ ನಂತರ 50 ರೂಪಾಯಿ ಆಗುವುದು. ಹತ್ತು ವರ್ಷಗಳಲ್ಲಿ ನೂರು ರೂಪಾಯಿ ಆಗುವುದು. ಹೀಗೆ ಲೆಕ್ಕ ಮಾಡುತ್ತ ಹೋದರೆ ನೂರು ವರ್ಷಗಳ ನಂತರ ಒಂದು ಹೊಟೆಲ್ ಊಟದ ಬೆಲೆ **26210400** ರೂಪಾಯಿ ಆಗುವುದು!

ಇದಕ್ಕೆ ಏನಾದರೂ ಅರ್ಥವಿದೆಯೆ? ಆದರೆ ಎಲ್ಲ ದೇಶಗಳ ಅರ್ಥಶಾಸ್ತ್ರ ಇಂಥ ಮೂರ್ಖ ಲೆಕ್ಕದ ಮೇಲೆಯೇ ನಿಂತಿದೆ. ಅರ್ಥಶಾಸ್ತ್ರಕ್ಕೆ ಬಡ್ಡಿಯೆ ಬುನಾದಿಯಾದರೆ ತೃತೀಯ ಜಗತ್ತಿನ ರಾಷ್ಟ್ರಗಳೆಲ್ಲ ಐ.ಎಂ.ಎಫ್. ಮತ್ತು ವಿಶ್ವಬ್ಯಾಂಕಿನ ಗುಲಾಮಗಿರಿಯಲ್ಲಿ ಬದುಕಬೇಕಾಗುವುದು. ಈ ರೀತಿ ಎಲ್ಲವನ್ನೂ ಬಡ್ಡಿ ಹಡೆಯುವ ಹಣದ ಮೂಲಕವೇ ನೋಡುತ್ತ ಹೋದರೆ ಲೋಕದ ಸರ್ವನಾಶ ಬೇಗನೆ ಆಗುವುದರಲ್ಲಿ ಸಂಶಯವಿಲ್ಲ, ಏಕೆಂದರೆ ಶ್ರೀಮಂತ ದೇಶಗಳು ಇಂಥ ಲೆಕ್ಕಾಚಾರದ ಮೇಲೆಯೆ ಬಡದೇಶಗಳಿಗೆ ಬಿಲಿಯನ್‌ಗಟ್ಟಲೆ ಡಾಲರುಗಳ ಸಾಲ ಕೊಟ್ಟು ಅವುಗಳ ಸಂಪನ್ಮೂಲಗಳ ಸುಲಿಗೆ ಮಾಡುತ್ತವೆ. ಇಂದು ಬಹುಪಾಲು ಬಡ ರಾಷ್ಟ್ರಗಳು ದಿವಾಳಿಯ ಅಂಚಿನಲ್ಲಿವೆ.


ಕುಡಿತ, ಜೂಜಾಟ, ಮಾದಕ ದ್ರವ್ಯಗಳ ಚಟ, ವಿಕೃತ ಕಾಮ, ಹಿಂಸೆ, ಕೊಲೆ, ಸುಲಿಗೆ, ದರೋಡೆ ಮುಂತಾದ ಅನಿಷ್ಟಗಳಿಂದ ತುಂಬಿದ ಸಮಾಜದಲ್ಲಿ ಜನರು ಟಿ.ವಿ., ಸಿನಿಮಾಗಳು ಸೃಷ್ಟಿಸುವ ಭ್ರಮಾಲೋಕದಲ್ಲಿ ಬದುಕುತ್ತಿದ್ದಾರೆ. ಅರಣ್ಯನಾಶ, ನೆಲ-ಜಲ-ವಾಯುಮಾಲಿನ್ಯದಿಂದಾಗಿ ಇಡೀ ಜಗತ್ತು ಕಸದ ತೊಟ್ಟಿಯಾಗುತ್ತಿದೆ. ಎಲ್ಲದಕ್ಕೂ ಹಣವೇ ಮುಖ್ಯವಾಗಿ ಮಾನವ ಸಂಬಂಧಗಳು ಯಾಂತ್ರಿಕವಾಗುತ್ತಿವೆ. ಮನುಷ್ಯ ತಲ್ಲಣಗೊಂಡಿದ್ದಾನೆ. ತಾನೇನು ಮಾಡುತ್ತಿದ್ದೇನೆ ಎಂಬುದರ ಅರಿವೇ ಅವನಿಗೆ ಇಲ್ಲದಂತಾಗಿದೆ. ಅನೇಕ ಅಸಹಾಯಕ ಯುವತಿಯರಿಗೆ ಮೈಮಾರಿ ಬದುಕುವುದೊಂದೇ ಮಾರ್ಗ ಉಳಿದಿದೆ. ಮಾನಭಂಗ, ಗುಂಪುಘರ್ಷಣೆ, ಕೋಮುಗಲಭೆ, ಜನಾಂಗ ಹತ್ಯೆ, ಯುದ್ಧ, ಬಾಂಬ್ ಸಿಡಿತ - ಇವೆಲ್ಲ ಲೋಕ ದಿನಚರಿಯಲ್ಲಿ ಸೇರಿಬಿಟ್ಟಿವೆ.

ಪ್ರದೇಶಗಳು ಮತ್ತು ದೇಶಗಳು ಸ್ವಯಂ ಪರಿಪೂರ್ಣ ಉತ್ಪಾದನಾ ವ್ಯವಸ್ಥೆ ಹೊಂದಿ, ಬಡ್ಡಿ ಇಲ್ಲದ ಅರ್ಥಶಾಸ್ತ್ರದ ಹಿನ್ನೆಲೆಯಲ್ಲಿ ಆರ್ಥಿಕ ವ್ಯವಸ್ಥೆ ಅಸ್ತಿತ್ವದಲ್ಲಿ ಬಂದಾಗ ಮಾತ್ರ ನೆಮ್ಮದಿಯ ಬದುಕನ್ನು ಕಾಣಲು ಸಾಧ್ಯ. ಇದನ್ನು ಸಾಧಿಸುವುದಕ್ಕಾಗಿ ಅರ್ಥಶಾಸ್ತ್ರದ ವ್ಯಾಖ್ಯಾನವನ್ನೇ ಬದಲಿಸಬೇಕಾಗಿದೆ. ಅರ್ಥಶಾಸ್ತ್ರವೆಂಬುದು ನೈತಿಕ ತಳಹದಿಯ ಮೇಲೆ ಸರಳ ಸುಂದರವಾದ ಸಮರ್ಥ ಸಮಾಜ ನಿರ್ಮಾಣ ಮಾಡುವ ಗುರಿಯನ್ನು ಹೊಂದಿರಬೇಕು. ನಿಯಮಿತವಾದ ಸಂಪನ್ಮೂಲಗಳಿಂದ ಇಡೀ ಜನಸಮುದಾಯದ ಜೀವನಾವಶ್ಯಕವಾದ ಬೇಡಿಕೆಗಳನ್ನು ಮಾತ್ರ ಈಡೇರಿಸಲು ದಾರಿ ತೋರಿಸುವಂಥದ್ದೇ ಅರ್ಥಶಾಸ್ತ್ರ ಎಂಬುದು ಅರ್ಥಶಾಸ್ತ್ರದ ವ್ಯಾಖ್ಯಾನವಾಗಬೇಕು.

ಇದನ್ನು ಸಾಧಿಸಬೇಕಾದರೆ ಪ್ರತಿಯೊಬ್ಬ ಮಾನವ ಹೊ ಚಿ ಮಿನ್ ಹಾಗೆ, ಗಾಂಧೀಜಿಯ ಹಾಗೆ, ಮುಹಮ್ಮದ್ ಪೈಗಂಬರರ (ಕ್ರಿಸ್ತಶಕ 570-632) ಹಾಗೆ ಬದುಕುವುದನ್ನು ಕಲಿಯಬೇಕು. "ಅನ್ನದೊಳಗೊಂದಗುಳ, ಸೀರೆಯೊಳಗೊಂದೆಳೆಯ, ಹೊನ್ನಿನೊಳಗೊಂದೊರೆಯ ಇಂದಿಂಗೆ ನಾಳಿಂಗೆ ಎಂದಡೆ, ನಿಮ್ಮಾಣೆ, ನಿಮ್ಮ ಪ್ರಮಥರಾಣೆ ಕೂಡಲಸಂಗಮದೇವಾ" ಎಂದು ಬಸವಣ್ಣನವರ ಹಾಗೆ ಹೇಳುವ ಧೈರ್ಯ ಬರಬೇಕು. ಬಡ್ಡಿಯ ನಿಷೇಧವಾಗಬೇಕು. ಅದರ ಅಸ್ತಿತ್ವ ಅತ್ಯಂತ ಅವ್ಯವಹಾರಿಕವಾಗಿರುವುದರಿಂದ ಅದನ್ನು ನಾಶಗೊಳಿಸುವವರೆಗೆ ಜಗತ್ತಿನಲ್ಲಿ ಕ್ರೌರ್ಯವನ್ನು ಹೊಡೆದೋಡಿಸಲು ಸಾಧ್ಯವೇ ಇಲ್ಲ.

ಬಡ್ಡಿಯು ನಾಶವಾಗಬೇಕಾದರೆ ನಮ್ಮ ಹಳ್ಳಿಗಳು ಮತ್ತು ದೇಶ ಸ್ವಯಂ ಪರಿಪೂರ್ಣತೆಯ ದಾರಿಯಲ್ಲಿ ಸಾಗಬೇಕು. ಅತ್ಯವಶ್ಯಕ ವಸ್ತುಗಳನ್ನು ಅತ್ಯವಶ್ಯಕ ಪ್ರಮಾಣದಲ್ಲಿ ಮಾತ್ರ ಬಳಸುವಂಥ ಪ್ರಜ್ಞೆ ಬೆಳೆಯಬೇಕು. ಉಳ್ಳವರು ಇಲ್ಲದವರಿಗಾಗಿ ಜಕಾತ್ (ಶ್ರೀಮಂತರ ಧನದಲ್ಲಿ ಬಡವರ ಪಾಲು) ಕೊಡಬೇಕು. ಪ್ರತಿಯೊಬ್ಬನಿಗೆ ಸಂತ, ಸೂಫಿಸಂತ, ಶರಣ ಮತ್ತು ದಾಸರ ಹಾಗೆ ಅಪರಿಗ್ರಹ ಭಾವ ಮೂಡಬೇಕು. ಪರೋಪಕಾರವೇ ಮನುಷ್ಯ ಜೀವನದ ಅತಿದೊಡ್ಡ ಗುರಿಯಾಗಬೇಕು. ಒಂದು ಸಮಾಜದ ಆರ್ಥಿಕ ಸಬಲತೆಗೆ ಸರ್ಕಾರದ ಹೊಣೆಗಾರಿಕೆ ಇದೆ. ಅದೇರೀತಿ ಪ್ರತಿಯೊಬ್ಬರಿಗೂ ತಮ್ಮ ಪಾಲಿನ ಸಾಮಾಜಿಕ ಹೊಣೆ ಇರುತ್ತದೆ ಎಂಬುದನ್ನು ಮರೆಯಬಾರದು. ಹಿಂದೆ ಹಳ್ಳಿಗಳಲ್ಲಿ ಮತ್ತು ಅನೇಕ ಪಟ್ಟಣಗಳಲ್ಲಿ ಪರಿಚಿತರು ಊಟದ ಸಮಯದಲ್ಲಿ ಭೇಟಿಯಾದಾಗ, ಒಬ್ಬ 'ಊಟ ಆಯಿತೆ' ಎಂದು ಕೇಳಿದರೆ, ಇನ್ನೊಬ್ಬ 'ಆಯಿತು, ನಿಮ್ಮದಾಯಿತಾ' ಎಂದು ವಿಚಾರಿಸುತ್ತಿದ್ದ. ಒಬ್ಬನ ಹಸಿವು ಹಿಂಗಿಸುವುದು ಇನ್ನೊಬ್ಬನ ಸಾಮಾಜಿಕ ಜವಾಬ್ದಾರಿಯಾಗಿತ್ತು.

ಬದುಕಿನಲ್ಲಿ ಅರ್ಥಶಾಸ್ತ್ರದ ಅರ್ಥವೇ ಬೇರೆಯಾಗುತ್ತದೆ. ಬ್ಯಾಂಕಿನಲ್ಲಿ, ಷೇರು ಮಾರುಕಟ್ಟೆಯಲ್ಲಿ ಹಾಗೂ ಬೇಡಿಕೆ ಮತ್ತು ಪೂರೈಕೆ ಹಿನ್ನೆಲೆಯಲ್ಲಿ ಅದು ವ್ಯವಹರಿಸುವ ರೀತಿಯನ್ನು ನೋಡಿದರೆ 'ಬದುಕಿಗೆ ಏನು ಬೆಲೆ ಇದೆ?' ಎಂಬ ಪ್ರಶ್ನೆ ಮೂಡುತ್ತದೆ. ಅರ್ಥಹೀನ ಸಮಾಜವೊಂದು ಉದಯವಾಗುವುದರ ಮುನ್ಸೂಚನೆ ಇದು!



ನಾವು ಎಲ್ಲ ಧರ್ಮದವರು, ಎಲ್ಲ ಜಾತಿಗಳವರು, ಎಲ್ಲ ವರ್ಗದವರು, ಆಸ್ತಿಕರು ಮತ್ತು ನಾಸ್ತಿಕರು, ಜ್ಞಾನಿಗಳು ಮತ್ತು ಅಜ್ಞಾನಿಗಳು, ಒಳ್ಳೆಯವರು ಮತ್ತು ಕೆಟ್ಟವರು ಸೇರಿ ಅರ್ಥಹೀನ ಸಮಾಜವೊಂದನ್ನು ಸೃಷ್ಟಿಸುತ್ತಿದ್ದೇವೆ ಎನ್ನುವುದಕ್ಕೆ ವರ್ತಮಾನವೇ ಸಾಕ್ಷಿ! ಸದಾ ಲೆಕ್ಕಾಚಾರದ ಬದುಕು ಕ್ರೌರ್ಯವನ್ನೇ ಸೃಷ್ಟಿಸುತ್ತದೆ. ಇತಿಹಾಸದುದ್ದಕ್ಕೂ ನೋಡಿದಾಗ ಯಾವುದೇ ಧರ್ಮದ ಜನರು ತಮ್ಮ ತಮ್ಮ ಧರ್ಮಗಳು ಆದೇಶಿಸಿದ ಸಾಮಾಜಿಕ ಜವಾಬ್ದಾರಿಯನ್ನು ಸಂಪೂರ್ಣವಾಗಿ ಪಾಲಿಸಿಲ್ಲ, ಒಂದುವೇಳೆ ಪಾಲಿಸಿದ್ದರೆ ಇಂಥ ಪರಿಸ್ಥಿತಿ ಬರುತ್ತಿರಲಿಲ್ಲ.

"ನಿಮಗೆ ಅತ್ಯಂತ ಪ್ರಿಯವಾದುದನ್ನು ದೇವಮಾರ್ಗದಲ್ಲಿ ವ್ಯಯಿಸುವತನಕ ನೀವು ಪುಣ್ಯ ಗಳಿಸಲಾರಿರಿ" ಎಂದು ಕುರಾನಿನ ಮೂರನೇ ಅಧ್ಯಾಯ(ಸೂರಾ)ದ 92ನೇ ಸೂಕ್ತ (ಆಯತ್) ತಿಳಿಸುತ್ತದೆ. ದೇವಮಾರ್ಗದಲ್ಲಿ ವ್ಯಯಿಸುವುದೆಂದರೆ ಸಾಮಾಜಿಕ ಜವಾಬ್ದಾರಿಯನ್ನು ನಿಭಾಯಿಸುವುದು! ಒಬ್ಬನೇ ದೇವ ಅಲ್ಲಾಹ್ ಮತ್ತು ಕೊನೆಯ ಪ್ರವಾದಿ ಮುಹಮ್ಮದ್, ನಮಾಜ್ (ಪ್ರಾರ್ಥನೆ), ಜಕಾತ್, ರೋಜಾ (ಉಪವಾಸ ವ್ರತ) ಹಾಗೂ ಮೆಕ್ಕಾಗೆ ಹಜ್ ಯಾತ್ರೆ - ಇವು ಇಸ್ಲಾಂ ಧರ್ಮದ ಐದು ಮುಖ್ಯ ಆಧಾರಸ್ತಂಭಗಳು.

ಪ್ರತಿಯೊಬ್ಬ ಮುಸ್ಲಿಂ ಪ್ರತಿವರ್ಷ ತನ್ನ ಸಂಪತ್ತಿನ ಪ್ರಮಾಣಕ್ಕನುಸಾರವಾಗಿ 2.5 ರಿಂದ ಶೇಕಡ 20ರಷ್ಟು ಭಾಗವನ್ನು ಜಕಾತ್ ರೂಪದಲ್ಲಿ ಬಡವರಿಗೆ 'ನನ್ನ ಸಂಪತ್ತಿನಲ್ಲಿ ನಿಮ್ಮ ಪಾಲು ಇದು' ಎಂಬ ಭಾವದೊಂದಿಗೆ ಕೊಡಬೇಕು. ಇದಷ್ಟೇ ಅಲ್ಲದೆ ಬೇರೆಯವರು ಅರಿಯದಂತೆ ಕಷ್ಟದಲ್ಲಿರುವವರಿಗೆ ದಾನ ಮಾಡಬೇಕು. ಸ್ವಂತಕ್ಕೆ ಸರಳಜೀವನ ನಡೆಸಬೇಕು. ಒಂದು ಅನ್ನದ ಅಗುಳನ್ನೂ ಹಾಳು ಮಾಡಬಾರದು. ಇನ್ನೂ ಸ್ವಲ್ಪ ಹಸಿವಿರುವಾಗಲೇ ಮುಹಮ್ಮದ್ ಪೈಗಂಬರರ ಹಾಗೆ ಊಟ ಮುಗಿಸಬೇಕು. ವ್ಯಾಪಾರ ವ್ಯವಹಾರಗಳಲ್ಲಿ ತೊಡಗುವುದು ಧರ್ಮಸಮ್ಮತವಾದರೂ ಬಡ್ಡಿ ತಿನ್ನಬಾರದು. ಬೇಟೆ ಆಡಬಾರದು. ಬೇಕಾಬಿಟ್ಟಿಯಾಗಿ ಒಂದು ಮರವನ್ನೂ ಕಡಿಯಬಾರದು. ದುಡಿಮೆ ಇಲ್ಲದೆ ಹಣ ಗಳಿಸಲು ಪ್ರೇರೇಪಿಸುವ ಜೂಜಾಟ ನಿಷೇಧಿಸಬೇಕು. ತಂಬಾಕು, ಮದ್ಯ, ಮಾದಕ ವಸ್ತುಗಳು, ಮಾನವ ಘನತೆಯನ್ನು ಕುಬ್ಜವಾಗಿಸುವಂಥ ಐಷಾರಾಮಿ ವಸ್ತುಗಳು ಮುಂತಾದವುಗಳನ್ನು ಉತ್ಪಾದಿಸಬಾರದು - ಹೀಗೆ ಈ ಕಟ್ಟಳೆಗಳನ್ನೆಲ್ಲ ಚಾಚೂ ತಪ್ಪದೆ ಪಾಲಿಸಿದರೆ ಒಂದು ಸಮಾಜದಲ್ಲಿ ಬಡತನವಿರಲು ಸಾಧ್ಯವೆ?

"ನಾವು ತೆಳು ಹಾಗೂ ದಪ್ಪ ರೇಷ್ಮೆಬಟ್ಟೆ ಧರಿಸುವುದನ್ನು ಮತ್ತು ಚಿನ್ನ ಬೆಳ್ಳಿಯ ಪಾತ್ರೆಗಳಲ್ಲಿ ಊಟ ಮಾಡುವುದನ್ನು ಹಜರತ್ ಮುಹಮ್ಮದ್ ಪೈಗಂಬರ್ ಅವರು ತಡೆದಿರುವರು. ಇವೆಲ್ಲ ಅವಿಶ್ವಾಸಿಗಳಿಗೆ ಈ ಲೋಕದಲ್ಲೂ ನಿಮಗೆ ಪರಲೋಕದಲ್ಲೂ ಸಿಗುವುದು ಎಂದಿರುವರು" ಎಂದು ಅವರ ಅನುಯಾಯಿ ಹುದೈಫಾ ಅವರು ಹೇಳಿದ್ದನ್ನು ದಾಖಲು ಮಾಡಲಾಗಿದೆ. ಮನುಷ್ಯನ ಆಸೆಬುರುಕುತನದಿಂದಾಗಿ ಇಡೀ ಜಗತ್ತು ನರಳುತ್ತಿದೆ. ಮನುಷ್ಯ ಜಗತ್ತನ್ನು ಸುಲಿಯುತ್ತ, ಅದನ್ನು ವಿನಾಶದ ಅಂಚಿಗೆ ತಂದು ನಿಲ್ಲಿಸಿದ್ದಾನೆ.

"ಮದ್ಯದ ಹಾಗೂ ಜೂಜಿನ ಮೂಲಕ ನಿಮ್ಮೊಳಗೆ
ಶತ್ರುತ್ವವನ್ನೂ ದ್ವೇಷವನ್ನೂ ಉರಿಸಲಿಕ್ಕೂ
ಅಲ್ಲಾಹನ ಸ್ಮರಣೆಯಿಂದಲೂ ನಮಾಜಿನಿಂದಲೂ
ನಿಮ್ಮನ್ನು ತಡೆಯಲಿಕ್ಕೂ ಸೈತಾನನು
ಉದ್ದೇಶಿಸುತ್ತಾನೆ. ಆದ್ದರಿಂದ (ಇವುಗಳಿಂದ)
ತಡೆದು ನಿಲ್ಲುವಿರಾ" ಎಂದು ಕುರಾನ್
ಪ್ರಶ್ನಿಸುತ್ತದೆ.

ಕುಡಿತ ಮತ್ತು ಜೂಜಾಟದಂಥ ಚಟಗಳು ದೇಶದ ಕೋಟ್ಯಂತರ ಕುಟುಂಬಗಳನ್ನು ನಾಶ ಮಾಡುತ್ತಿವೆ. ಎಂದೂ ಕುಡಿಯದ ಜಾತಿ ಮತ್ತು ಬುಡಕಟ್ಟಿನವರೂ ಕುಡಿಯಲು ಪ್ರಾರಂಭಿಸಿದ್ದಾರೆ. ದೇಶದ ಲಕ್ಷಾಂತರ ಮನೆಗಳನ್ನು ಹೆಣ್ಣುಮಕ್ಕಳು ನಡೆಸುತ್ತಿದ್ದಾರೆ. ಮಕ್ಕಳನ್ನಲ್ಲದೆ ಕುಡುಕ ಗಂಡಂದಿರನ್ನೂ ಸಾಕುತ್ತಿದ್ದಾರೆ. ಕುಡಿತ - ಮಟಕಾಗಳಿಂದಾಗಿ ಕೋಟಿ ಕೋಟಿ ಜನ ತಮ್ಮ ನೆಮ್ಮದಿಯನ್ನು ಕಳೆದುಕೊಳ್ಳುವುದಲ್ಲದೆ ಮನೆಯೊಳಗಿನ ನೆಮ್ಮದಿಯನ್ನೂ ಕಳೆದಿದ್ದಾರೆ. ಎಲ್ಲದಕ್ಕೂ ಹೆಂಡಂದಿರು ಹಿಂಸೆಯನ್ನು ಅನುಭವಿಸುವಂಥ ಪರಿಸ್ಥಿತಿ ಉಂಟಾಗಿದೆ. "ಕೂಲಿಕಾರನ ಬೆವರು ಒಣಗುವುದರೊಳಗಾಗಿ ಆತನ ಕೂಲಿಯ ಹಣ ಕಳಿಸಿ" ಎಂದು ಪೈಗಂಬರರು ತಿಳಿಸಿದ್ದಾರೆ. ಇಂಥ ಕೂಲಿಗಳಲ್ಲಿ ಇಂದು ಎಷ್ಟು ಜನರು ತಾವು ಕಷ್ಟಪಟ್ಟು ದುಡಿದ ಹಣವನ್ನು ಸದುಪಯೋಗಪಡಿಸಿಕೊಳ್ಳುತ್ತಿದ್ದಾರೆ? ಕೇವಲ 50-60 ವರ್ಷಗಳ ಹಿಂದೆ ಒಬ್ಬ ಕುಡುಕ ತೂರಾಡುತ್ತ ನಡೆಯುವುದನ್ನು ನೋಡಲು ನೂರಾರು ಜನ ಸೇರುತ್ತಿದ್ದರು. ಇಂದು ಕುಡಿತಕ್ಕೆ ಮೊರೆಹೋಗದೆ ಸರಿಯಾಗಿ ನಡೆಯುವವನನ್ನು ಗುಂಪುಗೂಡಿ ನೋಡುವ ಪರಿಸ್ಥಿತಿ ಉಂಟಾಗುತ್ತಿದೆ. ಮದ್ಯದ ದೊರೆಗಳು, ಮಟಕಾ ದೊರೆಗಳು ಮುಂತಾದವರು ರಾಜಕೀಯ ವ್ಯವಸ್ಥೆಯ ಮೇಲೆ ಹತೋಟಿ ಸಾಧಿಸ ಹಾಗೆ ಬೆಳೆದಿದ್ದಾರೆ. ದುಶ್ಚಟಗಳು ಮನುಷ್ಯನನ್ನು ಆಳುವಾಗ, ಉಳ್ಳವರು ಬಡವರ ಬಗ್ಗೆ ಚಿಂತಿಸದೆ ಇರುವಾಗ, ಸರ್ಕಾರಗಳು ಬರಿ ತಮ್ಮ ಅಸ್ತಿತ್ವಕ್ಕೇ ಹೆಣಗುವಾಗ ಅರ್ಥಶಾಸ್ತ್ರಕ್ಕೆ ಮಾನವೀಯ ಮುಖ ತರುವುದೆಲ್ಲಿಂದ?

ಬಲಿಷ್ಠರ ನೈತಿಕಪ್ರಜ್ಞೆ ಅಧೋಗತಿಗೆ ಇಳಿದಿದೆ. ಅವರ ಮನಸ್ಸಿನಲ್ಲೇ ಮಾಲಿನ್ಯ ತುಂಬಿದೆ. ಅವರು ತಮ್ಮ ಕಾರ್ಖಾನೆಗಳ ವಿಷಯುಕ್ತ ಕೊಳೆಯನ್ನು ನದಿಗಳಿಗೆ ಬಿಟ್ಟು ಜನರ ನೀರು ಕುಡಿಯುವ ಹಕ್ ಕಸಿದುಕೊಳ್ಳುತ್ತಿದ್ದಾರೆ. ವಾಯುಮಾಲಿನ್ಯ ಮಾಡುತ್ತ ಉಸಿರಾಡುವ ಹಕ್ಕನ್ನು ಕಸಿದುಕೊಳ್ಳುತ್ತಿದ್ದಾರೆ. ಬೆಳೆ ಭೂಮಿಯಲ್ಲಿ ಪ್ರಳಯದ ಕಸ ಹಾಕುತ್ತಿದ್ದಾರೆ. ಸ್ವಾರ್ಥಸಾಧನೆಗಾಗಿ ಜೀವವೈವಿಧ್ಯದಿಂದ ಕೂಡಿದ, ಲೋಕ ಸಂರಕ್ಷಕವಾದ ನಿತ್ಯ ಹರಿದ್ವರ್ಣದ ಬೃಹತ್ ಅರಣ್ಯಗಳನ್ನು ನಾಶ ಮಾಡುತ್ತಿದ್ದಾರೆ. ಕೊನೆಗೆ ಈ ಅನಿಷ್ಟಗಳಿಗೆ ತಾವೂ ಬಲಿಯಾಗುತ್ತಾರೆ!

ಇಡೀ ಜಗತ್ತಿನ ಎಲ್ಲ ಒಳ್ಳೆಯದರ ಮತ್ತು ಪ ಪಂಚಮಹಾಭೂತಗಳ ಸಂರಕ್ಷಣೆಗಾಗಿ ದೇವರು ಮಾನವನನ್ನು ಧರ್ಮದರ್ಶಿಯನ್ನಾಗಿ ನೇಮಿಸಿದ್ದಾನೆ ಎಂದು ಇಸ್ಲಾಂ ಹೇಳುತ್ತದೆ. ಆದರೆ ಮಾನವ ಮಾಡುತ್ತಿರುವುದೇನು?

"ಒಂದು ಕಾಲ ಬರುವುದು, ಆ ಕಾಲದ ಜನ ಇಸ್ಲಾಮಿನ ಹೆಸರು ಹೊರತಾಗಿ ಬೇರೇನೂ ಬಾಕಿ ಉಳಿಯಲಾರದು ಮತ್ತು ಕುರಾನಿನ ಲಿಪಿಗಳಲ್ಲದೆ ಮತ್ತೇನೂ ಬಾಕಿ ಉಳಿಯಲಾರದು. ಅವರ ಮಸೀ ಜನರಿಂದ ತುಂಬಿರುವುದು. ಆದರೆ ಅದು ಸತ್ಯಮಾರ್ಗದರ್ಶನದಿಂದ ಶೂನ್ಯವಾಗಿರುವುದು. ಅವ ಧರ್ಮಪಂಡಿತರು ಗಗನದ ಕೆಳಗೆ ಅತ್ಯಂತ ನೀಚರಾಗಿರುವರು. ಎಲ್ಲಾ ವಿಧದ ಷಡ್ಯಂತ್ರಗಳು ಅವರಿಂದಲೇ ಆರಂಭಗೊಳ್ಳುವವು ಮತ್ತು ಅವರ ಕಡೆಗೆ ಮರಳುವವು" ಎಂದು ಪೈಗಂಬರರು ತಿಳಿಸಿರುವುದಾಗಿ ಹಜರತ್ ಅಲಿ ಅವರು ಹೇಳಿದ್ದ ದಾಖಲಿಸಲಾಗಿದೆ. ಈ ಪರಿಸ್ಥಿತಿ ಜಗತ್ತಿನ ಎಲ್ಲ ಧರ್ಮಗಳಲ್ಲೂ ಕಾಣಿಸಿಕೊಂಡಿದೆ. ಧರ್ಮದ ಬೆಳಕಿ ಜಾಗದಲ್ಲಿ ಮತಾಂಧತೆ ಹೆಡೆಯೆತ್ತಿದೆ. ಇದರಿಂದ ಪಾರಾಗುವುದು ಹೇಗೆ?

ಕ್ರಿಸ್ತಶಕ 812 ರಲ್ಲಿ ಅಬೂ ಅಲಿ ಸಕೀಕ್ ಎಂ ಸೂಫಿಸಂತ ಇಬ್ರಾಹಿಂ ಎಂಬವರ ಜೊತೆ ನಡೆಸಿದ ಸಂವಾದವಿದು:

ಅಬೂ ಅಲಿ: ನಿನ್ನ ಉಪಜೀವನ ಹೇಗೆ ನಡೆಯುತ್ತಿದೆ?

ಇಬ್ರಾಹಿಂ: ನನ್ನ ಕೈಲಾದುದನ್ನು ಮಾಡುತ್ತೇನೆ. ದೊರೆತದ್ದಕ್ಕೆ ದೇವರನ್ನು ವಂದಿಸುತ್ತೇನೆ. ಏನೂ ದೊರೆಯದಿದ್ದರೆ ಮುಂದೆ ಒಳ್ಳೆಯದಾಗಬಹುದೆಂದು ತಾಳ್ಮೆಯಿಂದ ನಂಬಿಕೊಂಡಿರುತ್ತೇನೆ.

ಅಬೂ ಅಲಿ: ಇದನ್ನು ನಮ್ಮೂರಿನ ನಾಯಿಗಳ ಮಾಡುತ್ತವೆ.

ಇಬ್ರಾಹಿಂ: ಹಾಗಾದರೆ ನೀನೇನು ಮಾಡುತ್ತೀಯೆ

ಅಬೂ ಅಲಿ: ಏನಾದರೂ ಸಿಕ್ಕಿದರೆ ಬಡಬಗ್ಗರಿ ಸಹಾಯ ಮಾಡುತ್ತೇನೆ. ಏನೂ ಸಿಗದಿದ್ದರೆ ದೇವರಿಗ ವಂದಿಸುತ್ತೇನೆ.

ನಮ್ಮ ಒಳ್ಳೆಯತನವೆಲ್ಲ ಇಬ್ರಾಹಿಂ ಪ್ರಜ್ಞೆಗೆ ನಿಲ್ಲುತ್ತದೆ. ಆದರೆ ನಾವು ಮುಂದುವರಿಯಬೇಕಾದು ಅಬೂ ಅಲಿ ಪ್ರಜ್ಞೆಗೆ; ಸಾಮಾಜಿಕ ಪ್ರಜ್ಞೆಗೆ. ಸರ್ಕಾರ ಮತ್ತು ಉಳ್ಳವರು ಸೇರಿ ಬಡವರ ಮೂಲಭೂತ ಅವಶ್ಯಕತೆಗಳನ್ನು ಪೂರೈಸಲೇಬೇಕು. ಇದು ಬಡವರ ಹಕ್ಕಾಗಿದೆ ಎಂದು ಕುರಾನ್ ಸೂಚ್ಯವಾಗಿ ತಿಳಿಸಿದೆ.


"ಅಲ್ಲಾಹನ ಮಾರ್ಗದಲ್ಲಿ ತಮ್ಮ ಧನವನ್ನು ಯಾರು ವೆಚ್ಚ ಮಾಡುತ್ತಾರೋ; ಆಮೇಲೆ ತಾವು ವೆ ಮಾಡಿದ್ದನ್ನು ಹೇಳಿ ನಡೆಯುವುದಿಲ್ಲವೊ; ಹಾಗೂ (ತಾವು ಯಾರಿಗೆ ಧನ ಕೊಟ್ಟಿದ್ದಾರೊ ಅವರ) ಮನಃಕ್ಲೇಶವನ್ನುಂಟುಮಾಡುವುದಿಲ್ಲವೊ, ಅಂಥವರಿಗೆ ಅವರ ಪ್ರಭುವಿನ ಬಳಿ ಪ್ರತಿಫಲವಿದ್ದೇ ಇದೆ. ಅವರಿ ಏನೇನೂ ಭಯವಿಲ್ಲ, ಅವರು ದುಃಖಿಸಲಿಕ್ಕೂ ಇಲ್ಲ" (2-262) ಎಂದು ಕುರಾನ್ ಹೇಳುತ್ತದೆ. ಬಡವರ ಅಸಹಾಯಕತೆ ಸಾಮಾಜಿಕ ಸ್ವಾಸ್ಥ್ಯಕ್ಕೆ ಬಹುದೊಡ್ಡ ಸವಾಲಾಗಿದೆ. ಈ ಅಸಹಾಯಕತೆ ಸಮಾಜವನ್ನು ಯಾವ ಹಂತಕ್ಕೆ ಒಯ್ಯುತ್ತದೆ ಎಂಬುದನ್ನು ಹೇಳಲಿಕ್ಕಾಗುವುದಿಲ್ಲ. ಅಂತೆಯೆ ಈ ಅಸಹಾಯಕತೆಯನ್ನು ತಾತ್ಕಾಲಿಕವಾಗಿ


⇨0

ಮುತ್ತಿನ ಭಾಗ್ಯ ಮತ್ತು ಭಾರತೀಯರ ಢೋಂಗಿತನ

ಕಂಡಹಾಗೆ

• ಗೌರಿ ಲಂಕೇಶ್
editorlankesh@gmail.com






ಮುಖ್ಯಮಂತ್ರಿ ಸಿದ್ದರಾಮಯ್ಯನವರು ಬಡವರಿಗೆ ...ವಾಗಲೆಂದು 'ಅನ್ನ ಭಾಗ್ಯ', 'ಕ್ಷೀರ ಭಾಗ್ಯ', 'ಆರೋಗ್ಯ ...ಗ್ಯ', 'ಶಾದಿ ಭಾಗ್ಯ' ಎಂಬ ಹಲವಾರು ಯೋಜನೆಗಳನ್ನು ...ರಿಗೆ ತಂದಾಗ ಚಿಡ್ಡಿಗಳು ಒಂದು ಅಪಪ್ರಚಾರವನ್ನು ...ರಂಭಿಸಿದ್ದರು. ಅದೇನೆಂದರೆ "ಸಿದ್ದರಾಮಯ್ಯನವರಿಗೆ ...ರ್ ಗರ್ಲ್‌ಫ್ರೆಂಡ್ ಇದ್ದಾಳೆ. ಆಕೆಯ ಹೆಸರು ಭಾಗ್ಯ ...ತ. ಆದಕ್ಕೇ ಮುಖ್ಯಮಂತ್ರಿ ತಮ್ಮ ಎಲ್ಲಾ ಯೋಜನೆಗಳಿಗೆ ...ಯ ಹೆಸರನ್ನೇ ಇಡುತ್ತಿದ್ದಾರೆ" ಎಂಬುದು. ಇರಲಿ; ...ಲವಾರು 'ಭಾಗ್ಯ'ಗಳನ್ನು ಜನರಿಗೆ ಕೊಟ್ಟಿರುವ ಸಿದ್ದು ... ತಾನೇ 'ಮುತ್ತು ಭಾಗ್ಯ'ಕ್ಕೆ ಪಾತ್ರರಾಗುತ್ತೇನೆಂದು ...ಸುಮನಸ್ಸಿನಲ್ಲೂ ಅಂದುಕೊಂಡಿರಲಿಕ್ಕಿಲ್ಲ. ಆದರೆ ಕೆಲ ...ನಗಳ ಹಿಂದೆ ಅವರಿಗೆ 'ಮುತ್ತು ಭಾಗ್ಯ' ಪ್ರಾಪ್ತವಾಯಿತು.

ಮೂಲತಃ ಸಿದ್ದರಾಮಯ್ಯನವರ ವರುಣಾ ಕ್ಷೇತ್ರದವರಾದ ...ರಿಜಾ ಶ್ರೀನಿವಾಸ್ ಮದುವೆಯಾದ ನಂತರ ...ಕ್ಕಮಗಳೂರು ಜಿಲ್ಲೆಯಲ್ಲಿ ವಾಸಿಸುತ್ತಿದ್ದರು. ಕುರುಬ ...ಮುದಾಯದವರಾದ ಗಿರಿಜಾ ಇತ್ತೀಚೆಗೆ ಕಾಂಗ್ರೆಸ್ ...ಭ್ಯರ್ಥಿಯಾಗಿ ತರೀಕೆರೆ ತಾಲೂಕು ಪಂಚಾಯತಿಗೆ ...ದಸ್ಯೆಯಾಗಿ ಆಯ್ಕೆಯಾಗಿದ್ದಾರೆ. ಗಿರಿಜಾ ತರಹ ತಾಲೂಕು ...ತ್ತು ಜಿಲ್ಲಾ ಪಂಚಾಯತಿಗಳಿಗೆ ಗೆದ್ದ ಕುರುಬ ...ಮುದಾಯದವರನ್ನು ಅಭಿನಂದಿಸಲು ಬೆಂಗಳೂರಿನಲ್ಲಿ ...ರುಬ ಸಂಘವು ಕಾರ್ಯಕ್ರಮವನ್ನು ಹಮ್ಮಿಕೊಂಡಿತ್ತು. ...ದು ಸಿದ್ದರಾಮಯ್ಯನವರ ಪಕ್ಕ ನಿಂತಿದ್ದ ಗಿರಿಜಾ ಅವರಿಗೆ ...ನ್ನಿಸಿತೋ, ಇದ್ದಕ್ಕಿದ್ದಂತೆ ಆಕೆ ಸಿದ್ದರಾಮಯ್ಯನವರ ಗಲ್ಲಕ್ಕೆ ...ತ್ತು ನೀಡಿದರು. ಏನಾಗುತ್ತಿದೆ ಎಂದು ಸ್ವತಃ ...ದ್ದುಗೆ ಅರ್ಥವಾಗುವ ಮುನ್ನವೇ ಗಿರಿಜಾ ...ದಿಕೆಯಿಂದ ನಾಪತ್ತೆಯಾದರು. ಕೆಲಕ್ಷಣಗಳ ...ತರ ಸಿದ್ದು ತಮ್ಮ ಕೆನ್ನೆಯನ್ನು ಸವರಿಕೊಂಡು ...ರ್ಯಕ್ರಮವನ್ನು ಮುಂದುವರೆಸಿದರು.

ಇಷ್ಟಾಗಿದ್ದೇ ತಡ, ಟಿವಿ ಚಾನೆಲ್‌ಗಳಲ್ಲಿ "ಸಿದ್ದುಗೆ ...ರುಬರ ರಾಣಿಯ ಮುತ್ತು", "ಸಿದ್ದು ಕಿಸ್ ...ಸ್ ಕಿ ಬಾತ್" ಎಂದೂ, ಸಾಮಾಜಿಕ ...ಾಲತಾಣಗಳಲ್ಲಿ "ಮುತ್ತು ಮಂತ್ರಿ ಸಿದ್ದರಾಮಯ್ಯ", ...ಮುತ್ತು ಬೇಕಾ ಮುತ್ತು" ಎಂದೆಲ್ಲಾ ...ಪಪ್ರಚಾರವನ್ನು ಶುರುಹಚ್ಚಿಕೊಳ್ಳಲಾಯಿತು. ...ಮ್ಮದಿಯ ಸಂಗತಿ ಯಾವುದೆಂದರೆ ಮುದ್ರಣ ...ಾಧ್ಯಮಗಳು ಇಂತಹ ಅತಿರೇಕಕ್ಕೆ ಹೋಗದೆ ವಸ್ತುನಿಷ್ಠವಾಗಿ ...ಕರಣವನ್ನು ವರದಿ ಮಾಡಿದ್ದು.

ಗಿರಿಜಾ ಅವರು ಸಿದ್ದುಗೆ ಮುತ್ತು ಕೊಟ್ಟಿದ್ದು ...ಭಿಮಾನದಿಂದ, ತನ್ನ ಸಮುದಾಯದ 'ಸಿಂಹ' ಎಂಬ ...ಹೆಮ್ಮೆಯಿಂದ, ಭಾವುಕ ಮಮತೆಯಿಂದ. ಆಕೆ ...ಾರ್ವಜನಿಕವಾಗಿ ಮುತ್ತು ಕೊಟ್ಟಿದ್ದರಲ್ಲಿ ಯಾವ ಲೈಂಗಿಕ ...ದ್ದೇಶವಾಗಲಿ, ಅಶ್ಲೀಲತೆಯಾಗಲಿ, ಅಸಹ್ಯವಾಗಲಿ ...ರಲಿಲ್ಲ. ಆಕೆಯೇ ಆನಂತರ ವಿವರಿಸಿದಂತೆ ಆಕೆಯ ...ಾಲಿಗೆ ಸಿದ್ದರಾಮಯ್ಯ "ಅಪ್ಪಾಜಿ ಸಮಾನ." ಸಿದ್ದು ಕೂಡ ...ಗಿರಿಜಾ ತನ್ನ ಮಗಳಿದ್ದಂತೆ ಎಂದು ಪ್ರತಿಕ್ರಿಯಿಸಿದರು.




ಆದರೆ ಭಾರತೀಯ ಸಮಾಜ ಎಂಥ ಢೋಂಗಿ ಸಮಾಜ ...ಎಂದರೆ ಇಲ್ಲಿ ಸಾರ್ವಜನಿಕವಾಗಿ ಪ್ರೀತಿ, ಪ್ರೇಮವನ್ನು ...ಪ್ರದರ್ಶಿಸಬಾರದು. ಹುಡುಗ ಹುಡುಗಿ ಕೈಕೈ ಹಿಡಿದು ...ಡಾಡಿದರೆ, ಅಪ್ಪಿಕೊಂಡರೆ, ಗಲ್ಲಕ್ಕೆ ಮುತ್ತಿಟ್ಟರೆ ಅದು ...ನಮ್ಮ 'ಸಂಸ್ಕೃತಿ'ಯ ವಿರುದ್ಧದ ಕ್ರಿಯೆ ಆಗುತ್ತದೆ. ಇದೆಂತಹ ...ಢೋಂಗಿತನ ಎಂಬುದು ಒಂದುಕ್ಷಣ ಯೋಚಿಸಿ. ಇತ್ತೀಚೆಗೆ ...ಹಳೇಬೀಡು ದೇವಸ್ಥಾನಕ್ಕೆ ಭೇಟಿ ನೀಡಿದ ಮಿತ್ರ ವಿಶ್ವಾಸ್ ...ಮಿತ್ರ್ ಹೀಗೊಂದು ಎಸ್‌ಎಮ್‌ಎಸ್ ನನಗೆ ಕಳುಹಿಸಿದ: ...'ಅಚ್ಚರಿಯ ಸಂಗತಿ ಯಾವುದೆಂದರೆ ಹಳೇಬೀಡು ...ದೇವಸ್ಥಾನದ ಆವರಣದಲ್ಲೇ ಕಾಮಸೂತ್ರ ಪುಸ್ತಕವನ್ನು ...ಮಾರಾಟ ಮಾಡಲಾಗುತ್ತಿತ್ತು, ಆ ಪುಸ್ತಕದಲ್ಲಿ ವಿವಿಧ ...ಲೈಂಗಿಕ ಭಂಗಿಗಳ ಚಿತ್ರಗಳಿದ್ದವು. ಸುಮಾರು 900 ...ವರ್ಷಗಳಷ್ಟು ಹಳೆಯದಾದ ಈ ದೇವಸ್ಥಾನದ ಮೇಲೆಲ್ಲ ...ವಿವಿಧ ಲೈಂಗಿಕ ಭಂಗಿಗಳ ಕೆತ್ತನೆಗಳಿವೆ. ಇದೆಲ್ಲದರ ಅರ್ಥ ...ಇಷ್ಟೇ: ಆಗಿನ ಕಾಲದಲ್ಲಿ ಭಾರತೀಯರು - ಅದರಲ್ಲೂ

ಹಿಂದೂಗಳು - ಲೈಂಗಿಕ ವಿಷಯಗಳ ಬಗ್ಗೆ ಮುಕ್ತ ಮನಸ್ಥಿತಿಯನ್ನು ಹೊಂದಿದ್ದರು." ಆ ಮುಕ್ತಮನಸ್ಥಿತಿಯು ಮಾಯವಾಗಿದ್ದು ಇಲ್ಲಿ ಮೇಲುಜಾತಿಯ, ಪುರುಷಪ್ರಧಾನವಾದ ಮನುಶಾಸ್ತ್ರವನ್ನು ಜಾರಿಗೆ ತಂದಾಗ.

1983ರಲ್ಲಿ ದೆಹಲಿಯಲ್ಲಿ ನ್ಯಾಮ್ (ನಾನ್ ಅಲೈಂಡ್ ಮೂವ್‌ಮೆಂಟ್)ನ ಶೃಂಗಸಭೆ ನಡೆಯಿತು. ಆಗ ನಾನು ದೆಹಲಿಯಲ್ಲಿ ಪತ್ರಿಕೋದ್ಯಮದ ವಿದ್ಯಾರ್ಥಿನಿ ಆಗಿದ್ದೆ ಮತ್ತು ನಮ್ಮ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮಾಸ್ ಕಮ್ಯೂನಿಕೇಶನ್ ನಮ್ಮೆಲ್ಲರನ್ನು ಆ ಶೃಂಗಸಭೆ ಕುರಿತು ವರದಿ ಮಾಡಲು ಕಳುಹಿಸಿತ್ತು. ಅಲ್ಲಿಯತನಕ ನ್ಯಾಮ್‌ನ ಅಧ್ಯಕ್ಷರಾಗಿದ್ದ ಕ್ಯೂಬಾದ ಫೇಡಲ್ ಕ್ಯಾಸ್ಟ್ರೋ ಆ ವರ್ಷ ತಮ್ಮ ಹುದ್ದೆಯನ್ನು ಭಾರತದ ಪ್ರಧಾನಿ ಇಂದಿರಾ ಗಾಂಧಿಗೆ



ಹಸ್ತಾಂತರಿಸಬೇಕಿತ್ತು. ಅದಕ್ಕೆಂದು ಅವರು ಸಾಂಕೇತಿಕವಾಗಿ ಒಂದು ಸಣ್ಣ ಸುತ್ತಿಗೆಯನ್ನು ಇಂದಿರಾ ಅವರ ಕೈಗೆ ಕೊಡಬೇಕಿತ್ತು. ಇಂದಿರಾ ಅವರು ಆ ಸುತ್ತಿಗೆಯನ್ನು ಪಡೆಯಲು ತಮ್ಮ ಕೈಚಾಚಿದರು. ಆದರೆ ಫೇಡಲ್ ಕ್ಯಾಸ್ಟ್ರೋ ಇದ್ದಕ್ಕಿದ್ದಂತೆ ತಮ್ಮ ಬಾಹುಗಳನ್ನು ಚಾಚಿ ಇಂದಿರಾ ಅವರನ್ನು ಗಟ್ಟಿಯಾಗಿ ಅಪ್ಪಿಕೊಂಡರು. ಮಾರನೆಯ ದಿನ ಎಲ್ಲಾ ಪತ್ರಿಕೆಗಳಲ್ಲೂ ನಾಚಿಕೆಯಿಂದ ಮುಗುಳ್ನಗುತ್ತಿದ್ದ ಚಿಕ್ಕ ಆಕಾರದ ಇಂದಿರಾ ಅವರನ್ನು ಅಜಾನುಬಾಹು ಕ್ಯಾಸ್ಟ್ರೋ ತಮ್ಮ ತೋಳುಗಳಲ್ಲಿ ಬಂಧಿಸಿರುವ ಫೋಟೋ ಪ್ರಕಟಗೊಂಡಿತು. ಅದನ್ನು ನೋಡಿ ಕೆಲವರು "ಹೀಗೆ ಸಾರ್ವಜನಿಕವಾಗಿ ಅಪ್ಪಿಕೊಳ್ಳುವುದು ಭಾರತೀಯ




ಸಂಸ್ಕೃತಿಯಲ್ಲ, ಫೇಡಲ್ ಕ್ಯಾಸ್ಟ್ರೋ ನಮ್ಮ ಸಂಸ್ಕೃತಿಗೆ ಅವಮಾನ ಮಾಡಿದ್ದಾರೆ" ಎಂದೆಲ್ಲ ಕಿಡಿಕಾರಿದ್ದರು. ವಾಸ್ತವವಾಗಿ ಇಂದಿರಾ ಗಾಂಧಿ ಮತ್ತು ಫೇಡಲ್ ಕ್ಯಾಸ್ಟ್ರೋ ನಡುವೆ ಎಂತಹ ಸ್ನೇಹವಿತ್ತೆಂದರೆ ಆ ಅಪ್ಪುಗೆ ಗಿರಿಜಾ ಅವರು ಸಿದ್ದುಗೆ ಕೊಟ್ಟ ಮುತ್ತಿನಷ್ಟೇ ಸರಳವೂ ಅಮಾಯಕವೂ ಆಗಿತ್ತು. ಅದಕ್ಕೆ ಹೋಲಿಸಿದರೆ ನಮ್ಮ ಈಗಿನ ಪ್ರಧಾನಿ ನರೇಂದ್ರ ಮೋದಿ ತನ್ನ ದಪ್ಪನೆಯ ಹೊಟ್ಟೆಯನ್ನು ಹೊತ್ತು ವಿದೇಶಿ ನಾಯಕರ ಮೈಮೇಲೆ ಬೀಳುವವರಂತೆ ಅವರನ್ನು ಅಪ್ಪಿಕೊಳ್ಳುವುದು ನಿಜವಾಗಲೂ ಅಸಹ್ಯ ಹುಟ್ಟಿಸುತ್ತದೆ.

ನ್ಯಾಮ್ ಸಭೆಗೂ ಮೂರು ವರ್ಷಗಳ ಮುನ್ನ ಬ್ರಿಟನ್ನಿನ ಪ್ರಿನ್ಸ್ ಚಾರ್ಲ್ಸ್ ಭಾರತಕ್ಕೆ ಭೇಟಿ ನೀಡಿದ್ದ. ಆಗಿನ್ನೂ 32ರ ಪ್ರಾಯದ ಚಾರ್ಲ್ಸ್ ಸುರಸುಂದರಾಂಗನೇನಾಗಿರಲಿಲ್ಲ, ಆದರೂ ಪತ್ರಿಕೆಗಳು ಆತನನ್ನು 'ಜಗತ್ತಿನ ಅತಿ ಅನುರೂಪನಾದ ರಾಜಕುವರ' ಎಂದೇ ಬಣ್ಣಿಸುತ್ತಿದ್ದವು.

ಚಾರ್ಲ್ಸ್ ಮುಂಬೈನಲ್ಲಿ ಒಂದು ಸಿನಿಮಾ ಸ್ಟುಡಿಯೋಗೆ ಭೇಟಿ ನೀಡಿದಾಗ ಆತನಿಗೆ ಆರತಿ ಎತ್ತಿ ಸ್ವಾಗತಿಸಲು ಪದ್ಮಿನಿ ಕೊಲ್ಹಾಪುರೆ ಎಂಬ ಯುವನಟಿಯನ್ನು ಆಯ್ಕೆ ಮಾಡಲಾಗಿತ್ತು. ಆರತಿ ಎತ್ತಿದ ಪದ್ಮಿನಿಗೆ ಏನನ್ನಿಸಿತೋ, ಆಕೆ ಅನಿರೀಕ್ಷಿತವಾಗಿ ಚಾರ್ಲ್ಸ್‌ನ ಗಲ್ಲಕ್ಕೆ ಮುತ್ತಿಕ್ಕಿದಳು. ಹಿಂದೂ ಸಂಪ್ರದಾಯವಾದಿಗಳು "ಪದ್ಮಿನಿ ಹಿಂದೂ ಸಂಸ್ಕೃತಿಗೆ ಅವಮಾನ ಮಾಡಿದ್ದಾಳೆ" ಎಂದು ಬೊಬ್ಬೆಹಾಕಿದ್ದವು.

ದಕ್ಷಿಣ ಆಫ್ರಿಕಾದ ನಾಯಕ ನೆಲ್ಸನ್ ಮಂಡೇಲಾ ಮತ್ತು ನಟಿ ಶಬಾನಾ ಆಜ್ಮಿ ಕುರಿತೂ ಇಂತಹದ್ದೇ ವಿವಾದ ಎದ್ದಿತ್ತು. ಹಲವಾರು ವರ್ಷಗಳನ್ನು ಒಂಟಿ ಸೆರೆವಾಸದಲ್ಲಿ ಕಳೆದಿದ್ದ ಮಂಡೇಲಾ ಅವರನ್ನು ಬಿಡುಗಡೆ ಮಾಡಿದಾಗ ಜಗತ್ತಿನ ಸ್ವಾತಂತ್ರ್ಯಪ್ರಿಯರು ಅದನ್ನು ಸ್ವಾಗತಿಸಿದ್ದರು. ಆಗ ದಕ್ಷಿಣ ಆಫ್ರಿಕಾದ ಪತ್ರಿಕೆಯೊಂದು ಮಂಡೇಲಾ ಅವರಿಗೆ ಅಭಿನಂದನೆ ಸಲ್ಲಿಸಲು ಮುಂದಾಯಿತು. ಆಗ ಹಿಂದಿ ಸಿನಿಮಾ ನಟಿ ಶಬಾನಾ ಆಜ್ಮಿ ಅಂತಾರಾಷ್ಟ್ರೀಯ ಮಟ್ಟದಲ್ಲಿ ಗಮನ ಸೆಳೆದಿದ್ದರಿಂದ ಆ ಸಮಾರಂಭಕ್ಕೆ ಆಕೆಯನ್ನೂ ಆಹ್ವಾನಿಸಲಾಗಿತ್ತು. ಶಬಾನಾಳ ತಂದೆ ವಯಸ್ಸಾಗಿದ್ದ ಮಂಡೇಲಾ ಅವರು ಆಕೆಯ ಕೆನ್ನೆಗೆ ಮುತ್ತಿಟ್ಟರು. ಅದರಿಂದ ಸಂತೋಷಗೊಂಡ ಶಬಾನಾ ಕೂಡ ಮಂಡೇಲಾರ ಗಲ್ಲಕ್ಕೆ ಮುತ್ತು ಕೊಟ್ಟರು. ಆಗ ಸಂಪ್ರದಾಯವಾದಿ ಮುಸಲ್ಮಾನರೆಲ್ಲಾ ಕೆಂಡಕಾರಿದರು. ಅದರಲ್ಲೂ ಬದ್ರುಲ್ ಇಸ್ಲಾಮ್ ಎಂಬಾತ ಪಯನಿಯರ್ ಎಂಬ ಇಂಗ್ಲಿಷ್ ಪತ್ರಿಕೆಗೆ ಬರೆದ ಪತ್ರದಲ್ಲಿ "ಒಬ್ಬ ಮುಸಲ್ಮಾನನಾಗಿ ಭಾರತೀಯ ಮುಸ್ಲಿಮ್ ಮಹಿಳೆಗೆ ಡಾ. ನೆಲ್ಸನ್ ಮಂಡೇಲಾ ಅವರು ಸಾರ್ವಜನಿಕವಾಗಿ ಮುತ್ತುಕೊಡುತ್ತಿರುವ ಚಿತ್ರವನ್ನು ನೋಡಿ ನನಗೆ ಅಸಹ್ಯವಾಗಿದೆ. ಇದು ಇಸ್ಲಾಮ್ ಸಂಸ್ಕೃತಿಗೂ, ಭಾರತೀಯ ಸಂಸ್ಕೃತಿಗೂ ಹೊಂದುವಂತದ್ದಲ್ಲ" ಎಂದು ಟೀಕಿಸಿದ್ದ.

ಅದಾದನಂತರ ಬಂದದ್ದು ಮತ್ತೋರ್ವ ಹಿಂದಿ ನಟಿ ಶಿಲ್ಪಾ ಶೆಟ್ಟಿಯ ಸರದಿ. ಭಾರತದಲ್ಲಿ ಏಡ್ಸ್ ರೋಗದ ಬಗ್ಗೆ ಜನರಲ್ಲಿ ಅರಿವು ಮೂಡಿಸುವ ಯೋಜನೆಗೆ ಹಾಲಿವುಡ್ ನಟ ರಿಚಾರ್ಡ್ ಗೇರ್ ಮತ್ತು ಶಿಲ್ಪಾ ಶೆಟ್ಟಿ ಆಯ್ಕೆಯಾಗಿದ್ದರು. ಒಂದು ಕಾರ್ಯಕ್ರಮದಲ್ಲಿ ಗೇರ್ ಶಿಲ್ಪಾಳ ಗಲ್ಲಕ್ಕೆ ಮುತ್ತಿಕ್ಕಿದ್ದರು. ಆಗ ಸ್ವತಃ ಬಿಜೆಪಿಯ ಅಧ್ಯಕ್ಷನಾಗಿದ್ದ ನಿತಿನ್ ಗಡ್ಕರಿ "ಇದು ಭಾರತೀಯ ಸಂಸ್ಕೃತಿಯಲ್ಲ, ಇಂತಹ ಅಸಹ್ಯವನ್ನು ಪ್ರೋತ್ಸಾಹಿಸಬಾರದು" ಎಂದು ಗುಡುಗಿದ್ದರು.




ಸಾರ್ವಜನಿಕವಾಗಿ ತುಟಿಗೆ ಇರಲಿ, ಗಲ್ಲಕ್ಕೂ ಅಭಿಮಾನದಿಂದಲೋ, ಹೆಮ್ಮೆಯಿಂದಲೋ ಮುತ್ತು ಕೊಡುವುದು ಅಸಹ್ಯ ಎಂಬುದು ಈ ಸಂಪ್ರದಾಯವಾದಿಗಳ ವಾದ. ಇರಲಿ, ಆದರೆ ಈ ಮುತ್ತು ಕೊಡುವ ಪ್ರಕ್ರಿಯೆ ಹುಟ್ಟಿದ್ದು ಎಲ್ಲಿ ಎಂದು ಕೆದಕುತ್ತಾ ಹೋದರೆ ಅಚ್ಚರಿಯ ವಿಷಯ ಗೊತ್ತಾಗುತ್ತದೆ. ಅದೇನೆಂದರೆ ಮುತ್ತು ಕೊಡುವ ಪ್ರಕ್ರಿಯೆ ಶುರುವಾಗಿದ್ದೇ ಭಾರತದಲ್ಲಿ!

ಅಮೆರಿಕದ ಟೆಕ್ಸಾಸ್‌ನಲ್ಲಿರುವ ಎ ಅಂಡ್ ಎಮ್ ವಿಶ್ವವಿದ್ಯಾಲಯದಲ್ಲಿ ಮಾನವಶಾಸ್ತ್ರಜ್ಞರಾಗಿ ಕೆಲಸ ಮಾಡುತ್ತಿರುವ ವಾನ್ ಬ್ರೆಯಂಟ್ ಎಂಬುವವರು 'ಮುತ್ತಿನ ಇತಿಹಾಸ' ಕುರಿತಂತೆ ಹಲವಾರು ವರ್ಷಗಳಿಂದ ಸಂಶೋಧನೆ ಮಾಡುತ್ತಿದ್ದಾರೆ. ಬ್ರೆಯಂಟ್ ಪ್ರಕಾರ 'ಮುತ್ತು' ಕೊಡುವ ಬಗ್ಗೆ ಜಗತ್ತಿನಲ್ಲೇ ಮೊದಲು ಪ್ರಸ್ತಾಪವಾಗಿರುವುದು ಸುಮಾರು 3,500 ವರ್ಷಗಳ ಹಿಂದೆ ಸಂಸ್ಕೃತದಲ್ಲಿ ಬರೆದ


ವೇದಗಳಲ್ಲಿ. ಅದಾದ ಮೇಲೆ ಸುಮಾರು 500 ವರ್ಷಗಳ ನಂತರ ಬಂದ ಮಹಾಭಾರತದಲ್ಲಿ ತುಟಿಗೆ ತುಟಿ ಇಟ್ಟು ಮುತ್ತು ಕೊಡುವ ಬಗ್ಗೆ ವಿವರಗಳು ಕಾಣಿಸಿಕೊಂಡವು. ಜಗತ್ತಿಗೆ ಕಾಮದ ಸೂತ್ರಗಳನ್ನು ಹೇಳಿಕೊಟ್ಟ ವಾತ್ಸಾಯನನ 'ಕಾಮಸೂತ್ರ'ದಲ್ಲಿ ವಿವಿಧ ತರಹದ 'ಮುತ್ತು'ಗಳನ್ನು ಪಟ್ಟಿ ಮಾಡಲಾಗಿದೆ.

ಸಮುದ್ರವನ್ನು, ಬೆಟ್ಟಗಳನ್ನು ದಾಟಿ ಹೊರಗೆ ಹೋಗುವುದನ್ನೇ ನಿಷೇಧ ಮಾಡಿದ ಮನುವಿನ ಭಾರತದಿಂದ ಈ ಮುತ್ತು ಕೊಡುವ ಪ್ರಕ್ರಿಯೆ ಹೊರಗೆ ಹೋಗಿದ್ದು ಹೇಗೆ ಎಂಬುದರ ಬಗ್ಗೆ ಬ್ರೆಯಂಟ್ ಹೀಗೆ ಹೇಳುತ್ತಾರೆ: "ಕ್ರಿಸ್ತ ಪೂರ್ವ 326ರಲ್ಲಿ ಅಲೆಕ್ಸಾಂಡರ್ ಭಾರತದ ಮೇಲೆ ದಾಳಿ ಇಟ್ಟಾಗ ಇಲ್ಲಿನ ಪಂಜಾಬಿನ ಸುತ್ತಮುತ್ತಲ ಪ್ರದೇಶಗಳಲ್ಲಿ ವಾಸಿಸುತ್ತಿದ್ದ ಜನ ಪ್ರೇಮ, ಕಾಮವನ್ನು ವ್ಯಕ್ತಪಡಿಸಲು ಪರಸ್ಪರ ತುಟಿಗಳಿಗೆ ಮುತ್ತಿಕ್ಕುತ್ತಿದ್ದರು ಎಂದು ಅಲೆಕ್ಸಾಂಡರ್ ಮತ್ತು ಆತನ ಸೈನಿಕರ ಅರಿವಿಗೆ ಬಂತು. ಅವರು ಇಲ್ಲಿಂದ ತಮ್ಮ ದೇಶಕ್ಕೆ ವಾಪಸ್ ಹೋಗುವಾಗ ಈ ಅರಿವನ್ನು ತಮ್ಮೊಂದಿಗೆ ತೆಗೆದುಕೊಂಡು ಹೋದರು. ಅವರ ಮೂಲಕ ಮುತ್ತು ಕೊಡುವಿಕೆಯ ಬಗೆಗಿನ ಅರಿವು ಜಗತ್ತಿನ ಇತರೆ ಪ್ರದೇಶಗಳಿಗೆ ಹಬ್ಬಿತು."

ಭಾರತೀಯರಿಗೆ ಸಾವಿರಾರು ವರ್ಷಗಳ



ಹಿಂದೆಯೇ ಪ್ಲಾಸ್ಟಿಕ್ ಸರ್ಜರಿ ಮಾಡಲು ಗೊತ್ತಿತ್ತು, ಕ್ಲೋನಿಂಗ್ ತಂತ್ರಜ್ಞಾನ ಇಲ್ಲಿತ್ತು, ಭೂಮಿಯಿಂದ ಇತರೆ ಗ್ರಹಗಳಿಗೆ ಹಾರಬಲ್ಲ ಸ್ಯಾಟಲೈಟ್‌ಗಳಿದ್ದವು, ಆಗಲೇ ನಮ್ಮವರಿಗೆ ಅಣುಬಾಂಬ್ ತಯಾರಿಸುವ ವಿದ್ಯೆ ಗೊತ್ತಿತ್ತು ಎಂಬೆಲ್ಲ ಸುಳ್ಳು ಭ್ರಮೆಗಳಲ್ಲಿ ಮುಳುಗಿರುವ ಬದಲು ಭಾರತೀಯರು ಈ ಜಗತ್ತಿಗೆ ನಿಜವಾಗಲೂ ಕೊಟ್ಟಿರುವ ಕೊಡುಗೆಗಳ ಬಗ್ಗೆ ಹೆಮ್ಮೆ ಪಡುವುದು ಒಳ್ಳೆಯದೆನಿಸುತ್ತದೆ. ಉದಾಹರಣೆಗೆ ಜಗತ್ತಿಗೆ ನಮ್ಮ ಜನರು ಕೊಟ್ಟಿರುವ ಉತ್ತಮ ಕೊಡುಗೆಗಳಲ್ಲಿ 'ಶೂನ್ಯ'ದ ಪರಿಕಲ್ಪನೆ ಪ್ರಮುಖವಾದದ್ದು. ಹಾಗೆಯೇ ಚೆಸ್ ಆಟ ಕೂಡ. ಆದ್ದರಿಂದ ಮುತ್ತು ಕೊಡುವ ಬಗ್ಗೆ ಮುಜುಗರ ಪಟ್ಟುಕೊಳ್ಳುವ ಬದಲು ಈ ಜಗತ್ತಿಗೆ ನಾವು 'ಮುತ್ತಿನ ಭಾಗ್ಯ'ವನ್ನೂ ದಯಪಾಲಿಸಿದೆವು ಎಂದು ಹೆಮ್ಮೆ ಪಡಬೇಕಲ್ಲವೇ?!


ನ್ಯಾಯಮೂರ್ತಿ ಎಸ್.ಕೆ. ಮುಖರ್ಜಿ

ನ್ಯಾಯಾಂಗದ ಮೇಲಿನ ನಂಬಿಕೆ ಕುಸಿಯುತ್ತಿರುವ ಕಾಲಘಟ್ಟವಿದು. ತಮಿಳರಸಿ ಜಯಲಲಿತಾ, ನಟ ಭಯಂಕರ ಸಲ್ಮಾ ಖಾನ್ ಮತ್ತು ಹೆಣ್ಣು ಬಾಕ ರಾಘು ಸ್ವಾಮಿ ಪ್ರಕರಣದಲ್ಲಿ 'ಮೈಲಾರ್ಡ್'ಗಳು ನಡೆದುಕೊಂಡ ರೀತಿ ಈ ದೇ... ಕಾನೂನನ್ನು ಹೇಗೆ ಬೇಕೋ ಹಾಗೆ ತಿರುಚಬಹುದೆಂಬುದನ್ನು ತೋರಿಸಿದೆ. ದುರಂತವೆಂದರೆ, ಬದ್ಧತೆ ಎಂಬುದು ಭಾ... ನ್ಯಾಯದೇವರುಗಳಿಗೆ ಇಲ್ಲದಾಗಿದೆ; ತಪ್ಪು ಮಾಡಿದ ನ್ಯಾಯಾಧೀಶರಿಗೆ ಶಿಕ್ಷೆ ಎಂಬುದು ಇಲ್ಲದಾಗಿದೆ. ನ್ಯಾಯಾಂಗ ನಿಂದನೆ ಗುಮ್ಮ ತೋರಿ ಅನ್ಯಾಯ ಅರಗಿಸಿಕೊಳ್ಳಲಾಗುತ್ತಿದೆ. ಈಗ ರಾಜ್ಯ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ಎಸ್... ಮುಖರ್ಜಿ ಹಿಂದೂತ್ವದ ಹೆಡ್ಡಾಫೀಸಿನಂತಿರುವ ಉಡುಪಿಯ ಪೇಜಾವರ ಮಠದಲ್ಲಿ ನಿಂತು ದೇಶದ ಸಂವಿಧಾ... ಅಪಚಾರ ಮಾಡಿದ್ದಾರೆ. ಮನೆಮುರುಕ ಮತಾಂಧ ಪ್ರವಚನ ಬಿಗಿದಿದ್ದಾರೆ. ರಾಮಮಂದಿರ ಸ್ಥಾಪನೆ, ಹಿಂದೂ ಧ... ರಕ್ಷಣೆಗೆ ಕರೆ ಕೊಟ್ಟಿರುವ ಜಸ್ಟೀಸ್ ಮುಖರ್ಜಿ ತಾನು ಈ ನೆಲದ ಸಮಾನತೆಯ ಸಂವಿಧಾನಕ್ಕೆ ಪ್ರತಿಜ್ಞಾ ಬದ್ಧನೆಂಬುದ... ಪ್ರಜ್ಞಾಪೂರ್ವಕವಾಗೇ ಕಡೆಗಣಿಸಿದ್ದಾರೆ. ಮುಖರ್ಜಿಯ ಮಾತು ಕೇಳಿದರೆ ಈತ ದೇಶದ ಕಾನೂನು-ಕಟ್ಟಳೆ, ನಿ... ನಿಯಮ ಒಪ್ಪಿಕೊಂಡಂತೆ ಕಾಣುವುದಿಲ್ಲ. ಮನುಸ್ಮೃತಿಯನ್ನೆ ಸಂವಿಧಾನ ಮಾಡಿಕೊಂಡಂತಿರುವ ಜಸ್ಟೀಸ್ ಮುಖರ್ಜಿ... ಧಾರ್ಮಿಕ ಸ್ವಾತಂತ್ರ್ಯದ ಪಾಠ ಕಲಿಸುವ ಧೈರ್ಯ ಯಾರಿಗಿದೆ?!

ಮುಖ್ಯ ನ್ಯಾಯಮೂರ್ತಿ ಮುಖರ್ಜಿಯ ಮತಾಂಧ ಮಾತುಗಾರಿಕೆ


ಭಾರತ ಮತೀಯ ಸೈತಾನರ ಆಡಳಿತದಡಿಯಲ್ಲಿ ಬಸವಳಿಯುತ್ತಿದೆ! ಇಂಥ ವಿಷಮ ಪರಿಸ್ಥಿತಿಯಲ್ಲಿ ಅಸಹಾಯಕರಿಗೆ, ಅಮಾಯಕರಿಗೆ ಇರುವ ಏಕೈಕ ಆಶಾಕಿರಣವೆಂದರೆ, ಅದು ಸಂವಿಧಾನಬದ್ಧ ನ್ಯಾಯಾಂಗ ಮಾತ್ರ. ಮಹಾಜನತೆ ನಂಬಿರುವ ನ್ಯಾಯಾಲಯದ ತೀರ್ಪುಗಾರರೇ ಕಪ್ಪು ಗೌನು ಕಳಚಿ ಕಡು ಕೇಸರಿ ಗೌನು ಧರಿಸಿದರೆ ದುರ್ಬಲರ-ನಿರಪರಾಧಿಗಳ ಪಾಡೇನಾದೀತು? ಅಂಥದೊಂದು ಆತಂಕ ರಾಜ್ಯ ಹೈಕೋರ್ಟಿನ ಮುಖ್ಯ ನ್ಯಾಯಮೂರ್ತಿ ಎಸ್.ಕೆ. ಮುಖರ್ಜಿಯ ಹಿಂದೂತ್ವದ ಅಪಲಾಪ ಹುಟ್ಟುಹಾಕಿಬಿಟ್ಟಿದೆ....


ತಮಿಳರಸಿ ಜಯಲಲಿತಾ, ನಟಭಯಂಕರ ಸಲ್ಮಾನ್ ಖಾನ್ ಮತ್ತು ಸಗಣಿ ಸ್ವಾಮಿ ರಾಘುನ ರಾದ್ಧಾಂತದ ವಿಚಾರಣೆಯಲ್ಲಿ ನ್ಯಾಯಾಲಯಗಳು ಹಳಿತಪ್ಪಿ ನ್ಯಾಯ ವ್ಯವಸ್ಥೆಯನ್ನೇ ಅಪಹಾಸ್ಯ ಮಾಡುತ್ತಿರುವ ಅಪನಂಬಿಕೆಯ ಕಾಲಘಟ್ಟವಿದು. ದುರಂತವೆಂದರೆ, ತಪ್ಪು ಮಾಡಿದ ತೀರ್ಪುಗಾರರಿಗೆ ಶಿಕ್ಷೆ ಎಂಬುದೇ ಇಲ್ಲವಾಗಿದೆ; ನ್ಯಾಯಾಧೀಶರಿಗೆ ಬದ್ಧತೆಯ ನಿಗದಿಯೇ ಇಲ್ಲದಂತಾಗಿದೆ. ನ್ಯಾಯಾಂಗನಿಂದನೆ ಎಂಬ ಗುಮ್ಮಕ್ಕೆ ಹೆದರಿ 'ಮೈಲಾರ್ಡ್'ಗಳು ನೀಡುವ ಅನ್ಯಾಯದ ತೀರ್ಪುಗಳ ಬಗ್ಗೆಯಾಗಲಿ, ಅವರಾಡುವ ವಿವೇಚನಾರಹಿತ ಮಾತುಗಳ ಬಗ್ಗೆಯಾಗಲೀ ಸಣ್ಣ ಆಕ್ಷೇಪ ಎತ್ತಲಿಕ್ಕೂ ಈ ದೇಶದ ಕಾನೂನು ಮಂತ್ರಿಯೂ ಹಿಂದೆ-ಮುಂದೆ ನೋಡುವಂತಾಗಿದೆ! ಹೀಗಾಗಿ ನಿರಂಕುಶ ನ್ಯಾಯವ್ಯವಸ್ಥೆ ದಿಕ್ಕು ತಪ್ಪಿಹೋಗಿದೆ. ಇದಕ್ಕೆ ತಾಜಾ ಸ್ಯಾಂಪಲ್ ತೀರಾ ಈಚೆಗೆ ಚೀಫ್ ಜಸ್ಟೀಸ್ ಎಸ್.ಕೆ. ಮುಖರ್ಜಿ ಪೇಜಾವರ ಮಠದಲ್ಲಿ ನಿಂತು ಅಯೋಧ್ಯೆಯಲ್ಲಿ ರಾಮಮಂದಿರ ನಿರ್ಮಾಣಕ್ಕೆ ಕರೆಕೊಟ್ಟಿರುವುದು!!


ಅದು ಉಡುಪಿಯ ಪೇಜಾವರ ಮಠದ ಪ್ರಾಂಗಣ. ಹಿಂದೂತ್ವದ ಸರ್ಕಾರದ ಸರದಾರ ಮೋದಿ ಮಾಮನ ಆಸ್ಥಾನ ಪುರೋಹಿತನಂತಿರುವ ಸಾಕ್ಷಾತ್ ಪರ್ಯಾಯ ಪೇಜಾವರ ಮಠಾಧಿಪತಿ ವಿಶ್ವೇಶತೀರ್ಥರ ಸನ್ನಿಧಿಯಲ್ಲಿ ಮುಖ್ಯ ನ್ಯಾಯಮೂರ್ತಿ ಮುಖರ್ಜಿಜೀ ಕುಂತಿದ್ದಾರೆ. ಮುಖ್ಯ ನ್ಯಾಯಮೂರ್ತಿಗೆ 'ಶ್ರೀ ರಾಮಕೃಷ್ಣ ವಿಠಲ ಅನುಗ್ರಹ' ಎಂಬ ತರಹೇವಾರಿ ಪ್ರಶಸ್ತಿ ಪ್ರದಾನ, ಸನ್ಮಾನ ಮತ್ತು ಬಿರುದುಬಾವಲಿ ಕೊಡುವ 'ಧರ್ಮರಕ್ಷಣೆ'ಯ ಸಮಾರಂಭವದು. ಹಿಂದೂತ್ವದ ಆಡುಂಬೋಲದಂತಿರುವ ಉಡುಪಿಯ ಪೇಜಾವರ ಮಠದ ಕಾವಿ ಪರಿಸರದಲ್ಲಿ ಪ್ರಶಸ್ತಿ ಪಡೆದಿದ್ದೇ ತಡ, ಜಸ್ಟೀಸ್ ಮುಖರ್ಜಿ ಒಳಗಿನ ಹಿಂದೂತ್ವ ಸೈತಾನ ಎದ್ದು ಕುಂತಿದ್ದಾನೆ. ತಾನೊಬ್ಬ ಜಾತಿ-ಧರ್ಮ, ಮಸೀದಿ-ಮಂದಿರ-ಮಠ, ವರ್ಣ-ಲಿಂಗ ತಾರತಮ್ಯ ಇರಬಾರದ ಪರಮ ಪವಿತ್ರ, ಗುರುತರ ಹೊಣೆಗಾರಿಕೆ ಹೊತ್ತಿರುವ ಚೀಫ್ ಜಸ್ಟೀಸ್ ಎಂಬುದೂ ಮುಖರ್ಜಿಗೆ ಮರೆತುಹೋಗಿದೆ. "ಹಿಂದೂ ಧರ್ಮ ರಕ್ಷಣೆಗೆ ಸಾಧು-ಸಂತರೆಲ್ಲ ಒಂದಾಗಬೇಕು... ಸಂತರೆಲ್ಲ ಸೇರಿ ಅಯೋಧ್ಯೆಯಲ್ಲಿ ರಾಮಮಂದಿರ ಕಟ್ಟಬೇಕು.... ನಾವೆಲ್ಲ ಹಿಂದೂ ಎನ್ನಲು ಗರ್ವವಿದೆ....." ಎಂಬಿತ್ಯಾದಿ ಕಟ್ಟರ್ ಹಿಂದೂತ್ವ ಪ್ರವಚನ ಶುರು ಹಚ್ಚಿಕೊಂಡಿದ್ದಾರೆ ಘನ ನ್ಯಾಯಮೂರ್ತಿಗಳು!!

ಸಂಘ ಪರಿವಾರ ಪದ್ಯದ ವ್ಯಾಖ್ಯಾನಗಳನ್ನೆಲ್ಲ ಒಂದೊಂದಾಗಿ ಬಿತ್ತರಿಸಿ ಪೇಜಾವರ ಸ್ವಾಮಿ ಸಂಪ್ರೀತಗೊಳಿಸಲು ಜಸ್ಟೀಸ್ ಮುಖರ್ಜಿ ಆಡಿರುವ ಸಂವಿಧಾನಬಾಹಿರ ಮಾತುಗಳೀಗ ದೊಡ್ಡ ವಿವಾದ ಹುಟ್ಟುಹಾಕಿದೆ. ಖತರ್‌ನಾಕ್ ಕೇಸರಿ ಪಡೆಯ ಯೋಗಿ ಆದಿತ್ಯನಾಥ್, ಸಾಕ್ಷಿ ಮಹಾರಾಜ್, ಸಾಧ್ವಿ ಪ್ರಾಚಿ, ಪ್ರವೀಣ್ ತೊಗಾಡಿಯಾನಂಥವರ ಬಾಯಿಂದ ಇಂಥ ಧರ್ಮಾಂಧ ಆಣಿಮುತ್ತುಗಳು ಉದುರುವುದು ಸಾಮಾನ್ಯ. ಹೀಗಾಗಿ ಅದವರ ಜನ್ಮಜಾತ ರೋಗ ಎಂದು ಯಾರೂ ಅಷ್ಟು ಗಂಭೀರವಾಗಿ ಪರಿಗಣಿಸುವುದಿಲ್ಲ, ಆದರೆ ಸಾಂವಿಧಾನಿಕ ಸ್ಥಾನ-ಮಾನದ ಮುಖ್ಯ ನ್ಯಾಯಾಧೀಶ ಹುದ್ದೆಯಲ್ಲಿರುವ ಜಸ್ಟೀಸ್ ಮುಖರ್ಜಿ ಹಿಂದೂತ್ವದ ದುರಹಂಕಾರ-ದ್ವೇಷದ ಭಾಷಣ ಬಿಗಿದದ್ದು ಘಾತುಕವೇ ಸರಿ!

ಸಂವಿಧಾನದ ಸರ್ವಧರ್ಮ ಸಮನ್ವಯತೆ, ಸಮಾನತೆ ಆಶಯ ಪಾಲಿಸಬೇಕಾದ, ಸಂವಿಧಾನ ಧರ್ಮ ಎತ್ತಿ ಹಿಡಿಯಬೇಕಾದ ಜಸ್ಟೀಸ್ ಮುಖರ್ಜಿ ಹಿಂಸಾತ್ಮಕ ಹಿಂದೂತ್ವದ ಬೇಟೆಗಾರನಂತೆ ಹೂಂಕರಿಸಿದ್ದು ಭಾರತ ಜಾತ್ಯತೀತ ರಾಷ್ಟ್ರ (Secular state) ಎಂಬ ನಂಬಿಕೆ


ಪೇಜಾವರ


ಸದಾನಂದಗೌಡ


ಮೋದಿ

ಇಟ್ಟಿರುವವರನ್ನೆಲ್ಲ ಚಿಂತೆಗೀಡುಮಾಡಿದೆ. ಹಿಂದೂ ಧರ್ಮದ ರಕ್ಷಣೆಗೆ ಒಂದಾಗಲು ಸಾಧು-ಸಂತರಿಗೆ. ನ್ಯಾಯಮೂರ್ತಿ ಮುಖರ್ಜಿಜೀ ಕರೆ ಕೊಟ್ಟಿರುವುದು ಆತನಲ್ಲಿ ಇತರ ಧರ್ಮದ ಬಗ್ಗೆ ಇರುವ ಭಾವನೆಗಳ ಪ್ರತಿ ಬಿಂಬದಂತಿದೆ. ಇಂಥ ಧರ್ಮಗೇಡಿ ನ್ಯಾಯಾಧೀಶನಿಂದ ಅದೆಂಥ ಸಮಾನತೆಯ ನ್ಯಾಯ ಸಿಕ್ಕೀತು?!

ಈ ನೆಲದ ಸಂವಿಧಾನ ಸಮಾನತೆ ಸಾರುತ್ತದೆ. ಆದರೆ ಉಡುಪಿ ಮಠದ ಸಂಪ್ರದಾಯ-ಪರಂಪರೆ-ಆಚರಣೆ ಈ ಧ್ಯೇಯವನ್ನೇ ಧಿಕ್ಕರಿಸುತ್ತ ಬಂದಿದೆ! ಈ ಮಠದ ಪಂಕ್ತಿ ಭೇದ ಬರ್ಬರ-ಹೇಯ-ಅಮಾನುಷ ಅಸಮಾನತೆಗೆ ಸಂಕೇತದಂತಿದೆ. ಇಂಥ ಸಂವಿಧಾನ ವಿರೋಧಿ ಕೃತ್ಯಗಳು ಅನೂಚಾನಾಗಿ ನಡೆಯುವ ಮಠದಲ್ಲಿ ಜಸ್ಟೀಸ್ ಮುಖರ್ಜಿ ಸನ್ಮಾನಿಸಿಕೊಂಡಿದ್ದೇ ನಾಚಿಕೆಗೇಡು! ಪೇಜಾವರರು ಕೊಟ್ಟಿರುವ ಅನುಗ್ರಹ ಪ್ರಶಸ್ತಿ ಯಾವುದರ ಅನುಗ್ರಹಕ್ಕೆ ಎನ್ನುವ ಚರ್ಚೆ ಈಗ ಎಲ್ಲೆಡೆ ನಡೆದಿದೆ. ಉಡುಪಿಯ ಅಷ್ಟ ಮಠದ ಅನಿಷ್ಟ ಸ್ವಾಮಿಗಳು ಮತ್ತವರ ಎಂಟೂ ಮಠಗಳು ತರಹೇವಾರಿ ಭಾನಗಡಿಗಳ ಕೇಂದ್ರಗಳು. ಹಲವು ವ್ಯಾಜ್ಯ-ತಗಾದೆಗಳ ರೂವಾರಿಗಳು ಅಷ್ಟ ಮಠಾಧೀಶರು. ವಸ್ತುಸ್ಥಿತಿ ಹೀಗಿರುವಾಗ ಮುಖ್ಯ ನ್ಯಾಯಮೂರ್ತಿಗಳು ಇಂಥ ಕುಪ್ರಸಿದ್ಧ ಮಠಕ್ಕೆ ಪಾದ ಬೆಳೆಸಿ ಹಿಂದೂತ್ವದ ಶಾಲು ಹೊದೆಸಿಕೊಂಡು ಪ್ರಶಸ್ತಿ ಪಡೆಯುವುದಿದೆಯಲ್ಲ, ಅದು ಚೀಫ್ ಜಸ್ಟೀಸ್ ಪೀಠಕ್ಕೆ ಅಪಚಾರ ಮಾಡಿದಂತೆ. ಇವರ ಪಕ್ಷಪಾತದ ಮಾತುಗಾರಿಕೆ ಹೈಕೋರ್ಟಿನ ಇತರ ನ್ಯಾಯಾಧೀಶರು ಹಾಗು ರಾಜ್ಯದ ಬೇರೆ ಬೇರೆ ಅಧೀನ ನ್ಯಾಯಾಲಯಗಳು ಮಠ ಸಂಬಂಧಿ ವ್ಯಾಜ್ಯ ವಿಚಾರಣೆ ಹೊತ್ತಲ್ಲಿ ಅಡ್ಡ ಪ್ರಭಾವ ಬೀರುವ ಅಪಾಯವೂ ಉಂಟು.

ಇಂಥ ಸರಳಸತ್ಯ ಬುದ್ಧಿಪೂರ್ವಕವಾಗೇ ಕಡೆಗಣಿಸಿರುವ ಜಸ್ಟೀಸ್ ಮುಖರ್ಜಿ ಬಾಬರಿ ಮಸೀದಿ ಧ್ವಂಸದಿಂದ ದೇಶಕ್ಕಾದ ಗಾಯದ ಮೇಲೆ ಬರೆ ಎಳೆಯುವಂತೆ ರಾಮಮಂದಿರ ಜಪ ಮಾಡಿದ್ದಾರೆ. ಬಾಬರಿ ಮಸೀದಿ ಸಂಘ ಪರಿವಾರ ಕೆಡವಿದ ದುರ್ಘಟನೆ ಇಡೀ ದೇಶದ ಹಿಂದೂಗಳೇತರರಲ್ಲಿ, ಜಾತ್ಯತೀತರಲ್ಲಿ ಅಭದ್ರತೆ ಮೂಡಿಸಿದೆ. ರಾಮಮಂದಿರ ನಿರ್ಮಾಣ ಎಂಬ ಬಿಜೆಪಿಗಳ ರಾಜಕೀಯ ಮೈಲೇಜ್ ಕಾರ್ಯಕ್ರಮ ಭಾರತೀಯ ಸಮಾಜದಲ್ಲಿ ಮಾಡಿದ ವಿಘಟನೆ-ಸಾವು-ನೋವು ಚರಿತ್ರೆಯಲ್ಲಿ ದಾಖಲಾಗಿದೆ! ಈ ಪ್ರಕರಣ ಸುಪ್ರೀಂಕೋರ್ಟಿನಲ್ಲಿದೆ.

ಇದೆಲ್ಲ ಗೊತ್ತಿದ್ದೂ ಮುಖ್ಯ ನ್ಯಾಯಮೂರ್ತಿ ಪೀಠದಲ್ಲಿರುವ 'ಲಾರ್ಡ್' ರಾಮಮಂದಿರ ಸ್ಥಾಪನೆ ಕಾರ್ಯ ನಡೆಯಲಿ ಎಂದು ಕರೆ ಕೊಡುತ್ತಾರೆಂದರೆ ಇದಕ್ಕಿಂತ ದೊಡ್ಡ ಮತಾಂಧ ಅಪರಾಧ ಮತ್ತೊಂದಿರಲಾರದೇನೋ? ಮಾಡಬಾರದ್ದು ಮಾಡಿರುವ ಜಸ್ಟೀಸ್ ಮುಖರ್ಜಿಗೆ ಹೇಳೋರುಕೇಳೋರು ಯಾರೂ ಇಲ್ಲವಾ? ಇದು ಸುಪ್ರೀಂಕೋರ್ಟ್ ಗಮನಕ್ಕೆ ಬಂದಿದೆಯಾ? ಸೆಕ್ಯುಲರ್ ಮಂದಿಗೆ ಮುಖರ್ಜಿಯ ಮತಾಂಧ ಮಸಲತ್ತು ಗೊತ್ತಾಗಿಲ್ಲವಾ? ಮುಖರ್ಜಿ ನ್ಯಾಯ ಕೊಡುವ ಸ್ಥಾನಕ್ಕೆ ಅರ್ಹರಾ?

ನಾವೆಲ್ಲ ಹಿಂದೂಗಳೆಂದು ಹೇಳಿಕೊಳ್ಳಲು ಗರ್ವವಿದೆ ಎನ್ನುವುದು ಸಂಘ ಪರಿವಾರ ಶೂದ್ರರ ದಾರಿ ತಪ್ಪಿಸಲು ಮೇಲಿಂದಮೇಲೆ ಹೇಳುವ ಸ್ಲೋಗನ್ನು! ಇದನ್ನೇ ಮೇಲುವರ್ಗದ ಮುಖರ್ಜಿಯೂ ಹೇಳಿದ್ದಾರೆ. ಆದರೆ ಹಿಂದೂಗಳ ದೃಷ್ಟಿ ಒಂದೇ ರೀತಿಯಿಲ್ಲ ಎಂಬುದನ್ನು ಮರೆಸಿದ್ದಾರೆ. ಇದಕ್ಕೆ ಕಾರಣರು ಯಾರೆಂದು ಮುಖರ್ಜಿ ಸಾಹೇಬರಿಗೆ ಗೊತ್ತಿಲ್ಲವಾ? ಪುರೋಹಿತಶಾಹಿಗಳು ಜಾರಿಗೆ ತಂದ ಜಾತಿ-ವರ್ಣ ವ್ಯವಸ್ಥೆಗೆ ಬಹುಜನ ಸಮಾಜ ಬಲಿಯಾಯ್ತಲ್ಲವಾ? ಇದೆಲ್ಲ ಮುಖರ್ಜಿಜೀ ಆತ್ಮಾವಲೋಕನಕ್ಕೆ ಒಳ್ಳೆಯ ವಸ್ತುಗಳು. ಹಿಂದೂಗಳೆಲ್ಲರ ಉದ್ದೇಶ ಮೋಕ್ಷ ಪ್ರಾಪ್ತಿ ಎಂದು ಮುಖರ್ಜಿ ಸುಲಭ... ಹೇಳಬಹುದು. ಆದರೆ ಹಿಂದೂ ಧರ್ಮದ ಯಾ... ನಿತ್ಯ ನಾರಕಿಗಳೆಂದು ಮಧ್ವಾಚಾರ್ಯರು, ಮಾ... ಹೇಳಿದ್ದರು ಮತ್ತು ಹೇಳುತ್ತಿದ್ದಾರೆ?


ಪೇಜಾವರ ಮಠದಲ್ಲಿ ಸನ್ಮಾನ ಸ್ವೀಕರಿಸುತ್ತಿರುವ ಮುಖರ್ಜಿ


ಅಪನಂಬಿಕೆ-ಅಸಹನೆಯ ಧರ್ಮ ಸಂಕಟದಲ್ಲಿ ... ಇಡೀ ದೇಶ ವಿಲವಿಲ ಒದ್ದಾಡುತ್ತಿದೆ. ಧರ್ಮದ ದಾ... ಶಸ್ತ್ರಾಸ್ತ್ರ ತಂತ್ರಗಾರಿಕೆ ನಡೆಸುತ್ತಿದ್ದಾರೆ. ಉಗ್ರಗಾಮಿ ಗ್ಯಾಂಗ್... ಹಿಂದೂ-ಮುಸ್ಲಿಂ-ಕ್ರಿಶ್ಚಿಯನ್ ಎನ್ನದೆ 'ಸಮಾನತೆ'... ಬೆಳೆಯುತ್ತಿವೆ. ಭಜರಂಗದಳ ಶಸ್ತ್ರಾಸ್ತ್ರ ತರಬೇತಿ ನಡೆ... ತಲವಾರು ದೀಕ್ಷೆಗೆ ಕೇಸರಿ ಪಡೆ ಪಣ ತೊಟ್ಟಿದ್ದೂ ... ಇಂಥ ಗಂಡಾಂತರಕಾರಿ ಪರಿಸ್ಥಿತಿಯಲ್ಲಿ ನಿಷ್ಪಾಪಿಗಳ ಮೂಲ... ಹಕ್ಕು ಹಾಗು ಧಾರ್ಮಿಕ ಸ್ವಾತಂತ್ರ್ಯ ಕಾಪಾಡುವ ಹ... ನ್ಯಾಯಾಲಯಗಳದ್ದಾಗಿದೆ. ಆಳುವವರ ಮೇಲೆ ನಂಬಿ... ಈಗ ಉಳಿದಿಲ್ಲ. ಧರ್ಮಾಂಧ ಆಡಳಿತಗಾರರಿಗೆ ಮೂಗು... ಹಾಕಬೇಕಾದ ನ್ಯಾಯಾಲಯದ 'ದೇವ'ರೇ ಒಂದು ಧ... ಪಕ್ಷದಂತೆ ಪಕ್ಷಪಾತ ತೋರಿಸಿದರೆ ನ್ಯಾಯ ಸಿಗಲು ಸಾಧ್... ಹರ ಕೊಲ್ಲಲ್ ನರ ಕಾಯ್ವನೇ?!

ಹಿಂದೂ ಧರ್ಮ ರಕ್ಷಣೆಗೆ ಸಾಧು-ಸಂತ... ಒಂದಾಗಬೇಕೆಂದು ಜಸ್ಟೀಸ್ ಮುಖರ್ಜಿ ಕ... ಪ್ರದರ್ಶಿಸಿರುವುದು ಕೌಪೀನ್ ಹರುಕ ರಾಘು ಸ್ವಾ... ನಿತ್ಯಾನಂದ ಸ್ವಾಮಿ, ಅಸಾರಾಂ ಬಾಪುಗಳಂಥ ಹಿಂದೂ... ಹರಿಕಾರಗಳಿಗೆ ಸಾಂತ್ವನ-ಸಂತಾಪ ತರಬಹುದೇ ... ಶತಶತಮಾನಗಳಿಂದ ವೈದಿಕಶಾಹಿಗಳಿ... ಶೋಷಿಸಲ್ಪಡುತ್ತಿರುವ ಶೂದ್ರ ಸಮುದಾಯಕ್ಕೆ ಯ... ಪ್ರಯೋಜನವೂ ಇಲ್ಲ. ಹಿಂದೂತ್ವದ ಯುದ್ಧದಲ್ಲಿ ಶೂ... ಎಂದಿದ್ದರೂ ಕಾಲಾಳುಗಳೇ. ಹಿಂದೂ ಸಮುದಾ... ದಗಾಕೋರ-ದಗಲುಬಾಜಿ ಮಠಗಳು, ದೇವಾಲ... ಆಡಳಿತಗಾರರು ಬಚಾವಾಗಲು ಜಸ್ಟೀಸ್ ಮುಖ... ಮಾತುಗಾರಿಕೆ ಒಂಚೂರು ನೆರವಿಗೆ ಬರಲೂಬಹು... ಜಸ್ಟೀಸ್ ಮುಖರ್ಜಿ ಸಂಘ ಪರಿವಾರದ ತುತ್ತೂರಿ ಊ... ಹಿಂದೂತ್ವದ ಪ್ರಯೋಗಶಾಲೆಯಾದ ಅವಿಭಜಿತ ದ... ಕನ್ನಡದ ಉಡುಪಿಯಲ್ಲಿ, ಹಿಂದೂತ್ವದ ಹೆಸರಲ್ಲಿ ಅನೈ... ಪೊಲೀಸ್‌ಗಿರಿ ಅವಳಿ ಜಿಲ್ಲೆಯಲ್ಲಿ ಜೋರಾಗಿ... ನಡೆಯುತ್ತಿದೆ. ಧರ್ಮದ ಅಮಲೇರಿಸಿಕೊಂಡ ಹಿಂ... ಪಾತಕಿಗಳಿಗೆ ನ್ಯಾಯಾಲಯದ ಸಣ್ಣ ಹೆದರಿಕೆಯಿ... ನ್ಯಾಯಮೂರ್ತಿ ಮುಖರ್ಜಿ ನಿಲುವು ಈ ಹಿಂ... ಪುಂಡರಿಗೆ ನ್ಯಾಯಾಲಯದ ರಕ್ಷಣೆ ಸಿಗುವ ಧೈ... ತುಂಬುವಂತಿದೆ ತಾನೆ?

ಕೇಂದ್ರದಲ್ಲಿ ಉಗ್ರ ಹಿಂದೂತ್ವ ಪ್ರತಿಪಾದಿಸಿ ... ಬೇಯಿಸಿಕೊಳ್ಳುವ ಬಿಜೆಪಿ ಅಧಿಕಾರದಲ್ಲಿದೆ; ಅಸಹಿಷ್ಣುತೆ... ಮೂರ್ತ ರೂಪದಂತಿರುವ ಮೋದಿ ಮಾಮ ಪ್ರ... ಗದ್ದುಗೆಯಲ್ಲಿದ್ದಾರೆ. ಈ ಮೋದಿಯ ಕಾವಿ ಒಡ್ಡೋಲ... ಅಧ್ವರ್ಯ ಪೇಜಾವರ ಸ್ವಾಮಿ. ಇಂಥ ಪ್ರಭಾವಿ ಪೇಜಾ... ಮುಂದೆ ಹಿಂದೂತ್ವದ ಪ್ರವರ ಜಸ್ಟೀಸ್ ಮುಖ... ತೋರಿಸಿರುವುದು ನಾನಾ ವ್ಯಾಖ್ಯಾನಕ್ಕೆ ಕಾರಣವಾಗಿ... ಸುಪ್ರೀಂಕೋರ್ಟಿಗೆ ಪದೋನ್ನತಿ ಪಡೆಯುವ ಹಿ... ಆಸೆಯಿಂದ ಮುಖರ್ಜಿ ರಾಮಮಂದಿರ ಭ... ಮಾಡಿದರಾ? ನಿವೃತ್ತಿನಂತರ ಎಲ್ಲಾದರೂ ರಾಜ್ಯಪಾಲನಾ... ಅಥವಾ ಥಳುಕು ಬಳುಕಿನ ಸ್ಥಾನವ ಪಡೆಯಲು ಪೇಜಾವ... ಕೃಪೆಯಾಗಬಹುದೆಂಬ ದೂ(ದು)ರಾಲೋಚನೆಯಿಂ... ಉಡುಪಿ ಮಠದಲ್ಲಿ ಜಸ್ಟೀಸ್ ಮುಖರ್ಜಿ ಕೇಸರಿ ಕಸ... ಮಾಡಿದರಾ? ನ್ಯಾಯಾಧೀಶರ ಧರ್ಮಕಾರಣ ತರವೇ...

ಈ ದೇಶದ ಮೊದಲ ಧರ್ಮ ಸಂವಿಧಾನ. ಅದ... ನ್ಯಾಯಾಂಗ ರಕ್ಷಿಸಬೇಕು; ಸಂವಿಧಾನ ಪಾಲಿಸುವವರ... ಕಾಪಾಡಬೇಕು. ಇದು ನ್ಯಾಯಾಧೀಶರ ಕರ್ತವ್ಯ. ... ಹೊಣೆಗಾರಿಕೆ ಪಾಠ ಜಸ್ಟೀಸ್ ಮುಖರ್ಜಿಗೆ ಕಲಿಸು... ಧೈರ್ಯ ಯಾರಿಗಿದೆ?! ಕೇಂದ್ರ ಕಾನೂನು ಮಂ... ಸದಾನಂದ ಗೌಡನೆಂಬ ಪಕ್ಕ ಚೆಡ್ಡಿಗೆ ಇದೆ... ಅರ್ಥವಾಗುವಂಥದಲ್ಲ, ಬಿಡಿ!

● ನಹು...



ಪ್ರೊ. ಮಹೇಶಚಂದ್ರಗುರು ನ್ಯಾಯಾಂಗ ಬಂಧನವೋ? ನ್ಯಾಯದ 'ಗರ್ಭಪಾತ'ವೋ?

ಶ್ರೀ ರಾಮಚಂದ್ರನನ್ನು ಮಹೇಶಚಂದ್ರಗುರು 'ಲೋಫರ್' ಎಂದು ಕರೆದದ್ದೇ ಹೌದು ಎಂದು ಭಾವಿಸಿದರೂ ಅದು ಧಾರ್ಮಿಕ ಅವಹೇಳನ ಹೇಗಾಗುತ್ತದೆ? ಶ್ರೀ ರಾಮಚಂದ್ರ ರಾಮಾಯಣದ ಒಂದು ಪಾತ್ರ. ಆ ಕಾವ್ಯದಲ್ಲಿ ಅವನು ವರ್ತಿಸುವುದು ಒಬ್ಬ ಸಾಮಾನ್ಯ ಗೃಹಸ್ಥನ ಹಾಗೆ. ಮಡದಿ ಸೀತೆಯನ್ನು ಅವನು ನಡೆಸಿಕೊಳ್ಳುವ ರೀತಿಯಂತೂ, ಒಬ್ಬ ಸಾಮಾನ್ಯ ಗೃಹಸ್ಥನಿಗೂ ತಕ್ಕುದಾದದಲ್ಲ. ರಾವಣನ ಸೆರೆಯಲ್ಲಿದ್ದ ಸೀತೆಯ ಶೀಲವನ್ನು ಅಗ್ನಿಪರೀಕ್ಷೆಯ ಮುಖಾಂತರ ಖಾತರಿಪಡಿಸಿ ಕೊಂಡ ಭಂಡ ಗಂಡಸು ಆತ! ಅಷ್ಟಾದ ಮೇಲೂ ಅವಳ ಚಾರಿತ್ರ್ಯದ ಬಗ್ಗೆ ಅವನಿಗೆ ಸಂದೇಹ. ಅಯೋಧ್ಯೆಯ ರಜಕನೊಬ್ಬನ ಚಿಲ್ಲರೆ ಮಾತಿಗೆ ಕಿವಿಗೊಟ್ಟು ಸೀತೆಯನ್ನು ಮರಳಿ ಕಾಡಿಗೆ ಅಟ್ಟಿದ ಸಂಶಯ ಪಿಶಾಚಿ ಅವನು. ರಾಮಾಯಣದ ನೂರಾರು ಭಾಷಿಕ ಪಠ್ಯಗಳು, ನಾಟಕ, ಯಕ್ಷಗಾನ ಇತ್ಯಾದಿ ಪ್ರಸ್ತುತಿಗಳು 'ಮರ್ಯಾದಾ ಪುರುಷೋತ್ತಮ' ಎನಿಸಿಕೊಂಡಿರುವ ಶ್ರೀ ರಾಮಚಂದ್ರ ಒಬ್ಬ ಗಂಡಸಾಗಿ ಮತ್ತು ಗಂಡನಾಗಿ ಎಷ್ಟು ಕೊಳಕು ಮನಸ್ಸಿನವ ಎಂಬುದನ್ನು ನಿಷ್ಠೂರವಾಗಿ ನಿರೂಪಿಸಿವೆ.

ಮೈಸೂರು ವಿಶ್ವವಿದ್ಯಾಲಯದ ಪತ್ರಿಕೋದ್ಯಮ ವಿಭಾಗದ ಪ್ರಾಧ್ಯಾಪಕ ಮಹೇಶಚಂದ್ರಗುರು ಅವರನ್ನು ಒಂದು ಕೇಸಿನಲ್ಲಿ ಜೂನ್ 17ರಂದು ಪೊಲೀಸರು ಬಂಧಿಸಿದ್ದು ಒಂದು ವಾರದ ಸೆರೆಮನೆ ವಾಸದ ನಂತರ ಅವರು ಮೈಸೂರಿನ ನ್ಯಾಯಾಲಯವೊಂದು 'ದಯಪಾಲಿಸಿದ' ಜಾಮೀನಿನ ಮೇಲೆ ಬಿಡುಗಡೆಗೊಂಡಿದ್ದಾರೆ. ಕಳೆದ 17 ವರ್ಷಗಳಿಂದ ಅಧ್ಯಾಪಕರಾಗಿರುವ ಮಹೇಶಚಂದ್ರಗುರು ಅವರ ಮೇಲೆ ಇದಲ್ಲದೆ ಇನ್ನೂ ಒಂದು ಕೇಸು ದಾಖಲಾಗಿದ್ದು, ಅದರಲ್ಲಿಯೂ ಅವರು ಜಾಮೀನು ಪಡೆದುಕೊಂಡಿದ್ದಾರೆ. ನ್ಯಾಯಾಂಗ ಬಂಧನಕ್ಕೆ ಒಳಗಾಗಲು ಅವರು ಮಾಡಿದ ಅಪರಾಧವಾದರೂ ಏನು?

2015ರ ಜನವರಿಯಲ್ಲಿ ಮೈಸೂರಿನ ಸಭೆಯೊಂದರಲ್ಲಿ ಭಾಷಣ ಮಾಡುತ್ತ ಮಹೇಶಚಂದ್ರಗುರು, ಪುರಾಣ ಪುರುಷ ಶ್ರೀರಾಮಚಂದ್ರನನ್ನು "ಲೋಫರ್" ಎಂದು ಕರೆದರಂತೆ. 'ಕರುನಾಡ ರಕ್ಷಣಾ ವೇದಿಕೆ' ಎಂಬ ಯಾರೂ ಕೇಳರಿಯದ ಸಂಘಟನೆ ಹಾಗೂ ಕುಖ್ಯಾತ 'ಹಿಂದೂ ಜಾಗರಣ ವೇದಿಕೆ' ಅವರ ವಿರುದ್ಧ ಮೈಸೂರಿನ ಜಯಲಕ್ಷ್ಮೀಪುರಂ ಪೊಲೀಸು ಠಾಣೆಯಲ್ಲಿ ದೂರು ದಾಖಲಿಸಿದವು. ವಿಶ್ವವಿದ್ಯಾಲಯ ಧನ ಆಯೋಗ (ಯು.ಜಿ.ಸಿ.)ದ ಒಂದು ರಿಫ್ರೆಷರ್ ಕೋರ್ಸ್‌ನಲ್ಲಿ ಮಾಡಿದ ಭಾಷಣದಲ್ಲಿ ಮಹೇಶಚಂದ್ರಗುರು ಶ್ರೀರಾಮನನ್ನು ನಿಂದಿಸಿದ್ದರು ಎಂದು ಪೊಲೀಸರಿಗೆ ದೂರು ಸಲ್ಲಿಸಿದವರು ಆ ಸಭೆಗೆ ಆಹ್ವಾನಿತರಾಗಿದ್ದರೆ? ಕಡೆಯ ಪಕ್ಷ, ಅವರು ಸಭೆಯಲ್ಲಿ ಸ್ವತಃ ಹಾಜರಿದ್ದು ಆ ಮಾತು ಕೇಳಿಸಿಕೊಂಡರೆ? ಒಂದೊಮ್ಮೆ ಮಹೇಶಚಂದ್ರಗುರು ಶ್ರೀರಾಮನ ಬಗ್ಗೆ ಲೋಫರ್ ಎಂಬ ಶಬ್ದ ಬಳಸಿದ್ದರೂ, ಅದು ಕ್ರಿಮಿನಲ್ ಕೇಸು ದಾಖಲಿಸಿಕೊಳ್ಳುವಂತಹ ಅಪರಾಧವೆ? ಎಂದು ಮುಂತಾಗಿ ಯೋಚಿಸದೆ ಅಥವಾ ಯೋಚಿಸಿಯೇ ಸದ್ಯದ ಕಾಲ ದೇಶ ಪರಿಸ್ಥಿತಿಯಲ್ಲಿ ಅದು ಅಪರಾಧವೇ ಹೌದು ಎಂದು ತೀರ್ಮಾನಿಸಿ, ಮೈಸೂರು ಪೊಲೀಸರು ದೂರಿನ ಬಗ್ಗೆ ಕಾನೂನುರೀತ್ಯಾ ಕ್ರಮಕೈಕೊಂಡಿದ್ದಾರೆ.

2016 ಜನವರಿಯಲ್ಲಿ ಹೈದರಾಬಾದ್ ಕೇಂದ್ರೀಯ ವಿಶ್ವವಿದ್ಯಾಲಯದ ವಿದ್ಯಾರ್ಥಿ ರೋಹಿತ್ ವೇಮುಲ ಅವರ ಆತ್ಮಹತ್ಯೆ ಕುರಿತ ಪ್ರತಿಭಟನಾ ಸಭೆಯೊಂದರಲ್ಲಿ ಮಾತನಾಡುತ್ತ ಮಹೇಶಚಂದ್ರಗುರು ಪ್ರಧಾನಮಂತ್ರಿ ನರೇಂದ್ರ ಮೋದಿ ಮತ್ತು ಮಾನವ ಸಂಪನ್ಮೂಲ ಖಾತೆಯ ಮಂತ್ರಿ ಸ್ಮೃತಿ ಇರಾನಿಯವರನ್ನು ಕಟುವಾಗಿ ಟೀಕಿಸಿದ್ದರಂತೆ. ಬಿ.ಜೆ.ಪಿಯ ದಲಿತ ಮೋರ್ಚಾದ ಚಿ.ನ.ರಾಮು ಎಂಬವರು ಈ ಬಗ್ಗೆ ಸಲ್ಲಿಸಿದ ದೂರನ್ನು ಸಹ ಪೊಲೀಸರು ದಾಖಲಿಸಿಕೊಂಡು ಮಹೇಶಚಂದ್ರಗುರು ಅವರ ಮೇಲೆ ಕೇಸು ಜರುಗಿಸಿದ್ದರು. ಅದರ ವಿಚಾರಣೆಯೂ ನಡೆಯುತ್ತಿದೆ. ಈ ಎರಡೂ ಪ್ರಕರಣಗಳನ್ನು ಒಂದೇ ಮಾತಿನಲ್ಲಿ ವಿವರಿಸುವುದಾದರೆ ಮಹೇಶಚಂದ್ರಗುರು ಆಡಿದ ಒಂದು ಮಾತಿಗೆ ಹಾಗೂ ವ್ಯಕ್ತಪಡಿಸಿದ ಒಂದು ಅಭಿಪ್ರಾಯಕ್ಕೆ ಅವರನ್ನು ಕ್ರಿಮಿನಲ್ ಆರೋಪಿ ಎಂದು ಸರಕಾರ ತೀರ್ಮಾನಿಸಿದೆ; ನ್ಯಾಯಾಂಗ ಬಂಧನವನ್ನೂ ವಿಧಿಸಿದೆ; ಕಾನೂನಿನ ಪರಿಭಾಷೆಯಲ್ಲಿ ಹೇಳುವುದಾದರೆ, ಇದು **Miscarriage of Justice**; 'ನ್ಯಾಯದಗರ್ಭಪಾತ' ಎಂದು ಇದನ್ನು ಅನುವಾದಿಸಿಕೊಂಡರೆ, ಅದು ನಮ್ಮ ಸದ್ಯದ ಸ್ಥಿತಿ ಗತಿಯ ನಿರೂಪಣೆಯೇ ಆಗುತ್ತದೆ.

ಶ್ರೀ ರಾಮಚಂದ್ರನನ್ನು ಅವಹೇಳನ ಮಾಡಿ ನ್ಯಾಯಾಂಗ ಬಂಧನಕ್ಕೆ ಒಳಗಾಗುವುದರ ಜೊತೆ ಕ್ರಿಮಿನಲ್ ಆರೋಪಿಯಾಗಿ ಮಹೇಶಚಂದ್ರಗುರು ಮೈಸೂರು ವಿಶ್ವವಿದ್ಯಾಲಯದಿಂದಲೂ ಅಮಾನತುಗೊಂಡಿದ್ದಾರೆ. ಶ್ರೀ ರಾಮಚಂದ್ರ ಬಗ್ಗೆ ಮಹೇಶಚಂದ್ರಗುರು ಬಳಸಿದ ಭಾಷೆಯ ಕಾರಣಕ್ಕೆ ಮೈಸೂರು ಪೊಲೀಸರು ಅವರ ಮೇಲೆ ಕ್ರಿಮಿನಲ್ ಕಾಯ್ದೆಯ ಸೆಕ್ಷನ್ 295 ಎ (ಧಾರ್ಮಿಕ ನಂಬಿಕೆಗಳ ಉದ್ದೇಶಪೂರ್ವಕ ಅವಹೇಳನ) ಪ್ರಕಾರ ಕಾನೂನು ಕ್ರಮ ಜರುಗಿಸಿದ್ದಾರೆ.

ಶ್ರೀ ರಾಮಚಂದ್ರನನ್ನು ಮಹೇಶಚಂದ್ರಗುರು 'ಲೋಫರ್' ಎಂದು ಕರೆದದ್ದೇ ಹೌದು ಎಂದು ಭಾವಿಸಿದರೂ ಅದು ಧಾರ್ಮಿಕ ಅವಹೇಳನ ಹೇಗಾಗುತ್ತದೆ? ಶ್ರೀ ರಾಮಚಂದ್ರ ರಾಮಾಯಣದ ಒಂದು ಪಾತ್ರ. ಆ ಕಾವ್ಯದಲ್ಲಿ ಅವನು ವರ್ತಿಸುವುದು ಒಬ್ಬ ಸಾಮಾನ್ಯ ಗೃಹಸ್ಥನ ಹಾಗೆ. ಮಡದಿ ಸೀತೆಯನ್ನು ಅವನು ನಡೆಸಿಕೊಳ್ಳುವ ರೀತಿಯಂತೂ, ಒಬ್ಬ ಸಾಮಾನ್ಯ ಗೃಹಸ್ಥನಿಗೂ ತಕ್ಕುದಾದದಲ್ಲ. ರಾವಣನ ಸೆರೆಯಲ್ಲಿದ್ದ ಸೀತೆಯ ಶೀಲವನ್ನು ಅಗ್ನಿಪರೀಕ್ಷೆಯ ಮುಖಾಂತರ ಖಾತರಿಪಡಿಸಿಕೊಂಡ ಭಂಡ ಗಂಡಸು ಆತ! ಅಷ್ಟಾದ ಮೇಲೂ ಅವಳ ಚಾರಿತ್ರ್ಯದ ಬಗ್ಗೆ ಅವನಿಗೆ ಸಂದೇಹ. ಅಯೋಧ್ಯೆಯ ರಜಕನೊಬ್ಬನ ಚಿಲ್ಲರೆ ಮಾತಿಗೆ ಕಿವಿಗೊಟ್ಟು ಸೀತೆಯನ್ನು ಮರಳಿ ಕಾಡಿಗೆ ಅಟ್ಟಿದ ಸಂಶಯ ಪಿಶಾಚಿ ಅವನು. ರಾಮಾಯಣದ ನೂರಾರು ಭಾಷಿಕ ಪಠ್ಯಗಳು, ನಾಟಕ, ಯಕ್ಷಗಾನ, ಇತ್ಯಾದಿ ಪ್ರಸ್ತುತಿಗಳು 'ಮರ್ಯಾದಾ ಪುರುಷೋತ್ತಮ' ಎನಿಸಿಕೊಂಡಿರುವ ಶ್ರೀ ರಾಮಚಂದ್ರ, ಒಬ್ಬ ಗಂಡಸಾಗಿ ಮತ್ತು ಗಂಡನಾಗಿ ಎಷ್ಟು



ಕೊಳಕು ಮನಸ್ಸಿನವ ಎಂಬುದನ್ನು ನಿಷ್ಠುರವಾಗಿ ನಿರೂಪಿಸಿವೆ. ಗಂಡು ಮತ್ತು ಹೆಣ್ಣಿನ ನಡುವೆ ಲಿಂಗ ತಾರತಮ್ಯವನ್ನು ವಿರೋಧಿಸುವ ಪ್ರಜಾಪ್ರಭುತ್ವದ ಈ ಕಾಲಘಟ್ಟದಲ್ಲಂತೂ ಯಾವ ಮಾನದಂಡದಿಂದಲೂ ರಾಮ ನಮಗೆ ಆದರ್ಶವಲ್ಲ. ಮಹೇಶಚಂದ್ರಗುರು ಅವರು ಖಂಡಿತ, ರಾಮಾಯಣದಲ್ಲಿ ರಾಮ ಗಂಡನಾಗಿ ಮತ್ತು ಗಂಡಸಾಗಿ, ತನ್ನ 'ಧರ್ಮಪತ್ನಿ'ಯ ಜೊತೆ ವರ್ತಿಸಿದ ರೀತಿಯನ್ನು ಮನಸ್ಸಿನಲ್ಲಿ ಇಟ್ಟುಕೊಂಡೇ ಅವನನ್ನು "ಲೋಫರ್" ಎಂದು ಕರೆದಿದ್ದಾರೆ. ಜನಬಳಕೆಯ 'ಲೋಫರ್' ಎಂಬ ಮಾತಿನಲ್ಲಿ ಅವರು ರಾಮನನ್ನು ಬಣ್ಣಿಸಿದ್ದು ಕೆಲವರನ್ನು ನೋಯಿಸಬಹುದು; ಮಹೇಶಚಂದ್ರಗುರು ಅವರ ಭಾಷೆಯ ಸಭ್ಯತೆಯನ್ನು ಸಹ ನಾವು ಪ್ರಶ್ನಿಸಬಹುದಾಗಿದೆ. ಆದರೆ ಅವನ್ನು ತೀರ್ಮಾನಿಸುವುದು ಪೊಲೀಸರ ಅಥವಾ ನ್ಯಾಯಾಲಯದ ಕೆಲಸವಲ್ಲ, ಜನರ ಭಾಷೆ, ಅಭಿರುಚಿ, ನಂಬಿಕೆ ಇತ್ಯಾದಿಗಳನ್ನು ಪೊಲೀಸರು ವಿಚಾರಣೆಗೆ ಒಳಪಡಿಸಿ ನ್ಯಾಯಾಲಯಗಳು ತೀರ್ಪು ಕೊಡುವುದು, ಪ್ರಜಾಪ್ರಭುತ್ವ ಅವಸಾನದ ಮುನ್ಸೂಚನೆ.

ಹೆಂಡತಿಯ ಶೀಲದ ಬಗ್ಗೆ ಸಂಶಯ ಪಿಶಾಚಿಯಾಗಿ, ಆಕೆಯನ್ನು ವಿಧ ವಿಧವಾಗಿ ದಂಡಿಸುವ ಗಂಡಂದಿರಲ್ಲಿ



ಮಹೇಶಚಂದ್ರ ಗುರು ಅವರ ಬಿಡುಗಡೆಯನ್ನು ಸಂಭ್ರಮದಿಂದ ಸ್ವಾಗತಿಸುತ್ತಿರುವುದು

ಶ್ರೀ ರಾಮಚಂದ್ರ ಮೊದಲನೆಯವನೂ ಅಲ್ಲ; ಕಡೆಯವನೂ ಅಲ್ಲ; ಗಂಡನಾದವನಿಗೆ ತನ್ನ ಹೆಂಡತಿಯ ಶೀಲದ ಬಗ್ಗೆ ಇರುವ ಸಂದೇಹ, ಮನಶಾಸ್ತ್ರಜ್ಞರ ಪ್ರಕಾರ ಹೆಣ್ಣಿನ ಲೈಂಗಿಕತೆ ಮತ್ತು ದೈಹಿಕ ತಾಳಿಕೆಯ ಕುರಿತು ಲಾಗಾಯ್ತಿನಿಂದಲೂ ಪ್ರತಿಯೊಬ್ಬ ಗಂಡಿನಲ್ಲೂ ಸುಪ್ತವಾಗಿ ಇರುವ ಭಯ, ಆತಂಕ ಹಾಗೂ ಕೀಳರಿಮೆಯ ಒಂದು ಅಭಿವ್ಯಕ್ತಿ. ಆ ದೃಷ್ಟಿಯಿಂದ ರಾಮ ಎಲ್ಲ ಗಂಡಸರ ಮೂಲಾರ್ಕ ಪ್ರತಿಮೆ. ರಾಮನನ್ನು ದೇವತೆ ಎಂದು ಪೂಜಿಸದೆ ಪೌರಾಣಿಕ ಕತೆಯ ಒಂದು ಪಾತ್ರವೆಂಬಂತೆ ಪರಿಗಣಿಸಿದರೆ, ಆ ಪಾತ್ರದ ವಿಮರ್ಶೆಯ ಮುಖಾಂತರ ಎಲ್ಲಾ ಕಾಲದಲ್ಲೂ ಹೆಣ್ಣಿನ ಮೇಲೆ ನಡೆದಿರುವ ಗಂಡಿನ ಹಿಂಸೆಯನ್ನು ಪ್ರತಿಭಟಿಸಲು ಸಾಧ್ಯವಾಗುತ್ತದೆ. ರಾಮಾಯಣದ ನೂರಾರು ಪಠ್ಯ ವಕ್ತವ್ಯ ಹಾಗೂ ಜಾನಪದ ಪ್ರಸ್ತುತಿಗಳು ಏಕಕಾಲಕ್ಕೆ ಇಂತಹ ವಿಮರ್ಶಾತ್ಮಕ ಓದು ಮತ್ತು ಹೆಣ್ಣಿನ ಮೇಲೆ ನಡೆಯುವ ಹಿಂಸೆಯ ವಿರುದ್ಧ ಹೋರಾಟಗಳಾಗಿವೆ. ರಾಮಾಯಣದ ರಾಮನನ್ನು ಮಹೇಶಚಂದ್ರಗುರು 'ಲೋಫರ್' ಎಂದು ಕರೆದದ್ದು ಕೆಲವರನ್ನೂ ನೋಯಿಸಿರಬಹುದು. ಆದರೆ ರಾಮನನ್ನು ಆ ಶಬ್ದದಲ್ಲಿ ಅಲ್ಲವಾದರೂ ಅದಕ್ಕಿಂತ ಹೆಚ್ಚು ಕಟುವಾದ ಆದರೆ ಸ್ವಲ್ಪ ಸುಧಾರಿತವಾದ ಭಾಷೆಯಲ್ಲಿ ನೂರಾರು ರಾಮಾಯಣಗಳಲ್ಲಿ ಬಣ್ಣಿಸಲಾಗಿದೆ.

ರಾಮ ನಮ್ಮ ಅಂದರೆ ಹಿಂದೂಗಳ ದೇವತೆ ಮತ್ತು ಹಿಂದೂಗಳ ದೇವತೆಗಳೆಲ್ಲರೂ ವಿಮರ್ಶಾತೀತರು. ಅವರ ಬಗ್ಗೆ ಹಾಸ್ಯ, ನಿಂದನೆ, ವಿಮರ್ಶೆ ಯಾವುದೂ ಸಲ್ಲದು ಎಂಬ ಹಠ, ನಮ್ಮ ಪರಂಪರೆಯಲ್ಲಿ ಹಿಂದೆ ಎಂದೂ ಇರಲಿಲ್ಲ. ಈ ಬಗೆಯ ಹಠ, 20ನೆಯ ಶತಮಾನದ ಉತ್ತರಾರ್ಧದಲ್ಲಿ ಬಿ.ಜೆ.ಪಿ. ಪ್ರಾರಂಭಿಸಿದ 'ರಾಮಜನ್ಮಭೂಮಿ ಚಳವಳಿ'ಯ ಒಂದು ಅನಿಷ್ಟ ಬಳುವಳಿ. ರಾಮಾಯಣ ಒಂದು ಕಾವ್ಯಕೃತಿಯಾಗಿರುವುದರ ಬದಲು ವಿಮರ್ಶೆಗೆ ಹೊರತಾದ ಧಾರ್ಮಿಕ ಪವಿತ್ರ ಗ್ರಂಥವಾಗಿದ್ದರೆ, ಅದರ ನೂರಾರು ಪಠ್ಯಗಳು, ಬಗೆಬಗೆಯ ಓದುಗಳು, ಬೌದ್ಧ ಜೈನ ರಾಮಾಯಣಗಳು, ಆಗ್ನೇಯ ಏಷ್ಯದ ವಿವಿಧ ರಾಷ್ಟ್ರಗಳ ರಾಮಾಯಣದ ವಿಶಿಷ್ಟ ನಿರೂಪಣೆಗಳು ಇವೆಲ್ಲ ಇರುತ್ತಿರಲಿಲ್ಲ.


ರಾಮಾಯಣದ ವಿವಿಧ ಪಾಠಗಳನ್ನೂ, ರಾಮನ ಪಾತ್ರಚಿತ್ರಣವನ್ನೂ, ಸೂಕ್ಷ್ಮ ಓದು ಮತ್ತು ಮರುವಿಮರ್ಶೆಗೆ ಒಳಪಡಿಸಿ, 1984ರಲ್ಲಿ ಖ್ಯಾತ ವಿಮರ್ಶಕ ಹಾಗೂ ಮೈಸೂರು ವಿಶ್ವವಿದ್ಯಾಲಯದ ಆಂಗ್ಲ ಭಾಷಾ ಪ್ರಾಧ್ಯಾಪಕ ಡಾ। ಪೋಲಂಕಿ ರಾಮಮೂರ್ತಿ 'ಸೀತಾಯಣ' ಎಂಬ ಪುಸ್ತಕ ಪ್ರಕಟಿಸಿದಾಗ (ವಿಚಾರಿ ಪ್ರಕಾಶನ, ಶಿವಮೊಗ್ಗ) ಕರ್ನಾಟಕದಲ್ಲಿ ಆರ್.ಎಸ್.ಎಸ್. ವಿಶ್ವ ಹಿಂದೂ ಪರಿಷತ್ ಮುಂತಾದ ಹಿಂದುತ್ವದ ಸಂಘಟನೆಗಳು ಆ ಕೃತಿಯ ವಿರುದ್ಧ ಪ್ರತಿಭಟನೆಯ ಹೆಸರಿನಲ್ಲಿ ದೊಡ್ಡ ಕೋಲಾಹಲವನ್ನೇ ನಡೆಸಿದವು. 1985ರಲ್ಲಿ ಉಡುಪಿಯಲ್ಲಿ ಬಂಡಾಯ ಸಾಹಿತ್ಯ ಸಂಘಟನೆ ಏರ್ಪಡಿಸಿದ್ದ ಪೋಲಂಕಿಯವರ ಉಪನ್ಯಾಸ ಕಾರ್ಯಕ್ರಮವನ್ನು ಸಂಘಪರಿವಾರದ ಈ ಬಗೆಯ ಪ್ರತಿಭಟನೆಯ ಕಾರಣಕ್ಕೆ ಸಭೆ ನಡೆಯುತ್ತಿದ್ದಂತೆಯೇ ರದ್ದುಪಡಿಸಬೇಕಾಯಿತು.

ರಾಮಾಯಣದ ನೂರಾರು ಪಠ್ಯಗಳ ಕುರಿತ ಎ.ಕೆ.ರಾಮನುಜನ್‌ರ ಖ್ಯಾತ ಪ್ರಬಂಧ **'Three hundred Ramayanas'** ಕೂಡಾ ಸಂಘ ಪರಿವಾರದಿಂದ ಇಂತಹದ್ದೇ ಪ್ರತಿಭಟನೆಯನ್ನು ಎದುರಿಸಿತು. ದೆಹಲಿ ವಿಶ್ವವಿದ್ಯಾಲಯದ ಪದವಿ ತರಗತಿಯ ವಿದ್ಯಾರ್ಥಿಗಳಿಗೆ ಈ ಪ್ರಬಂಧವನ್ನು ಪಠ್ಯವಾಗಿ ನಿಗದಿಗೊಳಿಸಲಾಗಿತ್ತು, ಸಂಘಪರಿವಾರದ ವಿದ್ಯಾರ್ಥಿ ಸಂಘಟನೆ ಎಬಿವಿಪಿ ಇದರ ವಿರುದ್ಧ ಸತತವಾಗಿ ಬೀದಿ ರಂಪ ನಡೆಸಿ, ತರಗತಿಗಳು ನಡೆಯುತ್ತಿರುವಾಗ ತನ್ನ ಕಿರಾತ ಪಡೆಯನ್ನು ಒಳನುಗ್ಗಿಸಿ, ಕೊನೆಗೂ ದೆಹಲಿ ವಿಶ್ವವಿದ್ಯಾಲಯ 2012ರಲ್ಲಿ ರಾಮಾನುಜನ್‌ರ ಪ್ರಬಂಧವನ್ನು ನಿಗದಿತ ಪಠ್ಯಗಳ ಪಟ್ಟಿಯಿಂದ ತೆಗೆದುಹಾಕುವಂತೆ ಮಾಡಿತು.

ಪೋಲಂಕಿ ರಾಮಮೂರ್ತಿ ಮತ್ತು ಎ.ಕೆ.ರಾಮಾನುಜನ್ ಇಬ್ಬರೂ ಪ್ರಕಾಂಡ ಪಂಡಿತರು; ಜೊತೆಗೆ ಸೂಕ್ಷ್ಮಜ್ಞರು. ಆದರೂ ಅವರು ಯಾಕೆ ಸಂಘ ಪರಿವಾರದ ದುರಾಗ್ರಹಕ್ಕೆ ಗುರಿಯಾಗಬೇಕಾಯಿತು? ಇಬ್ಬರು ವಿದ್ವಾಂಸರೂ ರಾಮಾಯಣವನ್ನು ಒಂದು ಕಾವ್ಯವೆಂದು ಓದಿದರೇ ಹೊರತು ಪವಿತ್ರ ಗ್ರಂಥ ಎಂದು ಅದರ ಪಾರಾಯಣ ಮಾಡುತ್ತ ಕೂರಲಿಲ್ಲ. ಇಬ್ಬರೂ ರಾಮಾಯಣವನ್ನು ವಿಭಿನ್ನ ಓದು ಮತ್ತು ಅರ್ಥೈಸುವಿಕೆಗಳ ಸಾಧ್ಯತೆಗಳನ್ನು ಹೊಂದಿದ ಒಂದು ಕಥನ ಪರಂಪರೆ ಎಂದು ಭಾವಿಸಿದರೇ ವಿನಃ ಅದು ಪ್ರಶ್ನಾತೀತವಾದ ಧಾರ್ಮಿಕ ಪಠ್ಯವೆಂದಾಗಲೀ, ಅಧಿಕೃತ ಇತಿಹಾಸವೆಂದಾಗಲೀ ತಿಳಿಯಲಿಲ್ಲ.

ಕಳೆದ ಶತಮಾನದ 80, 90ರ ದಶಕಗಳಲ್ಲೇ ಸಂಘ ಪರಿವಾರ ಬಲಾತ್ಕಾರದಿಂದ ಇಂತಹ ಚಿಂತಕರ ಬಾಯಿ ಮುಚ್ಚಿಸುವ ತನ್ನ ಅಭಿಯಾನವನ್ನು ಪ್ರಾರಂಭಿಸಿತ್ತು, ಈಗ ತನ್ನದೇ ಸರಕಾರದ ಮುಖಾಂತರ ಅಧಿಕೃತವಾಗಿಯೂ ನಾಗರಿಕ ಸಮಾಜದಲ್ಲಿ ತನ್ನ ನಾನಾ ಸಂಘಟನೆಗಳ ತೋಳ್ಬಲದ ದಾದಾಗಿರಿಯ ಮೂಲಕ ಅನಧಿಕೃತವಾಗಿಯೂ ಆ ಕೆಲಸವನ್ನು ಮುಂದುವರಿಸಿದೆ. ಮಹೇಶಚಂದ್ರಗುರು ಅವರು ಎದುರಿಸುತ್ತಿರುವ ಪೊಲೀಸು ಕೇಸು, ಜೈಲುವಾಸ ಮತ್ತು ಉದ್ಯೋಗದ ಅಮಾನತು, ಸಂಘಪರಿವಾರದ ದಬ್ಬಾಳಿಕೆಯ ಇತ್ತೀಚಿಗಿನ ಉದಾಹರಣೆ. ಹಾಗಾಗಿ ರಾಮನನ್ನು ಅವರು 'ಲೋಫರ್' ಎಂದು ಕರೆದದ್ದು ಸರಿಯೋ ಎಂಬ ಚರ್ಚೆಯೇ ಅಪ್ರಸ್ತುತ. ಮಹೇಶಚಂದ್ರಗುರು ಅವರ ಬಗ್ಗೆ ಸಂಘ ಪರಿವಾರದ ತಗಾದೆ ಇರುವುದು ರಾಮಾಯಣದ ಮೌಲ್ಯಗಳನ್ನು ಪ್ರಶ್ನಿಸುವ ಅವರ ರಾಜಕೀಯ ನಿಲುವಿನ ಬಗ್ಗೆ; ಅವರು ಬಳಸಿದ 'ಲೋಫರ್' ಎಂಬ ಶಬ್ದದ ಬಗ್ಗೆ ಅಲ್ಲ, ಹಾಗಾಗಿ ಈಗ ಮಹೇಶಚಂದ್ರಗುರು ಅವರಿಗೆ ಪ್ರಜಾಪ್ರಭುತ್ವವನ್ನು ಪ್ರೀತಿಸುವ ಎಲ್ಲರೂ ಬೇಷರತ್ ಬೆಂಬಲ ನೀಡಬೇಕಾಗಿದೆ.

● ಜೆ. ರಾಜಶೇಖರ



ಯಡ್ಡಿ ಯಾವ 'ಉಸಿರುಗಟ್ಟಿಸುವ ವಾತಾವರಣದ' ನೆಪಕೊಟ್ಟು ಬಿಜೆಪಿಯಿಂದ ಹೊರನಡೆದಿದ್ದನೋ ಆ ವಾತಾವರಣವನ್ನು ಅನಂತಕುಮಾರನ ಜೊತೆಗೂಡಿ ಸಂಘ ಪರಿವಾರದ ನಿರ್ದೇಶನದಂತೆ ಸೃಷ್ಟಿ ಮಾಡಿದ್ದೇ ಈ ಈಶ್ವರಪ್ಪ. ಹಾಗಾಗಿ ಯಡ್ಡಿಗೆ ಈಶು ಮೇಲೆ ವಿಶೇಷ 'ಮಮಕಾರ'. ಅದಕ್ಕೋಸ್ಕರವೇ ಯಡ್ಡಿ ತನ್ನ ಶತ್ರುಸಂಹಾರ ಯಾಗವನ್ನು ಈಶ್ವರಪ್ಪನಿಂದಲೇ ಶುರುಮಾಡಿದ್ದಾನೆ. ಈಶ್ವರಪ್ಪನ ಕ್ಷೇತ್ರವನ್ನೇ ಕಿತ್ತುಕೊಳ್ಳುವುದು ಅದರ ಮೊದಲ ಎಪಿಸೋಡು.



ಯಡ್ಡಿ ಬ್ಯಾಟಿಂಗ್‌ಗೆ ಈಶು ಢಮಾರ್

ಅನಂತಕುಮಾರ್ ಆದಿಯಾಗಿ ಈಶ್ವರಪ್ಪನಂತಹ ಎಡಬಿಡಂಗಿ ಕೇಸರಿ ಶೂರರಿಗೆ ಹಾರರ್ ಸಿನಿಮಾದ ಟ್ರೈಲರ್ ಶುರುವಾಗಿದೆ. ಮೊನ್ನೆ ಬೆಂಗಳೂರಿನ ಬಿಜೆಪಿ ಕಚೇರಿಯಲ್ಲಿ ಸಿಟಿ ರವಿಯಂತಹ ಸೆಕೆಂಡ್ ಲೈನ್ ಲೀಡರ್‌ಗಳೆಲ್ಲ ಸಭೆ ಸೇರಿ ಚರ್ಚೆ ನಡೆಸಿದ ಉದ್ದೇಶವೇ ಟ್ರೈಲರ್ ಹಂತದಲ್ಲೇ 'ಯಡ್ಡಿ ರಿಟರ್ನ್ಸ್' ಹಾರರ್ ಸಿನಿಮಾಗೆ ಸೆನ್ಸಾರ್ ಮಾಡಬೇಕು ಅನ್ನೋದಾಗಿತ್ತು. ಈಗಾಗಲೇ ಯಡ್ಡಿ ರಾಜ್ಯ ಮತ್ತು ಜಿಲ್ಲಾ ಪದಾಧಿಕಾರಿಗಳ ಪಟ್ಟಿಯನ್ನು ರಿಲೀಸ್ ಮಾಡಿದ್ದಾರೆ. ಅದನ್ನು ಬಿಜೆಪಿಯ ಪಟ್ಟಿ ಅನ್ನೋದಕ್ಕಿಂತ ಕೆಜೆಪಿ ಪಟ್ಟಿ ಅನ್ನೋದೆ ಸೂಕ್ತವೇನೊ. ಯಾಕೆಂದರೆ ಶಿವಮೊಗ್ಗಕ್ಕೆ ಜಿಲ್ಲಾಧ್ಯಕ್ಷನಾಗಿ ನೇಮಕವಾಗಿರೊ ಎಸ್.ರುದ್ರೇಗೌಡ, ತುಮಕೂರಿನ ಜ್ಯೋತಿ ಗಣೇಶ್, ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಕೆ.ನಾಗೇಶ್, ಕಲ್ಬುರ್ಗಿ ಗ್ರಾಮಾಂತರದ ದೊಡ್ಡನಗೌಡ ಪಾಟೀಲ ನರಿಬೋಳ, ವಿಜಯಪುರದ ವಿಠಲ ಕಟಕದೋಂಡ, ಬೀದರ್‌ನ ಡಾ.ಶೈಲೇಂದ್ರ ಕಾಶಿನಾಥ ಬೆಲ್ದಾಳೆ, ಬೆಳಗಾವಿ ಗ್ರಾಮಾಂತರದ ಡಾ.ವಿಶ್ವನಾಥ ಈರನಗೌಡ ಪಾಟೀಲ, ಚಾಮರಾಜನಗರದ ಪ್ರೊ.ಕೆ.ಆರ್.ಮಲ್ಲಿಕಾರ್ಜುನಪ್ಪ, ಹಾವೇರಿಯ ಶಿವರಾಜ ಶರಣಪ್ಪ ಸಜ್ಜನರ್ ಇವರೆಲ್ಲ 2013ರ ವಿಧಾನಸಭಾ ಚುನಾವಣೆಯಲ್ಲಿ ಯಡ್ಡಿಯ ಕೆಜೆಪಿಯಿಂದ ತೆಂಗಿನಕಾಯಿ ಹೊಡೆದವರು. ಯಡ್ಡಿ ಮಹಾತ್ಮ ಅವರಿಗೆಲ್ಲ ಜಿಲ್ಲಾಧ್ಯಕ್ಷ ಮತ್ತು ಪ್ರಧಾನ ಕಾರ್ಯದರ್ಶಿ ಹುದ್ದೆಗಳನ್ನು ದಯಪಾಲಿಸಿ, ಕೇಸರಿಪುತ್ರರ ಕೈಗೆ ಚೊಂಬು ಕೊಟ್ಟಿದ್ದಾರೆ. ನೋ ಡೌಟ್, ಯಡ್ಡಿ ಬಿಜೆಪಿಗೆ ವಾಪಾಸ್ ಬಂದಾಗಲೇ ಆತ ಇಂತಿಂತವರನ್ನು ಮಟ್ಟಹಾಕಬೇಕು ಅನ್ನೋ ಸ್ಕೆಚ್ ಹಾಕಿಕೊಂಡು ಬಂದಿದ್ದ. ತಾನು ಕೆಜೆಪಿಯಲ್ಲಿದ್ದಾಗ ಯಾರೆಲ್ಲಾ ಬಿಜೆಪಿಯಲ್ಲಿದ್ದುಕೊಂಡು ನಾಲಿಗೆ ಹರಿಬಿಟ್ಟಿದ್ದರೊ, ಯಡ್ಡಿ ತೊಲಗಿದನಲ್ಲಾ ಅಂತ ನಿಟ್ಟುಸಿರುಗೈದಿದ್ದರೋ ಅವರಿಗೆಲ್ಲಾ ಒಂದು ಗತಿ ಕಾಣಿಸಿಯೇ ತೀರುತ್ತಾನೆ ಅನ್ನೋದು ಖಾತ್ರಿಯಾಗಿತ್ತು. ಅದೀಗ ನಿಜವಾಗುತ್ತಿದೆಯಷ್ಟೆ. ಬಿಜೆಪಿಗೆ ಯಡ್ಡಿ ಮತ್ತವನು ಹೊತ್ತು ತರುವ ಲಿಂಗಾಯತರ ಸಾಲಿಡ್ ಓಟುಗಳು ಅನಿವಾರ್ಯ ಅನ್ನೋದನ್ನು 2013ರ ಎಲೆಕ್ಷನ್ ಸಾಬೀತು ಮಾಡಿರುವುದರಿಂದ ಯಡ್ಡಿ ಗೂಟ ಕಿತ್ಕೊಂಡ ಗೂಳಿಯಂತೆ ದಾಳಿ ಮಾಡುತ್ತಿದ್ದಾನೆ. ಆ ದಾಳಿಯ ಆರಂಭಿಕ ಬಲಿ ಬಾಯಿ ಹರುಕು ಈಶ್ವರಪ್ಪ!

ಇದು ಶಿವಮೊಗ್ಗ ಪೊಲಿಟಿಕ್ಸ್

ಯಡ್ಡಿ 'ತೆಂಗಿನಕಾಯಿ' ಗುಡ್ಡೆ ಹಾಕಿಕೊಂಡು ಬೀದಿ ಬದಿ ಬಿಕರಿಗೆ ಕೂತಾಗ ಆತನನ್ನು ಹಿಗ್ಗಾಮುಗ್ಗಾ ಹೀಯಾಳಿಸಿದವರಲ್ಲಿ ಬಾಯಿಬೇನೆಯ ಈಶ್ವರಪ್ಪನೇ ಮೊದಲಿಗ. ನಿಜ ಹೇಳಬೇಕೆಂದರೆ, ಯಡ್ಡಿ ಬಿಜೆಪಿಯಲ್ಲಿ ಇದ್ದಾಗಿನಿಂದಲೇ ಈಶು ದಿಶುಂದಿಶುಂ ಶುರುಹಚ್ಚಿಕೊಂಡಿದ್ದ. ಯಡ್ಡಿ ಯಾವ 'ಉಸಿರುಗಟ್ಟಿಸುವ ವಾತಾವರಣದ' ನೆಪಕೊಟ್ಟು ಬಿಜೆಪಿಯಿಂದ ಹೊರನಡೆದಿದ್ದನೋ ಆ ವಾತಾವರಣವನ್ನು ಅನಂತಕುಮಾರನ ಜೊತೆಗೂಡಿ ಸಂಘ ಪರಿವಾರದ ನಿರ್ದೇಶನದಂತೆ ಸೃಷ್ಟಿ ಮಾಡಿದ್ದೇ ಈ ಈಶ್ವರಪ್ಪ. ಹಾಗಾಗಿ ಯಡ್ಡಿಗೆ ಈಶು ಮೇಲೆ ವಿಶೇಷ 'ಮಮಕಾರ'. ಅದಕ್ಕೋಸ್ಕರವೇ ಯಡ್ಡಿ ತನ್ನ ಶತ್ರುಸಂಹಾರ ಯಾಗವನ್ನು ಈಶ್ವರಪ್ಪನಿಂದಲೇ ಶುರುಮಾಡಿದ್ದಾನೆ.

ಯಡ್ಯೂರಪ್ಪ ತನಗೆ ಏಟು ಕೊಡುತ್ತಾನೆ ಅನ್ನೋದು ಸ್ವತಃ ಈಶುಗೆ ಖಾತ್ರಿಯಾಗಿತ್ತಾದರೂ ಅದು ಇಷ್ಟುಬೇಗ ಅಟಕಾಯಿಸಿಕೊಳ್ಳುತ್ತೆ ಅಂತ ಆತ ನಿರೀಕ್ಷಿಸಿರಲಿಲ್ಲ ಅನ್ನಿಸುತ್ತೆ. ಯಾವಾಗ ಶಿವಮೊಗ್ಗ ಬಿಜೆಪಿ ಜಿಲ್ಲಾಧ್ಯಕ್ಷನನ್ನಾಗಿ ಎಸ್.ರುದ್ರೇಗೌಡ ಎನ್ನುವ ತನ್ನ ಜಾತಸ್ಥ ಉದ್ಯಮಿಯನ್ನು ಯಡ್ಡಿ ಪ್ರತಿಷ್ಠಾಪಿಸಿದನೋ ಆಗಲೇ ಈಶ್ವರಪ್ಪನ ಟೈರು ಸಣ್ಣದಾಗಿ ಪಂಕ್ಚರ್ ಆಗಿದೆ. ಯಾಕೆಂದರೆ 2013ರ ಎಲೆಕ್ಷನ್‌ನಲ್ಲಿ ಶಿವಮೊಗ್ಗ ವಿಧಾನಸಭಾ ಕ್ಷೇತ್ರದಿಂದ ಈಶು ಮಕಾಡೆ ಮಲಗುವಂತೆ ಮಾಡಿದ್ದೇ ಕೆಜೆಪಿಯ ಹುರಿಯಾಳು ಈ ರುದ್ರೇಗೌಡರು. ಶಿವಮೊಗ್ಗ ಮತಕ್ಷೇತ್ರದಲ್ಲಿ ಬ್ರಾಹ್ಮಣ ಮತ್ತು ಸಾಧು ಲಿಂಗಾಯತ ಮತಗಳೇ ನಿರ್ಣಾಯಕ. ಈಶ್ವರಪ್ಪ ಇಲ್ಲಿಂದ ಪದೇಪದೇ ಗೆದ್ದು ಬರುತ್ತಿದ್ದುದರ ರಹಸ್ಯವೇ ಇದು. ಯಡ್ಡಿ ಕಾರಣಕ್ಕೆ ಲಿಂಗಾಯತರು ಬಿಜೆಪಿಗೆ ಮತ ಒತ್ತುತ್ತಿದ್ದರೆ, ಬ್ರಾಹ್ಮಣ ಮತಗಳು ಕಮಲದ ಸಾಂಪ್ರದಾಯಿಕ ಹಾದಿ ಹಿಡಿಯುತ್ತಿದ್ದವು. ಆದರೆ 2013 ಚುನಾವಣೆಯಲ್ಲಿ ಈ ಸೂತ್ರವೇ ಈಶು ಕೈತಪ್ಪಿತು.

ಯಡ್ಡಿ ಕೆಜೆಪಿ ಕಟ್ಟಿಕೊಂಡು ರೊಕ್ಕಸ್ಥ ರುದ್ರೇಗೌಡರ ಕೈಗೆ ತೆಂಗಿನಕಾಯಿ ಕೊಟ್ಟು ಕಣಕ್ಕಿಳಿಸಿದರೆ, ಅತ್ತ ಕಾಂಗ್ರೆಸ್ ಈ ಬಾರಿ ಬ್ರಾಹ್ಮಣ ಸಮುದಾಯದ ಕೆ.ಬಿ. ಪ್ರಸನ್ನಕುಮಾರನನ್ನೇ ಅಖಾಡಕ್ಕಿಳಿಸಿತು. ಯಾವ ಮತಗಳು ಈಶ್ವರಪ್ಪನನ್ನು ಗೆಲುವಿನ ದಡ ಮುಟ್ಟಿಸುತ್ತಿದ್ದವೋ ಅವು ಹಂಚಿಹೋದವು. ಈ ಸಲ ತಿಪ್ಪರಲಾಗ ಹಾಕಿದರೂ ಬಿಜೆಪಿ ಅಧಿಕಾರಕ್ಕೆ ಬರೋದಿಲ್ಲ ಅನ್ನೋದನ್ನು ಖಾತ್ರಿಮಾಡಿಕೊಂಡ ಬ್ರಾಹ್ಮಣರು ಈಶ್ವರಪ್ಪನಿಗೆ ಒತ್ತಿ ತಮ್ಮ ಮತಗಳು ವೇಸ್ಟ್ ಆಗೋದ್ಯಾಕೆ, ನಮ್ಮವನೊಬ್ಬ ಎಂಎಲ್‌ಎ ಆಗಲಿಬಿಡಿ ಅಂತ ಕಾಂಗ್ರೆಸ್‌ಗೆ ಮತ ಹಾಕಿದರು. ಪ್ರಸನ್ನಕುಮಾರ್ ಕೂಡಾ ಜಾತಿ ಸಂಘಟನೆಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡದ್ದು ಇಲ್ಲಿ ವರ್ಕ್‌ಔಟ್ ಆಯ್ತು. ಇನ್ನು ಯಡ್ಡಿ ವಿರುದ್ಧ ಬಾಯಿಗೆ ಬಂದಂತೆ ಒದರಾಡಿದ್ದ ಈಶ್ವರಪ್ಪನಿಗೆ ಲಿಂಗಾಯತರು ಮತಹಾಕುವ ಮಾತೇ ಇರಲಿಲ್ಲ. ಹಾಗಾಗಿ ಈಶು ಸೋಲುವುದಿರಲಿ, ಎರಡನೆ ಸ್ಥಾನಕ್ಕೂ ಲಾಯಕ್ಕಿಲ್ಲದೆ ಮೂರಕ್ಕೆ ಕುಸಿದಿದ್ದ. ಹಾಗೆ ನೋಡಿದರೆ, ಕೆಜೆಪಿಯ ರುದ್ರೇಗೌಡರು ಕಾಂಗ್ರೆಸ್ ಅಭ್ಯರ್ಥಿಗೆ ಸರಿಯಾಗೇ ಬೆವರಿಳಿಸಿದ್ದರು. ಪ್ರಸನ್ನಕುಮಾರ್ 39,355 ಮತ ಗಳಿಸಿದ್ದರೆ, ರುದ್ರೇಗೌಡರು ಜೋಳಿಗೆಗೆ ಇಳಿಸಿಕೊಂಡದ್ದು 39,077 ಮತಗಳನ್ನು. ಅಂದರೆ ರುದ್ರೇಗೌಡ ಸೋತಿದ್ದು ಕೇವಲ 278 ಮತಗಳ ಅಂತರದಲ್ಲಿ ಮಾತ್ರ. ಈಶ್ವರಪ್ಪನಿಗೆ ಸಿಕ್ಕಿದ್ದು 33,462 ಮತಗಳಷ್ಟೆ.

ಅಲ್ಲಿಗೆ ಯಡ್ಡಿಯ ಶಪಥ ಈಡೇರಿತ್ತು. ತಾನು ಗೆಲ್ಲದಿದ್ದರೂ ಬಿಜೆಪಿಯನ್ನು ಮಕಾಡೆ ಮಲಗಿಸಬೇಕೆನ್ನುವ ವಿಕೃತಕ್ಕೆ 'ಈಶು' ದಬಾಕಿಕೊಂಡಿದ್ದ. ಶಿವಮೊಗ್ಗದ ಕೇಸರಿ ಬ್ರಿಗೇಡ್‌ಗೆ ಈಶುಗಿಂತ ಯಡ್ಡಿಯೇ ಗ್ರೇಟ್ ಅನ್ನೋದೂ ಸಾಬೀತಾಗಿತ್ತು.

ಈಶ್ವರಪ್ಪನ ತಲೆಮೇಲೆ ಯಡ್ಡಿ ಪಾದ

'ಶಿವಮೊಗ್ಗ ಜಿಲ್ಲಾಧ್ಯಕ್ಷನನ್ನಾಗಿ ಮಾಡಿರುವ ಎಸ್.ರುದ್ರೇಗೌಡನನ್ನು ಬದಲಾಯಿಸಿ, ಆ ಜಾಗಕ್ಕೆ ಬೇರೆಯವರನ್ನು ನೇಮಕ ಮಾಡಿ' ಅಂತ ಈಶ್ವರಪ್ಪ ತಗಾದೆ ತೆಗೆಯುತ್ತಿರೋದು ಆತ ಕಳೆದ ಎಲೆಕ್ಷನ್‌ನಲ್ಲಿ ತನ್ನನ್ನು ಸೋಲಿಸಿದ್ದ ಎಂಬ ಜಿದ್ದಿಗಲ್ಲ; ಅದಕ್ಕೆ ಬೇರೆಯದೇ ಒಂದು ಕಾರಣವಿದೆ. ಬಾಯಿಬೇನೆಯ ಈಶ್ವರಪ್ಪನನ್ನು ರಾಜಕೀಯವಾಗಿ ಮುಗಿಸಲು ಯಡ್ಡಿ ಹಾಕಿಕೊಂಡಿರುವ ಪ್ಲಾನ್ ಹೇಗಿದೆಯೆಂದರೆ, ಒಂದೇ ಏಟಿಗೆ ಈಶ್ವರಪ್ಪ ಎಂಬ ಹೆಸರೇ ಕೇಸರಿ ಪುಸ್ತಕದಿಂದ ಅಳಿಸಿಹೋಗಬೇಕು. ಆ ಚದುರಂಗದಾಟದ ಮೊದಲ ಕಾಯಿಯೇ ರುದ್ರೇಗೌಡ!

ಸದ್ಯ ಯಡಿಯೂರಪ್ಪ ಈಗ ಶಿವಮೊಗ್ಗ ಜಿಲ್ಲೆಯ ಸಂಸದ. ಅವನ ಮಗ ರಾಘವೇಂದ್ರ ಶಿಕಾರಿಪುರದ ಶಾಸಕ. ಎಂಪಿಯಾಗಿ ಗೆದ್ದರೆ ಮೋದಿ ಸರ್ಕಾರದಲ್ಲಿ ಮಂತ್ರಿಯಾಗಬಹುದೆನ್ನುವ ಹಗಲುಗನಸಿನಿಂದ ಶಿವಮೊಗ್ಗ ಎಂಪಿ ಎಲೆಕ್ಷನ್‌ಗೆ ನಿಂತಿದ್ದನೇ ಹೊ… ರಾಷ್ಟ್ರರಾಜಕಾರಣದಲ್ಲಿ ಆತನಿಗೆ ಕಿಂಚಿತ್ತೂ ಆಸಕ್ತಿ… ಯಾವಾಗ ತನಗೆ ದಿಲ್ಲಿ ನಾಯಕರು ಮಣೆ ಹಾ… ಎನ್ನುವುದು ಖಾತ್ರಿಯಾಯಿತೋ, ಆಗ ತನ್ನ ಮಗ… ಅಲ್ಲಿ ಭವಿಷ್ಯವಿಲ್ಲ ಎಂಬ ಸಂಗತಿ ಯಡ್ಡಿಗೆ ಮನದ… ಹೋಗಿದೆ. ರಾಘುಗೆ ಏನಾದರು ರಾಜಕೀಯ ಭ… ಅಂತ ಕಲ್ಪಿಸುವುದಾದರೆ ಅದು ತನ್ನ ಅಧಿಪತ್ಯದ … ರಾಜಕಾರಣದಲ್ಲಿ ಸಾಧ್ಯವೇ ಹೊರತು, ಅವ… ಸಂಸದನನ್ನಾಗಿಸಿ ದಿಲ್ಲಿಗೆ ದೂಡಿದರೆ ತನ್ನ ಮೇಲಿನ ಸಿ… ಹಿತಶತ್ರುಗಳು ರಾಘುನನ್ನು ಮಟ್ಟಹಾಕುತ್ತಾರೆ ಅನ್ನೊ… ಯಡ್ಡಿಗೆ ಖಾತ್ರಿಯಾಗಿದೆ. ಅಪ್ಪ-ಮಗ ಇಬ್ಬರೂ … ರಾಜಕಾರಣದಲ್ಲೇ ಇರಬೇಕೆಂದರೆ, ಇಬ್ಬರಿಗೂ ಎ… ಪ್ರತ್ಯೇಕ ವಿಧಾನಸಭಾ ಕ್ಷೇತ್ರಗಳು ಬೇಕು. ಅಷ್ಟೇ… ಪ್ರಭಾವಿಯೂ ಅಲ್ಲದ, ಪಕ್ಷ ಸಂಘಟನೆಯ ಎಬಿಸಿಡಿ… ಗೊತ್ತಿಲ್ಲದ ಮಗನನ್ನು ಹೊಸ ಕ್ಷೇತ್ರದಲ್ಲಿ ಪ್ರತಿಷ್ಠಾಪಿ… ಹೆಣಗಾಡುವುದಕ್ಕಿಂತ, ಅವನನ್ನು ಸುಭದ್ರ ಶಿಕಾರಿಪುರ… ಬಿಟ್ಟು ತಾನೇ ಹೊಸ ಕ್ಷೇತ್ರಕ್ಕೆ ಅಟಕಾಯಿಸಿಕೊಂ… ಹೇಗೆನ್ನುವುದು ಯಡ್ಡಿಯ ಲೆಕ್ಕಾಚಾರ. ಅಂತಹ ಲೆಕ್ಕಾ… ಹೊಳೆದಿದ್ದೇ ತಡ ಫಲವತ್ತಾದ ಕ್ಷೇತ್ರವಾಗಿ ಕಾಣಿಸಿಕೊಂಡ… ಈಶ್ವರಪ್ಪನ ಶಿವಮೊಗ್ಗ ಕಾನ್‌ಸ್ಟುಟಿಯೆನ್ಸಿ.

ಇಲ್ಲಿ ಒಂದೇ ಕಲ್ಲಿಗೆ ಎರಡು ಹಕ್ಕಿ ನೆಲಕ್ಕುರುಳಿಸ… ಯಡ್ಡಿ ಗೇಮ್‌ಪ್ಲಾನ್ ರೆಡಿ ಮಾಡಿಕೊಂಡಿದ್ದಾ… ಮೊದಲನೆಯದು ತನ್ನ ಎದುರು ಸೆಟೆದು ನಿಲ್ಲುತ್ತಿದ್ದ… ಈಶ್ವರಪ್ಪನಿಗೆ ಹೇಳಿಕೊಳ್ಳಲು ಒಂದು ಕ್ಷೇತ್ರವೂ ಇಲ್ಲದ… ಮಾಡಿ ನಿರಾಶ್ರಿತ ಶಿಬಿರ ಸೇರಿಸುವುದು; ಎರಡನೆಯ… ಬ್ರಾಹ್ಮಣ ಮತ್ತು ಲಿಂಗಾಯತ ಕಾಂಬಿನೇಷನ್‌ನ ಸ… ಕ್ಷೇತ್ರದಲ್ಲಿ ಗೆಲುವನ್ನು ಖಾತ್ರಿಪಡಿಸಿಕೊಳ್ಳುವುದು. ಶಿಕಾರಿಪುರದಲ್ಲಿ ಕಳೆದ ಎರಡು ಎಲೆಕ್ಷನ್‌ಗಳಲ್ಲಿ … ಮತ್ತು ಮಗ ರಾಘವೇಂದ್ರನ ನಿರಾಯಾಸ ಗೆಲು… ಕಾಂಗ್ರೆಸ್‌ನಿಂದ ಅಡ್ಡಿಯಾಗುತ್ತಲೇ ಬಂದಿದ್ದ ಅಂದಕಾಲತ್ತಿ… ಬಂಟ ಮೀಸೆ ಶಾಂತವೀರಪ್ಪನನ್ನು ಈಗಾಗಲೇ ಬು… ಹಾಕಿಕೊಂಡಿರುವ ಯಡ್ಡಿ ಮಗನ ಗೆಲುವಿಗೆ ಹಾದಿ ಸುಗ… ಮಾಡಿಕೊಂಡಿದ್ದಾನೆ. ಈಗ ಹೇಗೂ ಈಶ್ವರ… ಎಂಎಲ್‌ಸಿಯಾಗಿ ಅಧಿಕಾರದಲ್ಲಿರುವುದರಿಂದ ಮತ್ತೊಂ… ಅವಧಿಗೂ ನಿನ್ನನ್ನು ಎಂಎಲ್‌ಸಿಯಾಗೇ ಆಯ್ಕೆ ಮಾ… ಅಧಿಕಾರ ಉಳಿಯುವಂತೆ ಮಾಡುತ್ತೇವೆ ಅನ್ನೋ ಆಶ್ವಾ… ಕೊಟ್ಟು ಇತ್ತ ಶಿವಮೊಗ್ಗ ಕ್ಷೇತ್ರವನ್ನು ತಾನು ಕ… ಮಾಡಿಕೊಂಡರೆ ಗೆಲುವೂ ನಿಕ್ಕಿಯಾಗುತ್ತೆ, ಈಶ್ವರಪ್ಪ… ಒಂದು ಗತಿಯನ್ನೂ ಕಾಣಿಸಿದಂತಾಗುತ್ತೆ ಅನ್ನೋದು ಯ… ಹುನ್ನಾರ.


ಎಂಪಿಗೆ ರುದ್ರೇಗೌಡ್ರು?


ಈ ಮೊದಲು ಯಡ್ಡಿ, ರುದ್ರೇಗೌಡರನ್ನೇ ಶಿವಮೊ… ಕ್ಷೇತ್ರದ ಬಿಜೆಪಿ ಅಭ್ಯರ್ಥಿಯನ್ನಾಗಿ ಮಾಡುತ್ತಾನೆ ಅನ್ನೊ… ಮಾತುಗಳು ಕೇಳಿಬರುತ್ತಿದ್ದವು. ಆದರೆ ಅಪ್ಪ-ಮಗ ಇಬ್ಬರ…


ಸೊರಗಿದ ಕಾಂಗ್ರೆಸ್‌ಗೆ ಕಾಗೋಡು ಟಾನಿಕ್ ಆಗ್ತಾರಾ

ಬಿಜೆಪಿಯೊಳಗೆ ಭುಗಿಲೆದ್ದಿದ್ದ ಯಡ್ಡಿ ಫ್ಯಾಕ್ಟರ್ ಎನ್‌ಕ್ಯಾಶ್ ಮಾಡಿಕೊಳ್ಳುವಲ್ಲಿ ಶಿವಮೊಗ್ಗ ಮಟ್ಟಿಗೆ ಕಾಂಗ್ರೆಸ್ ಸಂಪೂರ್ಣ ವಿಫಲವಾಗಿ ಹೋಯ್ತು. ಅದ್ಯಾವ ಲೆಕ್ಕಾಚಾರದಲ್ಲಿ ಅನುಭವಿ, ಹಿರಿಯ ಹೋರಾಟಗಾರ ಕಾಗೋಡು ತಿಮ್ಮಪ್ಪನಂತವರನ್ನು ಸಂಪುಟದಿಂದ ಹೊರಗಿಟ್ಟು, ಸ್ಪೀಕರ್‌ನಂತಹ ಡಮ್ಮಿ ಹುದ್ದೆಗೆ ಸಿಎಂ ಸಿದ್ದರಾಮಯ್ಯ ಫಿಕ್ಸ್ ಮಾಡಿದ್ದರೋ ಗೊತ್ತಿಲ್ಲ, ಅದರಿಂದ ಚೇತರಿಸಿಕೊಳ್ಳಲು ಸಂಪೂರ್ಣ ಅವಕಾಶವಿದ್ದಾಗ್ಯೂ ಶಿವಮೊಗ್ಗದಲ್ಲಿ ಕಾಂಗ್ರೆಸ್ ಸೊರಗಿಹೋಗಿದ್ದಂತೂ ಸತ್ಯ. ಕಿಮ್ಮನೆ ರತ್ನಾಕರ್ ಸರಳ ಸಜ್ಜನಿಕೆಯ, ಧೀಮಂತ ಮುತ್ಸದ್ದಿಯ ರಾಜಕಾರಣಿ. ಅದರಲ್ಲಿ ಎರಡು ಮಾತಿಲ್ಲ, ಆದರೆ ಇವತ್ತಿನ ರಾಜಕಾರಣದಲ್ಲಿ ಪಕ್ಷ ಸಂಘಟಿಸುವಂತಹ ಬಿರುಸು ಅವರ ವ್ಯಕ್ತಿತ್ವಕ್ಕೆ ಹೇಳಿ ಮಾಡಿಸಿದ್ದಾಗಿರಲಿಲ್ಲ. ತಮಗೆ ಒಲಿದುಬಂದಿದ್ದ ಶಿಕ್ಷಣ ಖಾತೆಯನ್ನು ನಿಭಾಯಿಸುವುದಕ್ಕೆ ಅವರು ಶ್ರಮ ವ್ಯಯಿಸಿದಷ್ಟು ಜಿಲ್ಲಾ ಉಸ್ತುವಾರಿ ಮಂತ್ರಿಯಾಗಿ 'ರಾಜಕಾರಣ' ಮಾಡುವುದು ಅವರಿಗೆ ಸಾಧ್ಯವಾಗಲಿಲ್ಲ. ಹಾಗಾಗಿ, ಶಿವಮೊಗ್ಗದಲ್ಲಿ ದಿನೇದಿನೆ ಬಿಜೆಪಿ ವೀಕ್ ಆಗುತ್ತಾ ಬಂದರೂ ಕಾಂಗ್ರೆಸ್ ಗಟ್ಟಿಯಾಗಿ ನಿಲ್ಲಲು ಸಾಧ್ಯವಾಗಲಿಲ್ಲ. ಹಾಗೆ ನೋಡಿದರೆ, ಮಧು ಬಂಗಾರಪ್ಪ ತಕ್ಕಮಟ್ಟಿಗೆ ತಮ್ಮ ಜೆಡಿಎಸ್ ಪಾರ್ಟಿಗೆ ಅದರ ಲಾಭ ಕೊಡಿಸುತ್ತಾ ಬಂದರು. ಜಿಲ್ಲೆಯಲ್ಲಿ ಮೂವರು ಜೆಡಿಎಸ್ ಶಾಸಕರು ಗೆದ್ದಿರುವುದಲ್ಲದೇ ಮೊನ್ನೆ ನಡೆದ ಜಿಲ್ಲಾ ಪಂಚಾಯತ್ ಚುನಾವಣೆಯಲ್ಲೂ ಮೂವತ್ತೊಂದು ಸ್ಥಾನಗಳ ಪೈಕಿ ಬಿಜೆಪಿ 15ರಲ್ಲಿ ಗೆದ್ದರೆ, ಜೆಡಿಎಸ್ ಏಳು ಸ್ಥಾನಗಳಲ್ಲಿ ಗೆದ್ದಿದೆ. ಕಾಂಗ್ರೆಸ್‌ಗೆ ಅಷ್ಟೆಲ್ಲ ಅನುಕೂಲಗಳಿದ್ದಾಗ್ಲೂ ಅದು ಗೆದ್ದಿದ್ದು ಜೆಡಿಎಸ್‌ಗಿಂತ ಒಂದು ಸೀಟು ಹೆಚ್ಚಿಗೆ ಅಷ್ಟೆ. ಅಲ್ಲದೆ ಸರಳ ಬಹುಮತಕ್ಕಿಂತ ಒಂ… ಸ್ಥಾನವಷ್ಟೆ ಕಡಿಮೆ ಗೆದ್ದು ಅತ್ಯಂತ ದೊಡ್ಡ ಪಕ್ಷವಾಗಿ ಹೊರಹೊಮ್ಮಿದ್ದ ಬಿಜೆಪಿ… ಟಾಂಗ್ ಕೊಟ್ಟು ತಮ್ಮ ಪಾರ್ಟಿಯ ಹಿರಿಯೂರು ಕ್ಷೇತ್ರದಿಂದ ಆಯ್ಕೆಯಾಗಿ… ಜ್ಯೋತಿ ಎಸ್ ಕುಮಾರ್‌ರನ್ನು ಜಿಲ್ಲಾ ಪಂಚಾಯ್ತಿ ಅಧ್ಯಕ್ಷೆ ಮಾಡುವಲ್ಲೂ ಮ… ಬಂಗಾರಪ್ಪ ಯಶಸ್ವಿಯಾಗಿದ್ದಾನೆ. ಆದರೆ ಕಾಂಗ್ರೆಸ್ ಪಕ್ಷ ಕಟ್ಟುವ ಅಂತಹ ಒಂದೇಒಂ… ಸಾಹಸಕ್ಕೂ ಇದುವರೆಗೆ ಮುಂದಾಗಿಲ್ಲ. ಕುಮಾರ್ ಬಂಗಾರಪ್ಪ ಮಾಜಿಯಾಗಿ ತೆರೆಮ… ಸೇರಿದ್ದರೆ, ಸ್ಪೀಕರ್ ಸ್ಥಾನದಲ್ಲಿದ್ದ ಕಾಗೋಡು ಕೂಡಾ ತಟಸ್ಥರಾಗಿದ್ದರು. ಇನ್ನು ಪ್ರಸನ್ನಕುಮಾರ… ಪ್ರಭಾವಳಿ ಶಿವಮೊಗ್ಗ ನಗರ ಬಿಟ್ಟು ಹೊರಗೆ ಪಸರಿಸುವ ಮಾತೇ ಇಲ್ಲ. ಜಿ… ಉಸ್ತುವಾರಿ ಮಂತ್ರಿಯಾಗಿ ಕಿಮ್ಮನೆ ಕೂಡಾ 'ಚಕ್ಯತೆ'ಯ ರಾಜಕಾರಣಕ್ಕೆ ಕೈ ಹಾಕದಿದ್ದರಿಂ… ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರವೇ ಅಧಿಕಾರದಲ್ಲಿದ್ದರೂ ಶಿವಮೊಗ್ಗದಲ್ಲಿ ಕೈ ಪಾಟಿ… ಕಾಲುಗಟ್ಟಲೇ ಇಲ್ಲ.

ಆದರೆ ಈಗ ಮೂರು ವರ್ಷಗಳ ತರುವಾಯ ಕಾಗೋಡು ತಿಮ್ಮಪ್ಪನವರಿ… ಮಂತ್ರಿ ಸ್ಥಾನ ಸಿಕ್ಕಿದೆ; ಅದೂ ಅವರೇ ಬಯಸಿದ ಕಂದಾಯ ಖಾತೆ. ಜೊತೆಗೆ ಜಿ… ಉಸ್ತುವಾರಿ ಹೊಣೆಯೂ ಅವರ ಮೇಲಿದೆ. ತಳಮಟ್ಟದ ರೈತ ಹೋರಾಟದಿಂದಲೇ… ನಾಯಕನಾಗಿ ಬೆಳೆದುಬಂದಿರುವ ಕಾಗೋಡುರವರು ಪಕ್ಷಕ್ಕೆ ಒಂದಿಷ್ಟು ಪುಷ್ಟಿ ನೀಡುತ್ತಾ… ಕಾದುನೋಡಬೇಕಿದೆ. ಅವರ ಮೇಲೆ ನಿರೀಕ್ಷೆಯೂ ಸಾಕಷ್ಟಿ… ಯಾಕೆಂದರೆ, ಬಗರ್‌ಹುಕುಂ ಸಾಗುವಳಿದಾರರಿಗೆ ಹಕ್ಕುಪ… ನೀಡಬೇಕೆಂದು ಆರಂಭದಿಂದಲೂ ಹೋರಾಡುತ್ತಲ… ಬಂದವರು ಅವರು. ಈಗ ಅವರೇ ಕಂದಾಯ… ಮಂತ್ರಿಯಾಗಿದ್ದಾರೆ. ತಾವೇ ಧ್ವನಿ ಎತ್ತಿದ ಬಗರ್‌ಹುಕು… ಸಾಗುವಳಿಗೆ ಅದೆಷ್ಟರ ಮಟ್ಟಿಗೆ ನ್ಯಾಯ… ಒದಗಿಸುತ್ತಾರೆಂಬುದು ಕೇವಲ ಅವರ ರಾಜಕಾರಣ… ಮೇಲೆ ಮಾತ್ರವಲ್ಲ, ಇಡೀ ಕಾಂಗ್ರೆಸ್ ಪಾರ್ಟಿಯ… ಬಲವರ್ಧನೆ ಮೇಲೂ ಪರಿಣಾಮ ಬೀರಲಿದೆ. ಮಂತ್ರಿಯಾ… ಆದಷ್ಟು ಬೇಗ ಬಗರ್‌ಹುಕುಂ ಸಾಗುವಳಿದಾರರಿ… ಸರ್ಕಾರದಿಂದ ನ್ಯಾಯ ಒದಗಿಸಿಕೊಟ್ಟರೆ ಅವರ ನಿರಂತ… ಹೋರಾಟವೂ ಸಾರ್ಥಕವಾಗುತ್ತದೆ.








ಎಂಎಲ್‌ಎ ಆಗಿ. ರಾಜ್ಯ ರಾಜಕಾರಣದಲ್ಲಿ ಭದ್ರವಾಗಲು ಯತ್ನಿಸುತ್ತಿರುವುದರಿಂದ ರುದ್ರೇಗೌಡರಿಗೂ ಯಡ್ಡಿ ಶಿವಮೊಗ್ಗವನ್ನು ಉಳಿಸುವುದಿಲ್ಲ. ಹಾಗಾದರೆ ತನ್ನನ್ನು ನಂಬಿ ಕೆಜೆಪಿಗೆ ಬಂದಿದ್ದ ಅವರಿಗೆ ಯಡ್ಡಿ ಅನ್ಯಾಯ ಮಾಡಿದಂತಾಗುತ್ತೆ. ಅದಕ್ಕೆ ಯಡ್ಡಿ ಕಂಡುಕೊಂಡ ಉತ್ತರ ಎಂಪಿ ಸ್ಥಾನ. 2019ಕ್ಕೆ ಎದುರಾಗಲಿರುವ ಲೋಕಸಭೆ ಚುನಾವಣೆಯಲ್ಲಿ ಅಥವಾ ಅದಕ್ಕೂ ಮೊದಲು ತನ್ನಿಂದ ತೆರವಾಗುವ ಸ್ಥಾನಕ್ಕೆ ನಡೆಯುವ ಉಪಚುನಾವಣೆಯಲ್ಲಿ ಅವರನ್ನೇ ಶಿವಮೊಗ್ಗ ಎಂಪಿ ಕ್ಯಾಂಡಿಡೇಟಾಗಿ ನಿಲ್ಲಿಸಿ ಸಮಾಧಾನ ಮಾಡಬಹುದು ಅಂತ ಯಡ್ಡಿ ಲೆಕ್ಕಹಾಕಿದ್ದಾನೆ. ಆದರೆ ಯಡ್ಡಿಗೆ ಇಲ್ಲೂ ಒಂದು ತೊಡಕು ಎದುರಾಗಬಹುದು. ಹಾಗೊಮ್ಮೆ, ಶಿಕಾರಿಪುರದಲ್ಲಿ ತನ್ನ ತೆಕ್ಕೆಗೆ ವಾಪಾಸಾಗಿರುವ ಮೀಸೆ ಶಾಂತಣ್ಣ ಕ್ಷೇತ್ರವನ್ನು ರಾಘವೇಂದ್ರನಿಗೆ ಬಿಟ್ಟುಕೊಡಲು ತಕರಾರು ತೆಗೆದರೆ ಆಗ ಆತನನ್ನು ಸಮಾಧಾನಪಡಿಸಲು ಎಂಪಿ ಟಿಕೆಟನ್ನು ಆತನಿಗೇ ಖಾತ್ರಿ ಮಾಡಬೇಕಾಗುತ್ತೆ. ಆಗ ಮತ್ತೆ ರುದ್ರೇಗೌಡರಿಗೆ ಮೋಸವಾದಂತಾಗುತ್ತೆ. ಅಂತಹ ಸಮಯಬಂದಾಗ ರುದ್ರೇಗೌಡರನ್ನು ತೆಪ್ಪಗಾಗಿಸಲು ಯಡ್ಡಿ ಕಂಡುಕೊಂಡ ಅಸ್ತ್ರವೇ ಬಿಜೆಪಿ ಜಿಲ್ಲಾಧ್ಯಕ್ಷನ ಹುದ್ದೆ. ಹೇಗೂ ನಿಮ್ಮನ್ನು ಜಿಲ್ಲಾಧ್ಯಕ್ಷನನ್ನಾಗಿ ಮಾಡಿರುವುದರಿಂದ ಎಂಪಿ ಟಿಕೆಟನ್ನು ಶಾಂತವೀರಪ್ಪನಿಗೆ ಬಿಟ್ಟುಕೊಡಿ ಅಂತ ಸಭ್ಯಸ್ಥ ರುದ್ರೇಗೌಡರನ್ನು ಹ್ಯಾಂಡಲ್ ಮಾಡುವುದು ಕಷ್ಟವೇನೂ ಆಗಲ್ಲ. ಆಕಸ್ಮಾತ್, ಶಾಂತವೀರಪ್ಪನಿಂದ ಅಂತಹ ತಕರಾರು ಎದುರಾಗದಿದ್ದರೆ ರುದ್ರೇಗೌಡರೇ ಶಿವಮೊಗ್ಗ ಲೋಕಸಭೆಯ ಬಿಜೆಪಿ ಕ್ಯಾಂಡಿಡೇಟು! ಇಬ್ಬರಲ್ಲೊಬ್ಬರನ್ನು ಎಂಪಿ ಕ್ಯಾಂಡಿಡೇಟಾಗಿ ಮಾಡಿದರೆ ಸಮಯಸಾಧಕ ರಾಜಕಾರಣಿ ಆಯನೂರು ಮಂಜುನಾಥ್‌ಗೂ ಬಿಸಿ ಮುಟ್ಟಿಸಬಹುದೆನ್ನುವುದು ಯಡ್ಡಿಯ ಕಾಗುಣಿತ.

ಈಶ್ವರಪ್ಪ ಥರಗುಟ್ಟಿ ಹೋಗಿರೋದೆ ಯಡ್ಡಿ ವ್ಯವಸ್ಥಿತವಾಗಿ ತನ್ನ ಕ್ಷೇತ್ರಕ್ಕೆ ವಕ್ಕರಿಸುತ್ತಿರುವ ಈ ಕಾರಣಕ್ಕೆ.

ಈಶು ಮಗನಿಗೂ ಬಿತ್ತು ಗುನ್ನ

ಈಶ್ವರಪ್ಪನ ವಿರುದ್ಧ ಯಡ್ಡಿ ಅಕ್ಷರಶಃ ಕೆರಳಿ ನಿಂತಿದ್ದಾನೆ. ಶತಾಯಗತಾಯ ಈಶ್ವರಪ್ಪನ ಪೊಲಿಟಿಕಲ್ ಬೇರುಗಳನ್ನೇ ಶಿವಮೊಗ್ಗದಿಂದ ಕಿತ್ತೆಸೆಯಲು ಸಜ್ಜಾಗಿರುವ ಯಡ್ಡಿ ಸಣ್ಣದೊಂದು ಆಸರೆಯನ್ನೂ ಈಶುಗೆ ಉಳಿಸುತ್ತಿಲ್ಲ. ನಿಧಾನಕ್ಕೆ ತನ್ನ ಮಗ ಕಾಂತೇಶನಿಗೆ ರಾಜಕೀಯ ಬುನಾದಿ ಹಾಕಿಕೊಡಬೇಕು ಅಂತ ಈಶ್ವರಪ್ಪ ಹೆಣಗಾಡುತ್ತಿರುವುದು ಹೊಸದೇನೂ ಅಲ್ಲ. ಆದರೆ ಅಪ್ಪನಿಗೇ ಗೇಟ್‌ಪಾಸ್ ರೆಡಿಮಾಡಿದ ಮೇಲೆ, ಯಡ್ಡಿ ಮಹಾತ್ಮ ಮಗನಿಗೆ ರಿಯಾಯಿತಿ ಕೊಟ್ಟಾನೆ? ಖಂಡಿತ ಇಲ್ಲ! ಮೊನ್ನೆ ನಡೆದ ಜಿಲ್ಲಾ ಪಂಚಾಯತ್ ಅಧ್ಯಕ್ಷ ಚುನಾವಣೆ ಅದಕ್ಕೆ ಸಾಕ್ಷಿ.





ಒಟ್ಟು ಮೂವತ್ತೊಂದು ಸದಸ್ಯ ಬಲದ ಶಿವಮೊಗ್ಗ ಜಿಲ್ಲಾ ಪಂಚಾಯ್ತಿಯಲ್ಲಿ ಬಿಜೆಪಿ 15 ಸ್ಥಾನಗಳಲ್ಲಿ ಗೆದ್ದಿದ್ದರೆ, ಕಾಂಗ್ರೆಸ್ 08, ಜೆಡಿಎಸ್ 07 ಮತ್ತು ಒಂದರಲ್ಲಿ ಬಂಡಾಯ ಕಾಂಗ್ರೆಸ್ ಅಭ್ಯರ್ಥಿ ಪಕ್ಷೇತರರಾಗಿ ಗೆದ್ದಿದ್ದಾರೆ. ಬಿಜೆಪಿಯ ಹದಿನೈದು ಮಂದಿಯಲ್ಲಿ ಈಶ್ವರಪ್ಪನ ಪುತ್ರ ಕೆ.ಇ. ಕಾಂತೇಶನೂ ಇದ್ದಾನೆ. ಈತ ಹೊಳಲೂರು ಕ್ಷೇತ್ರದಿಂದ ಗೆದ್ದು ಬಂದಿದ್ದಾನೆ. ಜಿಲ್ಲಾ ಪಂಚಾಯತಿ ಅಧ್ಯಕ್ಷ ಸ್ಥಾನಕ್ಕೆ ಬಿಸಿಎಂ ಮೀಸಲಾತಿಯನ್ನೇ ಹಾಕಿಸಿಕೊಂಡು ಮಗನನ್ನು ಜಿ.ಪಂ ಅಧ್ಯಕ್ಷನನ್ನಾಗಿಸಬೇಕು ಅಂತ ಈಶ್ವರಪ್ಪ ಭಾರೀ ಪ್ರಯತ್ನವನ್ನೇ ಮಾಡಿದ್ದ. ಆದರೆ ಅದು ಸಾಧ್ಯವಾಗಲಿಲ್ಲ. ಅದರಲ್ಲಿ ಯಡಿಯೂರಪ್ಪನ ಕರಾಮತ್ತೂ ಇದೆ ಅನ್ನೋ ಮಾತುಗಳು ಕೇಳಿಬರುತ್ತಿವೆ. ಅಧ್ಯಕ್ಷ ಮತ್ತು ಉಪಾಧ್ಯಕ್ಷ ಸ್ಥಾನಗಳೆರಡೂ ಮಹಿಳೆಯರಿಗೆ ಮೀಸಲಾದ್ದರಿಂದ ಈಶ್ವರಪ್ಪ ಅಂಡುಸುಟ್ಟ ಬೆಕ್ಕಿನಂತಾಗಿದ್ದ. ಆದಾಗ್ಯೂ ಅತಿದೊಡ್ಡ ಪಕ್ಷವಾಗಿ ಹೊರಹೊಮ್ಮಿದ್ದ ಬಿಜೆಪಿ ಅಧಿಕಾರ ಹಿಡಿಯಲು ಹೆಚ್ಚೇನು ಶ್ರಮ ಪಡಬೇಕಿರಲಿಲ್ಲ. ಯಾಕೆಂದರೆ ಸರಳ ಬಹುಮತಕ್ಕೆ ಬಿಜೆಪಿಗೆ ಬೇಕಿದ್ದುದು ಇನ್ನೊಂದು ಸ್ಥಾನ ಮಾತ್ರ. ಹೇಗೂ ಒಬ್ಬ ಪಕ್ಷೇತರ ಅಭ್ಯರ್ಥಿ ಇದ್ದುದರಿಂದ ಸ್ವಲ್ಪ ಪ್ರಯತ್ನ ಪಟ್ಟಿದ್ದರು ಜಿ.ಪಂ. ಗದ್ದುಗೆ ಬಿಜೆಪಿಗೆ ಒಲಿಯುತ್ತಿತ್ತು, ಆದರೆ ಅದು ಯಡ್ಡಿಗೇ ಇಷ್ಟವಿರಲಿಲ್ಲ!


ಕಾರಣ ತುಂಬಾ ಸಿಂಪಲ್. ಜಿಲ್ಲಾ ಪಂಚಾಯತಿ ಮತ್ತು ತಾಲ್ಲೂಕು ಪಂಚಾಯತಿ ಎಲೆಕ್ಷನ್‌ಗಳು ನಡೆದದ್ದು ಜನವರಿ ಮತ್ತು ಫೆಬ್ರುವರಿ ತಿಂಗಳ ಆರಂಭದಲ್ಲಿ. ಆಗಿನ್ನೂ ಯಡ್ಡಿಗೆ ರಾಜ್ಯಾಧ್ಯಕ್ಷನ ಸ್ಥಾನ ಸಿಕ್ಕಿರಲಿಲ್ಲ, ಸಿಗುವ ಬಗ್ಗೆ ಸ್ಪಷ್ಟ ಖಾತ್ರಿಯೂ ಇರಲಿಲ್ಲ. ಅಂತಹ ಸಂದರ್ಭದಲ್ಲಿ ಜಿಲ್ಲಾ ಪಂಚಾಯತ್ ಮತ್ತು ತಾಲ್ಲೂಕು ಪಂಚಾಯತ್ ಎಲೆಕ್ಷನ್‌ಗೆ ಪಾರ್ಟಿ ಟಿಕೆಟ್ ನೀಡುವಾಗ ತಮ್ಮ ಬೆಂಬಲಿಗರಿಗೇ ಹೆಚ್ಚಿನ ಪ್ರಾಶಸ್ತ್ಯ ಕೊಡಿ ಅಂತ ಹಠ ಹಿಡಿಯುವ ಅವಕಾಶ ಯಡ್ಡಿಗೆ ಇರಲಿಲ್ಲ. ಹಾಗೇನಾದರು ಹಠ ಮಾಡಿದ್ದರೆ ಈಗಾಗಲೇ ಆತನ ವಿರುದ್ಧ ಮುನಿಸಿಕೊಂಡಿರುವ ಹಿತಶತ್ರುಗಳು ಅದನ್ನೇ ನೆಪ ಮಾಡಿಕೊಂಡು ದಿಲ್ಲಿ ನಾಯಕರ ಕಿವಿಯೂದುತ್ತಿದ್ದರು. ಹಾಗಾಗಿ ಯಡ್ಡಿ ಹೆಚ್ಚೇನು ಹಸ್ತಕ್ಷೇಪ ಮಾಡಲು ಸಾಧ್ಯವಾಗಲಿಲ್ಲ. ಇದು ಟಿಕೆಟು ಹಂಚಿಕೆಯಲ್ಲಿ ಯಡ್ಡಿ ವಿರೋಧಿಗಳ ಮೇಲುಗೈ ಸಾಧಿಸಲು ನೆರವಾಯ್ತು. ಶಿವಮೊಗ್ಗದಲ್ಲೂ ಜಿಲ್ಲಾ ಪಂಚಾಯತ್ ಅಖಾಡಕ್ಕಿಳಿದವರಲ್ಲಿ ಯಡ್ಡಿ ಆಪ್ತರಿಗಿಂತ ಬಾಯಿಬಡುಕ ಈಶ್ವರಪ್ಪನ ಆಪ್ತರೇ ಹೆಚ್ಚು, ಗೆದ್ದು ಬಂದವರಲ್ಲೂ ಅವರದೇ ಪ್ರಮಾಣ ಹೆಚ್ಚಿತ್ತು.


ಮೀಸಲಾತಿ ಹಂಚಿಕೆಯಿಂದ ಈಶು ಪುತ್ರ ಕಾಂತೇಸಿಗೆ ಅಧ್ಯಕ್ಷ ಗಾದಿ ಕೈತಪ್ಪಿದ್ದೇನೊ ನಿಜ. ಅಕಸ್ಮಾತ್, ಆ ಹುಮ್ಮಸ್ಸಿನಲ್ಲಿ ಬಿಜೆಪಿ ತೆಕ್ಕೆಗೆ ಜಿಲ್ಲಾ ಪಂಚಾಯತ್ ದಕ್ಕುವಂತೆ ತಾನು ಪ್ರಯತ್ನಿಸಿದರೆ, ಈಶು ಚೇಲಾಗಳಲ್ಲೊಬ್ಬರು ಅಧಿಕಾರಕ್ಕೇರುತ್ತಾರೆ; ಆಗ ಪರೋಕ್ಷವಾಗಿ ಜಿಲ್ಲಾ ಪಂಚಾಯತ್ ಸದಸ್ಯ ಕಾಂತೇಶಿಯೇ ಅಧಿಕಾರ ನಡೆಸುತ್ತಾನೆ; ಅವನ ಪ್ರಭಾವಳಿ ಹಿಗ್ಗಲು ತಾನೇ ಅವಕಾಶ ಮಾಡಿಕೊಟ್ಟಂತಾಗುತ್ತೆ ಅನ್ನೋ ಲೆಕ್ಕಾಚಾರ ಹಾಕಿದ ಯಡ್ಡಿ ಅಧ್ಯಕ್ಷ-ಉಪಾಧ್ಯಕ್ಷ ಚುನಾವಣೆಯಲ್ಲಿ ಅಕ್ಷರಶಃ ಗಪ್‌ಚುಪ್ ಆಗಿಬಿಟ್ಟ. ಜೆಡಿಎಸ್ ಜೊತೆ ಮೈತ್ರಿ ಮಾಡಿಕೊಳ್ಳುವ ಕಸರತ್ತು ಕಾಟಾಚಾರಕ್ಕೆ ನಡೆಯಿತಾದರೂ ಅದರ ಹಿಂದೆ ಅಧಿಕಾರ ಹಿಡಿಯುವ ಇಚ್ಛಾಶಕ್ತಿ ಇರಲಿಲ್ಲ. ಅದನ್ನು ಜೆಡಿಎಸ್‌ನ ಮಧು ಬಂಗಾರಿ ತನ್ನದೇ ಸ್ಟೈಲ್‌ನಲ್ಲಿ ವರ್ಕ್‌ಔಟ್ ಮಾಡಿಕೊಂಡ. ಪಕ್ಷೇತರೆಯನ್ನು ಖರೀದಿಸಿ ಉಪಾಧ್ಯಕ್ಷೆಯನ್ನಾಗಿ ಮಾಡಿದ್ದಲ್ಲದೆ ಕಾಂಗ್ರೆಸ್‌ನ ಬೆಂಬಲ ಗಿಟ್ಟಿಸಿಕೊಂಡು ತಮ್ಮ ಪಾರ್ಟಿಯ ಜ್ಯೋತಿಕುಮಾರ್‌ಳನ್ನು ಅಧ್ಯಕ್ಷೆಯಾಗಿಸಿದ.


ಮೇಲ್ನೋಟಕ್ಕೆ ಇದು ಯಡ್ಡಿಯ ಹಿನ್ನಡೆಯಂತೆ ಕಂಡುಬಂದರೂ ಈಶ್ವರಪ್ಪನನ್ನು ಪುತ್ರ ಸಮೇತ ಮಟ್ಟಹಾಕಲು ಯಡ್ಡಿ ಹೂಡಿದ ತಂತ್ರವಾಗಿದೆ. ಇಲ್ಲದೇ ಹೋಗಿದ್ದರೆ, ತಾನು ಬಿಜೆಪಿಗೆ ವಾಪಾಸಾಗಿ, ಬಲ ಪ್ರದರ್ಶಿಸುವ ಅನಿವಾರ್ಯತೆ ಎದುರಿಗಿರುವ ಸಂದರ್ಭದಲ್ಲಿ ಕೇವಲ ಜುಜುಬಿ ಒಂದು ಸೀಟಿನ ಕೊರತೆಯನ್ನು ನೀಗಿಸಿಕೊಳ್ಳದೆ ಸ್ವಂತ ಕ್ಷೇತ್ರದಲ್ಲಿ ಅಧಿಕಾರ ಬಿಜೆಪಿ ಕೈತಪ್ಪಿಹೋಗಲು ಯಡ್ಡಿ ಮಹಾತ್ಮ ಬಿಡುತ್ತಿದ್ದನೇ?


ರುದ್ರೇಗೌಡ


ಶಾಂತವೀರಪ್ಪ


ಪ್ರಸನ್ನಕುಮಾರ್


ರಾಘವೇಂದ್ರ


ಆಯನೂರು ಮಂಜುನಾಥ್

ಇಲ್ಲದೆ ಹೋಗಿದ್ದರೆ ರುದ್ರೇಗೌಡ ಬಿಜೆಪಿ ಜಿಲ್ಲಾಧ್ಯಕ್ಷನಾಗಿರುವುದಕ್ಕೆ ಈಶು ಆಕ್ಷೇಪ ಎತ್ತುವ ಮಾತೇ ಬರುತ್ತಿರಲಿಲ್ಲ. ಯಾಕೆಂದರೆ ಸಾಧು ಲಿಂಗಾಯತ ರುದ್ರೇಗೌಡರ ಕಾರಣಕ್ಕೆ ಶಿವಮೊಗ್ಗದಲ್ಲಿ ಈಶ್ವರಪ್ಪನ ಗೆಲುವು ಮತ್ತಷ್ಟು ಸುಲಭವಾಗುತ್ತಿತ್ತು. ಆದರೆ, ಯಾವಾಗ ಯಡ್ಡಿಯ ಖತರ್ನಾಕ್ ವ್ಯೂಹ ಈಶ್ವರಪ್ಪನಿಗೆ ಮನದಟ್ಟಾಯ್ತೊ ಆಗ ಯಡ್ಡಿಯ ಗೇಮ್‌ಪ್ಲಾನ್ ಠುಸ್ ಮಾಡುವುದಕ್ಕಾಗೇ ರುದ್ರೇಗೌಡರ ನೇಮಕದ ವಿರುದ್ಧ ಬಂಡಾಯದ ಮಾತುಗಳನ್ನಾಡುತ್ತಿದ್ದಾನೆ. ಇಲ್ಲಿ ಬಿಜೆಪಿ ಜಿಲ್ಲಾಧ್ಯಕ್ಷರ ಆಯ್ಕೆ ಅಸಮಾಧಾನ ನೆಪವಷ್ಟೆ. ಆ ಮೂಲಕ ಯಡ್ಡಿ ಮುಂದೆ ತನ್ನ ಮೇಲೆ ಮಾಡಲಿರುವ ದಾಳಿಗೆ ಪ್ರತಿತಂತ್ರ ಹೆಣೆಯಲು ಈಶು ರಾಜ್ಯಮಟ್ಟದ ಯಡ್ಡಿ ವಿರೋಧಿಗಳನ್ನೆಲ್ಲ ಗುಡ್ಡೆ ಹಾಕುತ್ತಿದ್ದಾನೆ. ಮುಂದೆ ಯಡ್ಡಿ ತಮಗೂ ಇಂತದ್ದೇ ಗತಿ ತಂದಿಡಬಹುದೆನ್ನುವ ಭಯವಿರುವ ಸಿಟಿ ರವಿ, ರವೀಂದ್ರನಾಥ, ಶಿವಯೋಗಿಸ್ವಾಮಿ, ನವೀನ್‌ಕುಮಾರ್ ಕಟೀಲ್‌ನಂತಹ ಪೇಪರ್ 'ಹುಲಿ'ಗಳು ಈಶ್ವರಪ್ಪನ ಜೊತೆಗೂಡಿದ್ದಾರೆ.

ಹಾಗೆ ನೋಡಿದರೆ, ಯಡ್ಡಿಗಿಂತ ಈಶ್ವರಪ್ಪನಿಗೇ ಸಂಘ ಪರಿವಾರದ ಸಪೋರ್ಟು ಜೋರಾಗಿದೆ. ತಂತ್ರಗಾರಿಕೆಯ, ಡಿಕ್ಟೇಟರ್ ಮನಸ್ಥಿತಿಯ, ಬಿಟ್ಟರೆ ತಮ್ಮ ಮೇಲೆಯೇ ಸವಾರಿ ಮಾಡುವ ಯಡ್ಡಿಗಿಂತ ಕತ್ತರಿಸಿ, ಕಡಿಯಿರಿ ಅಂತ ತಲೆಕೆಟ್ಟ ಹೇಳಿಕೆಗಳನ್ನು ಹುಂಬನಂತೆ ರಾಜಾರೋಷವಾಗಿ ಹೇಳಿಕೊಂಡು ತಿರುಗಾಡುವ ಈಶ್ವರಪ್ಪನೇ ಆರೆಸ್ಸೆಸ್ ಫೇವರಿಟ್ ಆಗಿರುವುದರಲ್ಲಿ ಅಚ್ಚರಿಯೇನೂ ಇಲ್ಲ. ಅಷ್ಟಕ್ಕೂ, ಈ ಹಿಂದೆ ಯಡ್ಡಿ ವಿರುದ್ಧ ಈಶ್ವರಪ್ಪನನ್ನು ಛೂಬಿಟ್ಟಿದ್ದೇ ಸಂಘ ಪರಿವಾರ. ಇಲ್ಲದೇ ಹೋಗಿದ್ದರೆ ಈಶು ನಿಂತ ಕೊಂಬೆಯನ್ನೇ ಕತ್ತರಿಸುವ ಹುಚ್ಚಾಟಕ್ಕೆ ಕೈಹಾಕುತ್ತಿರಲಿಲ್ಲ. ಈಗಲು ಸಹ ಈಶ್ವರಪ್ಪನಿಗೆ ಆರೆಸ್ಸೆಸ್‌ನದೇ ಬಲ. ಪದಾಧಿಕಾರಿಗಳ ಆಯ್ಕೆ ವಿಚಾರದಲ್ಲಿ ಸಂಘ ಪರಿವಾರವನ್ನೇ ಲೆಕ್ಕಕ್ಕೆ ತೆಗೆದುಕೊಳ್ಳದೆ ಎಲ್ಲರನ್ನೂ ಓವರ್‌ಟೇಕ್ ಮಾಡಿ ಓಡುತ್ತಿರುವ ಯಡ್ಡಿ ಎಕ್ಸ್‌ಪ್ರೆಸ್‌ಗೆ ಬ್ರೇಕ್ ಹಾಕಲು ಆರೆಸ್ಸೆಸ್ ಹವಣಿಸುತ್ತಿರುವುದನ್ನೇ ಗಾಳ ಮಾಡಿಕೊಂಡು ಈಶ್ವರಪ್ಪ ಶಿವಮೊಗ್ಗ ಕ್ಷೇತ್ರವನ್ನು ಗಟ್ಟಿ ಮಾಡಿಕೊಳ್ಳಲು ಆತ್ಮಪ್ನರನ್ನು ಜೊತೆಗಾಕಿಕೊಂಡು ಶತಪ್ರಯತ್ನ ಮಾಡುತ್ತಿದ್ದಾನೆ.

ಇಲ್ಲಿ ಒಂದು ವಿಚಾರವಂತೂ ಸ್ಪಷ್ಟ. ಯಡ್ಡಿ ಈಗಾಗಲೇ ಪೆಟ್ಟು ತಿಂದ ವ್ಯಾಘ್ರ. ತಾನು ಇಂತಹ ಸಾಹಸಕ್ಕೆ ಕೈಹಾಕಿದರೆ ಯಾರ್‍ಯಾರಿಂದ, ಏನೆಲ್ಲ ಅಪಸ್ವರ-ತಕರಾರುಗಳು ಕೇಳಿಬರಬಹುದು, ಸಂಘ ಪರಿವಾರ ಹೇಗೆಲ್ಲಾ ಆಟ ಆಡಬಹುದು ಎಂಬುದನ್ನು ಚೆನ್ನಾಗಿಯೇ ಲೆಕ್ಕ ಹಾಕಿರುತ್ತಾನೆ. ಈ ಹಿಂದೆ ಅಂತಹ ಏಟು ತಿಂದ ಅನುಭವವಿದೆ. ಸೋ, ಆತ ತನ್ನ ತಂತ್ರವನ್ನು ಸಮರ್ಥಿಸಿಕೊಳ್ಳುವ ಕೌಂಟರ್ ಕಾರಣಗಳನ್ನು ಇಟ್ಟುಕೊಳ್ಳದೆ ಇಷ್ಟು ವೇಗದಲ್ಲಿ ಈ ಪರಿ ರಿಸ್ಕಿ ಆಟಕ್ಕೆ ಕೈಹಾಕಿರಲಾರ. ಅನಂತಕುಮಾರ, ಜಗದೀಶ್ ಶೆಟ್ಟರ್, ಸದಾನಂದ ಗೌಡ, ಈಶು, ಸೀಟಿ ರವಿಯಂತವರು ಎತ್ತಬಹುದಾದ ಅಪಸ್ವರಗಳಿಗೆಲ್ಲ ಸೂಕ್ತ ತಯಾರಿ ಮಾಡಿಕೊಂಡೇ ಅಖಾಡಕ್ಕಿಳಿದಿದ್ದಾನೆ. ಈಶು ಮತ್ತು ಸಂಗಡಿಗರ ಸೋಬಾನೆ ತಂಡ ರಾಷ್ಟ್ರೀಯ ನಾಯಕರಿಗೆ ಯಡಿಯೂರಪ್ಪನ ವಿರುದ್ಧ ದೂರು ನೀಡುತ್ತೇವೆ ಅಂತ ರಾಗ ಎಳೆದಾಗಲೂ ಯಡ್ಡಿ ಈ ಮೊದಲಿನಂತೆ ಕೆಂಡ ಉಗುಳುವ ಅಗಲ ಕಣ್ಬಿಟ್ಟು ಉಗ್ರವಾಗಿ ಪ್ರತಿಕ್ರಿಯಿಸದೆ 'ಅಂತದ್ದೇನೂ ಆಗಿಲ್ಲ, ಎಲ್ಲರನ್ನೂ ಕರೆದು ಮಾತಾಡಿಸ್ತೀನಿ' ಅನ್ನೋ ತಣ್ಣನೆ ಹೇಳಿಕೆ ಕೊಟ್ಟಿರೋದನ್ನು ನೋಡಿದರೆ ಯಡ್ಡಿ ವಿರೋಧಿಗಳಿಗೆ ಭವಿಷ್ಯದಲ್ಲಿ ಭಾರೀ ಅನಾಹುತವೇ ಕಾದಿರುವಂತೆ ಕಾಣಿಸುತ್ತದೆ. ಈಶು ಈ ಇನ್ನಿಂಗ್ಸ್‌ನ ಮೊದಲ ವಿಕೆಟ್ ಅಷ್ಟೆ!

■ ಟಿ.ಎನ್.ಷಣ್ಮುಖ ಮತ್ತು
ಗಿರೀಶ್ ತಾಳಿಕಟ್ಟೆ

ಬಿಜೆಪಿ ವಿರುದ್ಧ ಆರೆಸ್ಸೆಸ್ ಪೊಲಿಟಿಕ್ಸ್
ಕೇಶವಕೃಪ ಇಬ್ಭಾಗ?


ಹೊಸ ಪಾರ್ಟಿ ಪದಾಧಿಕಾರಿಗಳಿಗೆ ಆರೆಸ್ಸೆಸ್ ಸಂಘಚಾಲಕರ ಸಂಘಟನಾ ಪಾಠ

ಕರ್ನಾಟಕದ ಮಟ್ಟಿಗಂತೂ ಇದು ಸ್ಫೋಟಕ ಸುದ್ದಿ. ಯಡ್ಡಿ ರಾಜ್ಯಾಧ್ಯಕ್ಷ ಹುದ್ದೆಗೇರಿದ ಮೇಲೆ ಮತ್ತೆ ತಮ್ಮ ಪಕ್ಷ ಅಧಿಕಾರಕ್ಕೇರುತ್ತೆ ಅನ್ನೋ ಹಗಲುಗನಸಿನಲ್ಲಿರೋ ಚಡ್ಡಿಗಳಿಗೆಲ್ಲ ಈ ಸುದ್ದಿ ಸಣ್ಣ ಚಳಿಜ್ವರ ತಂದಿಟ್ಟಿದೆ. ಅದಕ್ಕೆ ಕಾರಣವಾಗಿರೋದು 'ಜನಸ್ಪಂದನಾ' ಅನ್ನೋ ಹೊಸಪಾರ್ಟಿ. ಅಷ್ಟೇ ಆಗಿದ್ದಿದ್ದರೆ ಬಿಜೆಪಿಗಳು ಆತಂಕ ಪಡುವ ಅಗತ್ಯವೇ ಇರಲಿಲ್ಲ. ಆದರೆ, ಇಂತಹದ್ದೊಂದು ಪಾರ್ಟಿಯನ್ನು ಹುಟ್ಟುಹಾಕಿರೋದು ಖುದ್ದು ಆರೆಸ್ಸೆಸ್; ಅದೂ, ಬಿಜೆಪಿಯನ್ನು ಮಟ್ಟಹಾಕಬೇಕೆನ್ನುವ ಇರಾದೆ ಇಟ್ಟುಕೊಂಡು! ಇಷ್ಟಾದ ಮೇಲು ಇದು ಜನರನ್ನು ದಿಕ್ಕುತಪ್ಪಿಸಲು ಆರೆಸ್ಸೆಸ್ ಮಾಡುತ್ತಿರುವ ಮತ್ತೊಂದು ಸಂಚು ಎಂದುಕೊಂಡು ಸುಮ್ಮನಾಗಬಹುದಿತ್ತು. ಆದರೆ ಜನಸ್ಪಂದನಾ ಪಾರ್ಟಿಯನ್ನು ಹುಟ್ಟುಹಾಕಲಿಕ್ಕೆ ರಾಜ್ಯದ ಆರೆಸ್ಸೆಸ್‌ನ ಹೆಡ್ಡಾಫೀಸು ಕೇಶವಕೃಪವೇ ಹೊಡೆದು ಇಬ್ಭಾಗವಾಗುವ ಹಂತಕ್ಕೆ ಬಂದುತಲುಪಿದೆಯಲ್ಲಾ ಅದೇ ಇಲ್ಲಿ ವಿಪರೀತ ಕುತೂಹಲ ಕೆರಳಿಸಿರೋದು.

ನಂಬಲು ತುಸು ಕಷ್ಟವೆನಿಸುತ್ತದೆ. ಸಂಘ ಪರಿವಾರದ ದ್ವಂದ್ವ, ಕುತಂತ್ರಗಳನ್ನು ಕಂಡು ಅರ್ಥೈಸಿಕೊಂಡವರಿಗೆ ಇದೊಂದು ಊಹಾಪೋಹಾದ ಸುದ್ದಿ ಅಂತಲೇ ಅನ್ನಿಸಬಹುದು. ನಾಗ್ಪುರದ ಚಾಣಾಕ್ಷ ಬ್ರೈನುಗಳು ಈ ಪರಿ ಅವಾಂತರಕ್ಕೆ ಅವಕಾಶ ಕೊಡಲಾರವು ಅನ್ನಿಸದಿರದು. ಆದರಿದು ವಾಸ್ತವ! ಯಡ್ಡಿ ಮಹಾಶಯ ಬಿಜೆಪಿ ರಾಜ್ಯಾಧ್ಯಕ್ಷ ಹುದ್ದೆಗೆ ವಕ್ಕರಿಸುವ ಸರಿಯಾಗಿ ಎರಡು ತಿಂಗಳು ಮುನ್ನ ಅಂದರೆ ಫೆಬ್ರವರಿ 14ರಂದು (ಯಡ್ಡಿ ರಾಜ್ಯಾಧ್ಯಕ್ಷನಾದದ್ದು ಏಪ್ರಿಲ್ 14ರಂದು) ಕೇಶವಕೃಪದಿಂದ ಕಾಲಳತೆಯ ದೂರದಲ್ಲಿರೋ ರಾಯರಾಯ ಕಲ್ಯಾಣ ಮಂಟಪದಲ್ಲಿ ಈ ಪಕ್ಷ ಜನ್ಮವೆತ್ತಿದ್ದಕ್ಕೂ, ಈಶ್ವರಪ್ಪನೆಂಬ ಬಾಯಿಬೇನೆಯ ಆಸಾಮಿ ಇವತ್ತು ಬಿಜೆಪಿ ಭಿನ್ನಮತವನ್ನು ಬೀದಿಗೆ ತಂದು ಕೆಡವುತ್ತಿರುವುದಕ್ಕೂ ನೇರಾನೇರ ಸಂಬಂಧವಿಲ್ಲವಾದರೂ ಬಿಜೆಪಿಗೆ ಮಾರಕವಾಗಬಲ್ಲ ಇವೆರಡೂ ಪ್ರಕರಣಗಳಲ್ಲಿ ಕೇಶವಕೃಪದ ಒಂದಷ್ಟು ಕಾಣದ ಕೈಗಳ ಕರಾಮತ್ತನ್ನು ತಳ್ಳಿ ಹಾಕಲಿಕ್ಕೆ ಸಾಧ್ಯವಿಲ್ಲ.


ಬಿಜೆಪಿಗೂ, ತನಗೂ ಯಾವ ಸಂಬಂಧವೂ ಇಲ್ಲ ಅಂತ ಹೇಳಿಕೊಳ್ಳುತ್ತಲೇ ಬಿಜೆಪಿಯನ್ನು ಹೆಮ್ಮರವಾಗಿಸಿದ ಸಂಘ ಪರಿವಾರ ಯಾವತ್ತೂ ಬಿಜೆಪಿ ತನ್ನ ಕೈಹಿಡಿತದಿಂದ ಸಡಿಲಗೊಳ್ಳಲು ಬಿಟ್ಟುಕೊಟ್ಟದ್ದಿಲ್ಲ. ಅಂತದ್ದರಲ್ಲಿ ಬಿಜೆಪಿಗೆ ಪರ್ಯಾಯವಾಗಿ ಇನ್ನೊಂದು ಪಾರ್ಟಿಯನ್ನು ಅದು ಕಟ್ಟಲು ಸಾಧ್ಯವೇ? ಕಟ್ಟುವುದೇ ಆದರೆ ಅದು ನಾಗ್ಪುರದ ಮಟ್ಟದಲ್ಲಿ ನಡೆಯಬೇಕಿತ್ತೆ ವಿನಾಃ, ಕರ್ನಾಟಕದ ಕೇಶವಕೃಪಾದಲ್ಲಿ ಅದಕ್ಕೆ ರೂಪುರೇಷೆ ಯಾಕೆ ಸಿದ್ಧವಾಯ್ತು? ಅದೂ ಕೇಂದ್ರದಲ್ಲಿ ಬಿಜೆಪಿ ಅಧಿಕಾರದಲ್ಲಿರುವಾಗ ಸಂಘಿಗಳು ಇಂತಹ ಯಡವಟ್ಟು ಮಾಡಿಕೊಳ್ಳಲು ಸಾಧ್ಯವೇ? ಅನ್ನೋ ಪ್ರಶ್ನೆಗಳು ಕಾಡದೇ ಇರುವುದಿಲ್ಲ. ಈ ಎಲ್ಲಾ ಪ್ರಶ್ನೆಗಳಿಗೆ ಸ್ಪಷ್ಟ ಉತ್ತರ ಕೊಡುವಷ್ಟು ಬಲಿಷ್ಠವಾಗಿ ಇನ್ನೂ ಆರೆಸ್ಸೆಸ್‌ನ 'ಪ್ರಾಜೆಕ್ಟ್ ಜನಸ್ಪಂದನೆ' ಪಕ್ವಗೊಂಡಿಲ್ಲವಾದರೂ ಅದರ ಆರಂಭಿಕ ನಡೆಗಳು, ಅದರಲ್ಲಿ ಸಂಘಿಗಳ ಪಾತ್ರ, ಬಿಜೆಪಿಯಲ್ಲಿ ಭಿನ್ನಮತ ಭುಗಿಲೆದ್ದಿರುವುದು, ಇವೆಲ್ಲಾ ಬಿಜೆಪಿಗೆ ಆರೆಸ್ಸೆಸ್ಸೇ ಖೆಡ್ಡ ರೆಡಿಮಾಡಿರುವುದನ್ನು ಸಾಬೀತುಪಡಿಸುತ್ತವೆ.


ಅವರೆಲ್ಲ ಆರೆಸ್ಸೆಸ್ಸಿಗರು


ಹೊಸದಾಗಿ ಹುಟ್ಟಿಕೊಂಡಿರೊ ಜನಸ್ಪಂದನಾ ಪಾರ್ಟಿಯಲ್ಲಿರೋರನ್ನು ಗಮನಿಸಿದರೆ ಸಾಕು ಇದು ಆರೆಸ್ಸೆಸ್‌ನದೇ ಕೂಸು ಅನ್ನೋದು ಖಾತ್ರಿಯಾಗುತ್ತದೆ. ಅವರ‍್ಯಾರೂ 'ಹಿರಿಯ' ಲೇಬಲ್ ಅಂಟಿಸಿಕೊಂಡ, ಸಂಘದಿಂದ ತಿರಸ್ಕೃತಗೊಂಡ ಅತೃಪ್ತರಲ್ಲ. ಈಗಲೂ ಆರೆಸ್ಸೆಸ್‌ನ ವಿವಿಧ ಹುದ್ದೆಗಳಲ್ಲಿ ಠಿಕಾಯಿಸಿರುವವರು. ಜೊತೆಗೆ, ಹಗಲುರಾತ್ರಿ ಕೇಶವಕೃಪ ಎಡತಾಕಿ ಬರುವಷ್ಟು ಪವರ್‌ಫುಲ್ ಆಸಾಮಿಗಳು. ಹೊಸ ಪಾರ್ಟಿಗೆ ಅಧ್ಯಕ್ಷನಾಗಿರೊ ನಾರಾಯಣ ಶರ್ಮ ಎಂಬಾತ ಪಕ್ಕಾ ಚಡ್ಡಿ. ಈ ಹಿಂದೆ ಸಂಘದ ಪ್ರಚಾರಕನಾಗಿ, ಸಂಘ ಚಾಲಕನಾಗಿ, ಬೋಧಕ್‌ನಾಗಿ ಆರೆಸ್ಸೆಸ್‌ಗೆ ಮಣ್ಣು ಹೊತ್ತಿರೋದಲ್ಲದೆ ಒಮ್ಮೆ ಬಿಜೆಪಿಯ ಬೆಂಗಳೂರು ಸಿಟಿ ಕೌನ್ಸಿಲ್ ಸೆಕ್ರೆಟರಿಯಾಗಿ ಅಧಿಕಾರದ ರುಚಿ ಕಂಡಂತವ. ಜೊತೆಗೆ ಮಧುಗಿರಿ ನಗರಸಭೆ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದವ. ಇನ್ನು ಹೊಸ ಪಾರ್ಟಿಯ ಪ್ರಧಾನ ಕಾರ್ಯದರ್ಶಿ ನಾರಾಯಣಪ್ಪ ಎಂಬಾತನಂತೂ ಈಗಲೂ ಆರೆಸ್ಸೆಸ್‌ನ ಸಕ್ರಿಯ ಬೋಧಕ. ಜನಸ್ಪಂದನದ ಸಂಘಟನಾ ಕಾರ್ಯದರ್ಶಿಯಾಗಿರುವ ನರೇಂದ್ರ, ಪಕ್ಷದ ಬೆಂಗಳೂರು ಸಿಟಿ ಅಧ್ಯಕ್ಷ ಶ್ರೀಧರ್ ಇವರೆಲ್ಲಾ ಆರೆಸ್ಸೆಸ್‌ನ ಹಾಲಿ ಪ್ರಚಾರಕರು!

ಜನಸ್ಪಂದನಾ ಪಾರ್ಟಿಯ ಚಡ್ಡಿಗಳು ತಮ್ಮ ಪಕ್ಷ ಅಸ್ತಿತ್ವಕ್ಕೆ ಬಂದ ಈ ಐದು ತಿಂಗಳ ಅವಧಿಯಲ್ಲಿ ಬಿಜೆಪಿ ವಿರುದ್ಧ ಮತ್ತು ಅದರ ನಾಯಕರ ವಿರುದ್ಧ ಮುರಕೊಂಡು ಬಿದ್ದಿರುವ ಪರಿಯನ್ನು ನೋಡಿದರೆ ಸಾಕು, ಇದು ಬಿಜೆಪಿಯನ್ನು ಮುಗಿಸಲೆಂದೇ ಸುಪಾರಿ ಪಡೆದು ಹುಟ್ಟಿಕೊಂಡ ಪಕ್ಷ ಅನ್ನೋ ಅನುಮಾನ ಮೂಡುತ್ತೆ. ಈ ವಿಚಾರದಲ್ಲಿ ಸಂಘದ ಹಾಟ್‌ಫೇವರಿಟ್ 'ಮೋದಿ'ಗೂ ರಿಯಾಯ್ತಿ ಕೊಡದಿರುವುದು ವಿಶೇಷ. ಅದರಲ್ಲೂ ಮೋದಿಯನ್ನು ಅಮೆರಿಕದ ಏಜೆಂಟ್ ಅಂತ ಢಂಗುರವಾಗಿ ಪತ್ರಿಕಾಹೇಳಿಕೆಯನ್ನು ನೀಡಿರುವ ಹೊಸ ಪಾರ್ಟಿ ಆದಾಗಲೇ ಒಮ್ಮೆ ಬೆಂಗಳೂರಿನ ಮೈಸೂರ್ ಬ್ಯಾಂಕ್ ಸರ್ಕಲ್‌ನಲ್ಲಿ ಕೇಂದ್ರ ಸರ್ಕಾರದ ವಿರುದ್ಧ ಪ್ರತಿಭಟನೆಯನ್ನೂ ನಡೆಸಿದೆ. ಇನ್ನು ಕೇಸರಿ ಪಡೆಯ ಸ್ವಯಂಘೋಷಿತ ಮಿಸ್ಟರ್‌ಕ್ಲೀನ್ ಪಟ್ಟದರಸ ಮಾಜಿ ಮಂತ್ರಿ ಸುರೇಶ್ ಕುಮಾರ್ ವಿರುದ್ಧ ಹಾರಿಹಾಯ್ದಿರುವುದಿರಲಿ, ಯಡ್ಡಿಯನ್ನು ಹಿಗ್ಗಾಮುಗ್ಗ ತರಾಟೆಗೆ ತೆಗೆದು ಕೊಳ್ಳುತ್ತಿರುವುದಿರಲಿ, ಅನಂತ್‌ಕುಮಾರ್- ಅಶೋಕ್‌ರಂತವರಿಗೆ ಟಾಂಗ್ ಕೊಡುತ್ತಿರುವುದಾಗಲಿ ಇವೆಲ್ಲವೂ ಆ ಹೊಸಪಾರ್ಟಿ ಬಿಜೆಪಿ ವಿರುದ್ಧ ಸುಪಾರಿ ಪಡೆದಿರೋದನ್ನು ಸಾರಿ ಹೇಳುವಂತಿವೆ.

ಹೊಸ ಪಾರ್ಟಿ ಕಟ್ಟಿರುವುದರ ಹಿಂದೆ ಆರೆಸ್ಸೆಸ್‌ನದೇ ಪಿತೂರಿ ಇದೆ ಎನ್ನುವುದಕ್ಕೆ ಇದಕ್ಕೆ ಹೊರತಾಗಿ ಇನ್ನೂ ಹಲವು ಪುರಾವೆಗಳಿವೆ. ಮೊದಲನೆಯದಾಗಿ, ತಮ್ಮದು ಶಿಸ್ತಿನ ಸಂಘ ಎಂದು ಹೇಳಿಕೊಳ್ಳುವ ಆರೆಸ್ಸೆಸ್ ಇದುವರೆವಿಗೂ ಇವರ‍್ಯಾರ ಮೇಲೂ ಕ್ರಮ ಕೈಗೊಂಡಿಲ್ಲ. ಅದರಲ್ಲೂ ಮೋದಿಯನ್ನು 'ಅಮೆರಿಕ ಏಜೆಂಟ್' ಅಂತ ಕರೆಯುವಷ್ಟು ಉದ್ಧಟತನ ತೋರಿದಾಗಲೂ ಜನಸ್ಪಂದನಾ ಪಾರ್ಟಿಯ ಸಂಘಟಕರ ಆರೆಸ್ಸೆಸ್ ಹುದ್ದೆಗಳು ಅಬಾಧಿತವಾಗಿ ಮುಂದುವರೆಯುತ್ತವೆ ಎಂದರೆ ಏನರ್ಥ? ಸಂಘದ ಕುಮ್ಮಕ್ಕು ಇರದೇ ಹೋಗಿದ್ದರೆ ಇಷ್ಟೊತ್ತಿಗಾಗಲೆ ಇವರ ಮೇಲೆ ಆರೆಸ್ಸೆಸ್ ಕ್ರಮ ಕೈಗೊಂಡಿರುತ್ತಿತ್ತು. ಇನ್ನೂ ಒಂದು ರೋಚಕ ಸಂಗತಿಯೆಂದರೆ, ಜನಸ್ಪಂದನಾ ಪಾರ್ಟಿ ಕಟ್ಟಿರೋ ನಾರಾಯಣ ಶರ್ಮ ವೃತ್ತಿಯಲ್ಲಿ ಒಬ್ಬ ಟ್ಯಾಕ್ಸಿ ಡ್ರೈವರ್! ಒಂದು ಪಕ್ಷವನ್ನು ಕಟ್ಟುವಷ್ಟು ಧೈರ್ಯ, ಸಂಪನ್ಮೂಲ ಆತನಿಗೆಲ್ಲಿಂದ ಬಂದೀತು?


ಆರ್‌ಎಸ್‌ಎಸ್ ಮುಖ್ಯಸ್ಥ ಮೈ.ಚ. ಜಯದೇವ್


ಸಂತೋಷ್


ಹೊಸಪಾರ್ಟಿ ಅಧ್ಯಕ್ಷ ನಾರಾಯಣ ಶರ್ಮ

ಇದಕ್ಕೆಲ್ಲ ಪುಷ್ಟಿ ನೀಡುವಂತೆ ಫೆಬ್ರವರಿ 14ರಂದು ರಾಯರಾಯ ಕಲ್ಯಾಣ ಮಂಟಪದಲ್ಲಿ 'ಬಿಜೆಪಿ ವಿರೋಧಿ' ಅಜೆಂಡಾದೊಂದಿಗೆ ಈ ಪಾರ್ಟಿ ಹುಟ್ಟಿಕೊಂಡಾಗ ಅದನ್ನು ಉದ್ಘಾಟನೆ ಮಾಡಲು ಬಂದಿದ್ದು ಖುದ್ದು ಆರೆಸ್ಸೆಸ್‌ನ ಹಾಲಿ ಸಂಘಚಾಲಕ ವಿಕ್ರಮ್ ಸಿಂಹ! ಅಷ್ಟೇ ಅಲ್ಲ, ಪ್ರತಿ ತಿಂಗಳು (ಮೋದಿ ಮತ್ತು ಬಿಜೆಪಿ ಮೇಲೆ ವಾಗ್ದಾಳಿ ನಡೆಸಿದ ಮೇಲೂ) ಹೊಸ ಪಾರ್ಟಿಯ ಸಂಘಟನೆ ವಿಚಾರವಾಗಿ ಪಕ್ಷದ ಕಚೇರಿಯಲ್ಲಿ ನಡೆಯುವ ಕಾರ್ಯಕರ್ತರ ತರಬೇತಿ, ಮಾರ್ಗದರ್ಶನ ಶಿಬಿರಕ್ಕೆ ಈ ವಿಕ್ರಮ್ ಸಿಂಹ ಆಗಮಿಸಿ ಟ್ರೈನಿಂಗ್ ಕೊಟ್ಟು ಹೋಗುತ್ತಿದ್ದಾನೆ. ಆರೆಸ್ಸೆಸ್‌ನ ಸಮ್ಮತಿ ಇಲ್ಲದೆ ಹೋಗಿದ್ದರೆ ಸಂಘಚಾಲಕನೊಬ್ಬ ತನ್ನ ಎದುರಾಳಿ ಪೊಲಿಟಿಕಲ್ ಪಾರ್ಟಿಗೆ ಹೀಗೆ ಉಪದೇಶ ಮಾಡಿಹೋಗಲು ಸಾಧ್ಯವೇ? ಅಲ್ಲದೇ, ಜನಸ್ಪಂದನಾ ಪಾರ್ಟಿಯನ್ನು ಹುಟ್ಟುಹಾಕುವ ಆಲೋಚನೆ ಮೊಳೆತಿದ್ದೇ ಕೇಶವಕೃಪಾದ ಆಜುಬಾಜಿನಲ್ಲೇ ಇರುವ, ಹಿಂದೊಮ್ಮೆ ಬಸವನಗುಡಿ ಬಿಜೆಪಿ ಪ್ರಧಾನ ಕಾರ್ಯದರ್ಶಿಯಾಗಿದ್ದ ದಯಾನಂದ್‌ರ ಮನೆಯಲ್ಲಿ ಅನ್ನೋದು ಸಹ ಆರೆಸ್ಸೆಸ್‌ನ ಪಾಲುದಾರಿಕೆಯನ್ನು ದೃಢಪಡಿಸುತ್ತದೆ.

ಹಿಂದೆಯೂ ನಡೆದಿತ್ತು ಆರೆಸ್ಸೆಸ್ ಹುನ್ನಾರ

ಜನಸ್ಪಂದನಾ ಪಾರ್ಟಿಯ ಹುಟ್ಟಿಗೂ, ಅದರ ಚಟುವಟಿಕೆಗಳಿಗೂ, ಆರೆಸ್ಸಿಗರಿಗೂ ಇಷ್ಟು ಸುಸ್ಪಷ್ಟ ನಂಟು ಇದ್ದಾಗ್ಯೂ ಕೇಶವಕೃಪ ಮಾತ್ರ ಅಧಿಕೃತವಾಗಿ 'ತಮಗೂ, ಜನಸ್ಪಂದನಕ್ಕೂ ಸಂಬಂಧವಿಲ್ಲ' ಅಂತ ಹೇಳಿಕೆ ಕೊಡುತ್ತಿದೆ. ಅಸಲಿಗೆ ಜನಸ್ಪಂದನಾ ಅನ್ನೋ ಪಾರ್ಟಿ ಅಸ್ತಿತ್ವಕ್ಕೆ ಬಂದಿರೋ ಸಂಗತಿಯೇ ಬಹಳಷ್ಟು ಜನರಿಗೆ ತಿಳಿದಿಲ್ಲ. ಮಾಧ್ಯಮಗಳ ಬೆಳಕೂ ಇತ್ತ ಬಿದ್ದಿಲ್ಲ. ಅಂತದ್ದರಲ್ಲಿ ಯಾರೂ ಕೇಳದೆ ತನಗೂ ಅದಕ್ಕೂ ಸಂಬಂಧ ಇಲ್ಲ ಅಂತ ಕೇಶವಕೃಪ ಬಡಬಡಿಸುತ್ತಿರುವುದು ನೋಡಿದರೆ, ಕುಂಬಳಕಾಯಿ ಕಳ್ಳ ಹೆಗಲು ಮುಟ್ಟಿ ನೋಡಿಕೊಂಡಂತಿದೆ. ಇರಲಿ, ಆರೆಸ್ಸೆಸ್ ಇಂತಹ ಪರ್ಯಾಯ ಪೊಲಿಟಿಕ್ಸ್‌ನ ಕುತಂತ್ರ ನಡೆಸಿದ್ದು ಇದೇ ಮೊದಲೇನಲ್ಲ. 90ರ ದಶಕದ ಅಂತ್ಯದಲ್ಲಿ ದಳ ಮತ್ತು ಕಾಂಗ್ರೆಸ್ ಪಾರ್ಟಿಗಳು ಕರ್ನಾಟಕದಲ್ಲಿ ಭಿನ್ನಮತಕ್ಕೆ ಸಿಲುಕಿ ಬಿಜೆಪಿ ಆಗಷ್ಟೇ ಮುಂಚೂಣಿಗೆ ಬರುತ್ತಿದ್ದ ಸಂದರ್ಭದಲ್ಲೇ ಯಡ್ಡಿಗೆ ಬ್ರೇಕ್ ಹಾಕಲು ಇಂತಹದ್ದೇ ಒಂದು ಪ್ರಯತ್ನವನ್ನು ಆರೆಸ್ಸೆಸ್‌ನ ಕೇಶವಕೃಪ ನಡೆಸಿತ್ತು. 1996ರಲ್ಲಿ ಪಂಡಿತ್ ದೀನದಯಾಳ್ ವಿಚಾರವೇದಿಕೆ ಅನ್ನೋ ಸಂಘಟನೆ ಜನ್ಮವೆತ್ತುವಂತೆ ನೋಡಿಕೊಂಡಿದ್ದ ಆರೆಸ್ಸೆಸ್ ಆಗಲೂ ಬಿಜೆಪಿ ಮೇಲೆ ದಾಳಿ ಮಾಡುವಂತೆ ಮಾಡಿ, ಬಿಜೆಪಿಯನ್ನು ತನ್ನ ಹಿಡಿತಕ್ಕೆ ತೆಗೆದುಕೊಂಡಿತ್ತು. ಆ ವಿಚಾರವೇದಿಕೆ ಬಿಜೆಪಿ ಮೇಲೆ ಆರಂಭದಲ್ಲಿ ದಾಳಿ ಮಾಡಿದಾಗ 'ನಮಗೂ ಆ ವಿಚಾರವೇದಿಕೆಗೂ ಸಂಬಂಧವಿಲ್ಲ' ಅನ್ನೋ ಹೇಳಿಕೆಗಳನ್ನೇ ಆರೆಸ್ಸೆಸ್ಸಿಗರು ಹೇಳಿಕೊಂಡು ಬರುತ್ತಿದ್ದರು. ಆಮೇಲೆ 2001ರ ವೇಳೆಗೆ ನಿಧಾನಕ್ಕೆ ಇಡೀ ವೇದಿಕೆಯನ್ನು ಆರೆಸ್ಸೆಸ್ ಕಿಂಗ್‌ಪಿನ್ ಸಂತೋಷ್ (ಬಿಜೆಪಿಯ ಸಂಘಟನಾ ಕಾರ್ಯದರ್ಶಿಯಾಗಿದ್ದವ), ಸುಧೀರ್, ಮೋಹನ್ ಎಂಬುವವರು ತಮ್ಮ ಕಬ್ಜಾಕ್ಕೆ ಪಡೆದು ಅದನ್ನು ಕೇಶವಕೃಪಾದ ಅಧಿಕೃತ ಅಂಗಸಂಘಟನೆಯನ್ನಾಗಿಸಿದ್ದರು. ಇಂಟರೆಸ್ಟಿಂಗ್ ಸಂಗತಿಯೆಂದರೆ, ಸಂಘಿಗಳ ಆದೇಶದಂತೆ ಅವತ್ತು ವಿಚಾರವೇದಿಕೆಯನ್ನು ಕಟ್ಟಿದ್ದು, ಈಗ ಜನಸ್ಪಂದನಾ ಪಾರ್ಟಿ ಕಟ್ಟಿರುವ ನಾರಾಯಣ ಶರ್ಮನೇ! ಇವತ್ತು ಬಿಜೆಪಿ ಅಂತ್ಯಕ್ಕೆ ಸುಪಾರಿ ಕೊಟ್ಟಂತೆ ಹುಟ್ಟಿಕೊಂಡಿರುವ ಜನಸ್ಪಂದನಾ ಪಾರ್ಟಿಗೆ ಕೇಶವಕೃಪವೇ 'ಫೈನಾನ್ಸು' ಮಾಡಿರುವ ಸಾಧ್ಯತೆಯನ್ನು ಈ ಇತಿಹಾಸ ದೃಢಪಡಿಸುತ್ತದೆ.

ಇಂತಹದ್ದೇ ಮತ್ತೊಂದು ನಿದರ್ಶನವೂ ಉಂಟು. 2005ರ ಆಸುಪಾಸಿನಲ್ಲಿ ನಡೆದ ವಿದ್ಯಮಾನ ಅದು. ಆಗಿನ್ನೂ ಸಂತೋಷ್'ಜಿ' ಶಿವಮೊಗ್ಗ ಆರೆಸ್ಸೆಸ್‌ನ ವಿಭಾಗ ಪ್ರಚಾರಕ ನಾಗಿದ್ದ. ಭಜರಂಗ ದಳದಿಂದ ಹೊರದಬ್ಬಿಸಿಕೊಂಡಿದ್ದ ಪ್ರಮೋದ್ ಮುತಾಲಿಕ್ ಎಂಬ ಕಪಿಶನ ಮೂಲಕ ಕರ್ನಾಟಕದಲ್ಲಿ ಭಾಳಾ ಠಾಕ್ರೆಯ ಕೇಸರಿ ಕವಲು 'ಶಿವಸೇನೆ'ಯನ್ನು ವಿಸ್ತರಿಸಲು ಒಂದಷ್ಟು ಕಸರತ್ತುಗಳು ನಡೆದಿದ್ದವು. ಉಗ್ರ ಹಿಂದೂತ್ವವನ್ನು ಪ್ರತಿಪಾದಿಸಿದರೂ ಶಿವಸೇನೆಗೆ ಪ್ರಾದೇಶಿಕ ಮೂಲಭೂತವಾದಿ ಸೋಂಕೂ ತಗುಲಿಕೊಂಡಿರುವುದರಿಂದ ಮಹಾರಾಷ್ಟ್ರದಲ್ಲಿ ಅದಕ್ಕೆ ಸಿಕ್ಕಷ್ಟು ಫಲವತ್ತತೆ ಕರ್ನಾಟಕದಲ್ಲಿ ಸಿಗಲಿಕ್ಕಿಲ್ಲ ಅನ್ನೋದು ಠಾಕ್ರೆಗೂ ಗೊತ್ತಿದ್ದುದರಿಂದ ಮುತಾಲಿಕ್‌ನ ಮಂಗಾಟಕ್ಕೆ ಕಾಸು ಸುರಿಯಲು ಆತ ಒಪ್ಪಿರಲಿಲ್ಲ. ಆಗ ಬಿಜೆಪಿಗೆ ಸೆಡ್ಡುಹೊಡೆದು ನಿಲ್ಲುವುದಾದರೆ ಶಿವಸೇನೆಗೆ ಫೈನಾನ್ಸು ಮಾಡಲು ಸಿದ್ಧ ಅಂತ ಮುಂದೆ ಬಂದಿದ್ದೇ ಆರೆಸ್ಸೆಸ್‌ನ ಸಂತೋಷ್‌ಜಿ! ಒಂದೇ ಪೇಮೆಂಟ್‌ನಲ್ಲಿ ಬರೋಬ್ಬರಿ 18 ಲಕ್ಷ ರೂಪಾಯಿಯನ್ನು ಮುತಾಲಿಕ್ ಕೈಗಿತ್ತಿದ್ದ ಸಂತೋಷ್ ಅಕ್ಷರಶಃ ಬಿಜೆಪಿಗೆ ಸುಪಾರಿ ಕೊಟ್ಟಿದ್ದ. ಬೆಂಗಳೂರಿನ ಭವಾನಿ ಕಲ್ಯಾಣಮಂಟಪದಲ್ಲಿ ಭರ್ಜರಿ ಸಮಾರಂಭ ನಡೆಯಿತಾದರೂ ಶಿವಸೇನೆ ಟೇಕಾಫ್ ಆಗಲೇ ಇ

ಆರೆಸ್ಸೆಸ್‌ನ ಹಲವು ಲೆಕ್ಕ

ಜನಸೇವೆ, ರಾಷ್ಟ್ರನಿರ್ಮಾಣದ ಹೊರ ರಾಜಕಾರಣದಲ್ಲಿ ತಾನು ತೊಡಗಿಸಿಕೊಳ್ಳುವುದಿಲ್ಲ ಹೇಳಿಕೊಳ್ಳುತ್ತಲೇ ಬಿಜೆಪಿಯ ಜುಟ್ಟು ಜನಿವಾರಗ ಮುಷ್ಟಿಯಲ್ಲಿ ಬಿಗಿದುಕೊಂಡಿರುವ ಆರೆಸ್ಸೆಸ್ ಕೌಂ ಪೊಲಿಟಿಕ್ಸ್‌ನಲ್ಲೂ ಸಮಯ ಸಾಧಿಸುತ್ತಾ ಬಂ ತೆರೆಮರೆಯಲ್ಲಿ ನಿಂತು ಜನಸ್ಪಂದನಾ ಪಾರ್ಟಿಯ ಹುಟ್ಟುಹಾಕಿ, ಬಿಜೆಪಿಗಳಿಗೆ ತೊಳ್ಳೆ ನಡುಕ ಹುಟ್ಟಿ ಮಾಡಿರುವ ಹುನ್ನಾರದ ಹಿಂದೆಯೂ ಆರೆಸ್ಸೆಸ್‌ನ ಹ ಕುತಂತ್ರಗಳು ಅಡಗಿವೆ. ಅವುಗಳಲ್ಲಿ ಮೊದಲನೆಯ ಯಡ್ಡಿಯ ಓವರ್‌ಟೇಕ್ ವೇಗಕ್ಕೆ ಬ್ರೇಕ್ ಹಾಕುವು ಲಿಂಗಾಯತ ಮತಗಳ ಕಾರಣಕ್ಕೆ ಯಡ್ಡಿ ಬಿಜ ಅನಿವಾರ್ಯ, ಆತ ಕೆಜೆಪಿಗೆ ಮಂಗಳಹಾಡಿ ಬಿಜ ವಾಪಾಸಾಗೋದು ನಿಶ್ಚಿತ ಅಂತ ಕೇಶವಕೃ ಮನವರಿಕೆಯಾದಾಗಲೇ ವಾಪಾಸದ ಯಡ್ಡಿಯ ಎಂತದ್ದಿರಬಹುದು ಅನ್ನೋದನ್ನು ಕೇಶವಕೃಪ ಅಂದಾಜಿ ಜೊತೆಗೆ ಯಡ್ಡಿ ವಾಪಾಸಾತಿಯಿಂದ ಬಿಜೆಪಿಯಲ್ಲಿ ಭಿನ್ನಮತಗಳು ಘಟಿಸಬಹುದೆನ್ನುವುದೂ ಮನದಟ್ಟಾ ಯಡ್ಡಿಯ ವೇಗಕ್ಕೆ ಬ್ರೇಕ್ ಹಾಕುವುದರ ಜೊ ಬಿಜೆಪಿಯೊಳಗಿನ ಭಿನ್ನರನ್ನೂ ಬೆದರಿಸಿಟ್ಟುಕೊಳ ಸಲುವಾಗಿ ಬೆದರುಬೊಂಬೆಯಂತೆ ಬಳಸಿಕೊಳ ಜನಸ್ಪಂದನಾ ಪಾರ್ಟಿಯನ್ನು ಕೇಶವಕೃಪ ಹುಟ್ಟುಹಾಕಿದ್ದು ನಿಜ. ಆದರೆ ಆರೆಸ್ಸೆಸ್ಸಿನೊಳಗೇ ಎರಡು ವರ್ಗಗ ಮೊದಲನೆಯ ವರ್ಗ ಜನಸಮೂಹವನ್ನು ರಾಷ್ಟ್ರೀಯ ಹಿಂದೂತ್ವ, ಕೋಮುವಾದದ ಹೆಸರಿನಲ್ಲಿ ಪ್ರಚೋ ಸಂಘಟಿಸಿ ಆ ಸಂಘಟನೆಯನ್ನು ತಮ್ಮ ಸ್ವಾರ್ಥದ ಲಾ ಅಧಿಕಾರಕ್ಕೆ ಬಳಸಿಕೊಳ್ಳುವ ಮುನ್ನೆಲೆಯ ನಾಯಕರದ್ದ ಅಂತಹ ಪ್ರಚೋದನೆಗೆ ಸಂಪೂರ್ಣವಾಗಿ ಮರು ರಾಷ್ಟ್ರೀಯತೆಯ ಭ್ರಮೆಯಲ್ಲಿ ಕೋಮು ರಾಜಕಾರಣವನ್ನು ನೆಲೆಗೊಳಿಸಲು ಬಡಿದಾಡುವ ಉನ್ಮಾ ವಿವೇಚನಾಶಕ್ತಿಯನ್ನು ಕಳೆದುಕೊಂಡ ಕರಸೇವಕರ ಗು ಮತ್ತೊಂದು. ಹಿಂದೂತ್ವದ ಅಮಲು ಮೇ ಆರೆಸ್ಸೆಸ್ಸಿಗರಿಗೆ, ಬಿಜೆಪಿಗಳಿಗೆ ಅಧಿಕಾರದ ಮೆಟ್ಟಿಲಾ ತಳಮಟ್ಟದ ಕೇಸರಿ ಕಾರ್ಯಕರ್ತರು ನಿಜಕ್ಕೂ ಹಿಂದೂ ಅಮಲನ್ನು ನೆತ್ತಿಗೇರಿಸಿಕೊಂಡಿದ್ದಾರೆ. ಬಿಜೆಪಿಗಳು ಬಂದರೆ ರಾಮಮಂದಿರ ನಿರ್ಮಾಣವಾಗಿಬಿಡುತ್ತೆ ಹಿಂ ರಾಷ್ಟ್ರವಾಗಿಬಿಡುತ್ತೆ ಎಂಬ ಉನ್ಮಾದದಲ್ಲಿದ್ದರು. ಮೋ ಸರ್ಕಾರ ಕೋಮುವಾದ ರಾಜಕಾರಣದ ಮೂಲಕ ನೆಲೆಯನ್ನು ಭದ್ರಪಡಿಸಿಕೊಳ್ಳಲು ಯತ್ನಿಸುತ್ತಿದೆಯಾದ ಚುನಾವಣೆಗೂ ಮುನ್ನ ಈ ಆರೆಸ್ಸೆಸ್ ಕಾರ್ಯಕರ್ತ ಯಾವ ಪರಿ ಆಶ್ವಾಸನೆಯನ್ನು ಬಿತ್ತಿದ್ದರೆಂದರೆ, ಅವರ‍್ಯಾರಿ (ಮೋದಿ ಭಜನಾಮಂಡಳಿ ಹೊರತುಪಡಿಸಿ) ಮೋ ಸರ್ಕಾರದ ಹಿಂದೂತ್ವದ ವೇಗ ತೃಪ್ತಿ ತರುತ್ತಿಲ್ಲ. ಬಿಜೆಪಿ ನಮಗೆ ಮೋಸ ಮಾಡಿದರು ಅನ್ನೋ ಕೊರಗು ಕೆಲವ ಕಾಡುತ್ತಿದೆ. ಅಂತಹ ಕೆಲವರ ಪಡೆ ಕೇಶವಕೃಪಾದ ಇದೆ. ಅಂತವರೆ ಈಗ ಜನಸ್ಪಂದನದ ಬೆನ್ನಿಗೆ ನಿಂತಿರೋ

ಆರಂಭದಲ್ಲಿ ಆರೆಸ್ಸೆಸ್‌ನ ಲೆಕ್ಕಾಚಾರ ಬಿಜೆ ಬೆದರುಬೊಂಬೆಯನ್ನು ಹುಟ್ಟುಹಾಕುವುದೇ ಆಗಿತ್ತಾದ ಬಿಜೆಪಿಯಿಂದ 'ಹಿಂದೂತ್ವ' ವಂಚನೆಗೊಳಗಾದ ಕೊರಗಿ ಕೇಶವಕೃಪಾದ ಕೆಲವರು ಅದನ್ನು ನಿಜಕ್ಕೂ ಬಿಜೆ ಪರ್ಯಾಯವಾಗಿ ಬೆಳೆಸಲು ಸಾಥ್ ನೀಡುತ್ತಿದ್ದಾರೆ. ಧೈರ್ಯದಲ್ಲೇ ಜನಸ್ಪಂದನಾ ಪಾರ್ಟಿಯವರು ಬಿಜೆಪಿ ಮೆ ಮುಗಿಬೀಳುತ್ತಿರೋದು. ಇದು ಕೇಶವಕೃಪಾದಲ್ಲಿರ ಆರೆಸ್ಸೆಸ್ ತಂತ್ರಗಾರರು ಮತ್ತು ಆರೆಸ್ಸೆಸ್ ಮೂಲಭ ವಾದಿಗಳ ನಡುವೆಯೇ ಒಂದು ಬಿರುಕು ಸೃಷ್ಟಿಸು ಅದೇನಾದರು ವಿಕೋಪಕ್ಕೆ ಹೋದರೆ ಬಿಜೆಪಿ ಬೋರಲು ಬೀಳುವುದು ಗ್ಯಾರಂಟಿ.

ಅಂದಹಾಗೆ, ಯಡ್ಡಿಯ ಕಾರಣಕ್ಕೆ ಬಂಡಾಯವೇ ಈಶ್ವರಪ್ಪ, ಸಿಟಿ ರವಿ, ರವೀಂದ್ರನಾಥನಂತವರು ಪಾ ಬಿಡುವ ಅನಾಹುತಕ್ಕೆ ಕೈಹಾಕಿದರೆ ಅವರು ಬ ಪಕ್ಷಗಳಿಗೊ ಅಥವಾ ಹೊಸ ಪಕ್ಷಗಳನ್ನೊ ಕಟ್ಟಿಕೊ ಈ ಹಿಂದೆ ಯಡ್ಡಿ ಶ್ರೀರಾಮುಲುಗಳು ಮಾಡಿದ ಡ್ಯಾಮೇಜ್ ಮಾಡುವುದನ್ನು ತಡೆಯಲು, ಅವರಿಗ ನಿರಾಶ್ರಿತ ಶಿಬಿರ ಒಂದಿರಲಿ ಎನ್ನುವ ಕಾರಣಕ್ಕೂ ಆರೆ ಈ ಜನಸ್ಪಂದನಾ ಪಾರ್ಟಿಯನ್ನು ಹುಟ್ಟುಹಾಕಿದೆ ಅ ಮಾತುಗಳೂ ಕೇಳಿಬರುತ್ತಿವೆ. ಮುಂದಿನ ವಿಧಾನಸ ಚುನಾವಣೆಯಲ್ಲಿ ಮೈತ್ರಿ ಸರ್ಕಾರ ಅನಿವಾರ್ಯವಾದ ಬಿಜೆಪಿ, ಜೆಡಿಎಸ್ ಜೊತೆಗೂಡಿದರೂ ಈ ನಿರಾಶ್ರ ಶಿಬಿರಾರ್ಥಿಗಳನ್ನೂ ಮೈತ್ರಿಯೊಳಕ್ಕೆ ತಳ್ಳಿ ಮ್ಯಾಕ್ಸಿಮ ಅಧಿಕಾರವನ್ನು 'ಕೇಸರಿ ಪಡೆ'ಯೇ ದಕ್ಕಿಸಿಕೊಳ್ಳುವ ಮಾಡುವ ಹುನ್ನಾರ ಇದ್ದರೂ ಇರಬಹುದು. ಕುತ ಕಾರ್ಖಾನೆಯಂತಿರುವ ಕೇಶವಕೃಪಾದಲ್ಲಿ ಇನ್ನೂ ಏನೇ ಲೆಕ್ಕಾಚಾರ ನಡೆದಿವೆಯೋ ಬಲ್ಲವರ‍್ಯಾರು...

■ ವರದಿಗಾ

ಇಸ್ಲಾಂ ಧರ್ಮ

02⇦

ಹೋಗಲಾಡಿಸುವ ದಾನವನ್ನೇ ಎಲ್ಲೆಡೆ ಧರ್ಮವೆಂದು ಕರೆಯಲಾಗುತ್ತದೆ. ಧರ್ಮ ಮಾಡಿರಿ ಎಂಬುದು ಕಷ್ಟದಲ್ಲಿ ಇದ್ದವರಿಗೆ ಸಹಾಯ ಮಾಡಿರಿ ಎಂಬುದನ್ನೇ ಸೂಚಿಸುತ್ತದೆ.

"ಸೊತ್ತನ್ನು ಪಾಲು ಮಾಡುವ ಸಂದರ್ಭದಲ್ಲಿ (ಹಕ್ಕುದಾರರಲ್ಲದ) ಸಂಬಂಧಿಕರೂ ಅನಾಥರೂ ನಿರ್ಗತಿಕರೂ ಹಾಜರಾದರೆ ಅವರಿಗೂ ಕೊಡಿರಿ. ಅವರೊಡನೆ ಸೌಮ್ಯದ ಮಾತುಗಳನ್ನಾಡಿರಿ."
(4-8)

ಎಂಬುದು ಕುರಾನಿನ ಕಳಕಳಿಯಾಗಿದೆ. ಇದನ್ನು ಪಾಲಿಸುವ ಸಮಾಜದಲ್ಲಿ ಅಸಹಾಯಕತೆ, ಹಾಹಾಕಾರ ಇರುವುದಿಲ್ಲ, ಕಳ್ಳತನ, ಸುಲಿಗೆಗಳು ಇರುವುದಿಲ್ಲ. ಬರಿ ಇಸ್ಲಾಮೀ ಸರ್ಕಾರ ಎಂದರೆ ಆಗದು, ಇಸ್ಲಾಮೀ ಸಮಾಜವೂ ಇರಬೇಕಾಗುತ್ತದೆ. ಎರಡನೇ ಖಲೀಫಾ ಹಜರತ್ ಉಮರ್ (ಕ್ರಿಸ್ತಶಕ 634 ರಿಂದ 644ರ ವರೆಗೆ ಖಲೀಫಾ ಆಗಿದ್ದರು) ಅವರು, ಅರಬಸ್ತಾನದಲ್ಲಿ ಬಡತನ ಹೆಚ್ಚಾದಾಗ ಕಳ್ಳರ ಕೈ ಕತ್ತರಿಸುವುದನ್ನು ನಿಲ್ಲಿಸಲು ತಿಳಿಸಿದರು. ಅರಬರಲ್ಲಿ ಬಡತನ ಹೆಚ್ಚಾಯಿತು ಎಂದರೆ ಅರಬರಲ್ಲಿನ ಶ್ರೀಮಂತರು ಇಸ್ಲಾಂ ಧರ್ಮದ ಸಾಮಾಜಿಕ ಜವಾಬ್ದಾರಿಯನ್ನು ನಿಭಾಯಿಸಿಲ್ಲ ಎಂದೇ ಅರ್ಥ. "ಕಳ್ಳತನ ಮಾಡಿದ ಸ್ತ್ರೀ ಪುರುಷರ ಕೈಗಳನ್ನು ಕಡಿಯಿರಿ" (5-38) ಎಂದು ಕುರಾನ್ ತಿಳಿಸಿದೆ. ಇಸ್ಲಾಂ ರಾಜ್ಯದಲ್ಲಿ ಕುರಾನ್ ಪ್ರಕಾರ ಇಸ್ಲಾಮೀ ಸಮಾಜ ಅಸ್ತಿತ್ವದಲ್ಲಿದ್ದು ಶ್ರೀಮಂತ ಮುಸ್ಲಿಮರು ಬಡ ಮುಸ್ಲಿಮರಿಗಾಗಿ ತಮಗೆ ನಿಗದಿಪಡಿಸಿದ ಎಲ್ಲ ಧಾರ್ಮಿಕ ಕರ್ತವ್ಯಗಳನ್ನು ಪೂರೈಸಿದ ನಂತರವೂ ಬಡವರಿಗೆ ಗೌರವಯುತವಾಗಿ ಬದುಕುವ ವಾತಾವರಣ ಕಲ್ಪಿಸಿದ ನಂತರವೂ ಯಾರಾದರೂ ಕಳ್ಳತನ ಮಾಡಿದರೆ ಅವರ ಕೈಗಳನ್ನು ಕಡಿಯಲು ಕುರಾನ್ ತಿಳಿಸಿದೆ. ಕಳ್ಳತನ ಮಾಡುವ ಅವಶ್ಯಕತೆ ಇಲ್ಲದ ನಿಜವಾದ ಇಸ್ಲಾಮೀ ಸಮಾಜದಲ್ಲಿ ಕಳ್ಳತನ ಮಾಡುವವರ ಕೈ ಕಡಿಯಲು ಕುರಾನ್ ಆದೇಶಿಸಿದೆ ಎಂಬುದನ್ನು ಹಜರತ್ ಉಮರ್ ಅವರು ಅರ್ಥೈಸಿದ್ದು ಅವರ ಸಾಮಾಜಿಕ, ಆರ್ಥಿಕ ಮತ್ತು ನಿಜವಾದ ಧಾರ್ಮಿಕ ಪ್ರಜ್ಞೆಯ ಸಂಕೇತವಾಗಿದೆ.

"ಅಲ್ಲಾಹನು ಬಡ್ಡಿಯನ್ನು ನಾಶಗೊಳಿಸುತ್ತಾನೆ ಮತ್ತು ದಾನಧರ್ಮಗಳನ್ನು ಪೋಷಿಸುತ್ತಾನೆ."
(2-276)

ಇಸ್ಲಾಂನಲ್ಲಿ ದಾನಧರ್ಮಗಳು ಸಾಮಾಜಿಕ ಜವಾಬ್ದಾರಿಯ ಪ್ರತೀಕವಾಗಿ ಬರುವವು. ಅವು ಶ್ರೀಮಂತರು ಮತ್ತು ಬಡವರ ಮಧ್ಯದ ಧಾರ್ಮಿಕ ಸೇತುವೆಗಳಾಗಿವೆ ಎಂಬುದು ಮೇಲೆ ತಿಳಿಸಿದ ಕುರಾನಿನ ವಾಕ್ಯದ ತಿರುಳಾಗಿದೆ. ಇಸ್ಲಾಂನಲ್ಲಿ ದಾನಧರ್ಮಗಳು ಬಡವರ ಆತ್ಮಗೌರವಕ್ಕೆ ಚ್ಯುತಿ ಬಾರದ ರೀತಿಯಲ್ಲಿವೆ. ಬಡ್ಡಿಯು ಬಡತನವನ್ನು ಹೆಚ್ಚಿಸುವ ದುಷ್ಟಶಕ್ತಿಯಾಗಿದೆ. ಈ ಬಡ್ಡಿಗೆ ವಿರುದ್ಧವಾದುದು ಜಕಾತ್. ಈ ಜಕಾತ್ ಅಂತೂ ದಾನವೇ ಅಲ್ಲ. ಅದು ಉಳ್ಳವರ ಸಾಮಾಜಿಕ ಕರ್ತವ್ಯ ಧಾರ್ಮಿಕ ಜವಾಬ್ದಾರಿ. ಶ್ರೀಮಂತರ ಸಂಪತ್ತಿನಲ್ಲಿ ಬಡವರಿಗೆ ಅಲ್ಲಾಹನು ತೋರಿಸಿಕೊಟ್ಟ ಪಾಲು!


ಇಸ್ಲಾಮೀ ಸರ್ಕಾರವಿದ್ದ ಕಡೆ ಸರ್ಕಾರವೇ ಜಕಾತ್ ಕೂಡಿಸಿ ಸಾಮಾಜಿಕ ಸೇವಾ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತದೆ. ಉಳಿದೆಡೆ ಮುಸ್ಲಿಂ ಸಾಮಾಜಿಕ ಸಂಸ್ಥೆಗಳು ಈ ಕಾರ್ಯವನ್ನು ನಿರ್ವಹಿಸುವವು. ಅನೇಕ ಶ್ರೀಮಂತರು ನೇರವಾಗಿ ಬಡವರ ಮನೆಗೇ ಹೋಗಿ ಸಹಾಯ ಮಾಡುವರು. "ಜಕಾತ್ ಅನ್ನು ಬಹಿರಂಗವಾಗಿ ನೀಡಿರಿ. ಇದರಿಂದ ಇತರರಲ್ಲಿಯೂ ಈ ಕಡ್ಡಾಯ ವಿಧಿಯನ್ನು ಪೂರೈಸುವ ಭಾವನೆ ಉದಿಸೀತು. ಇತರ ದಾನಧರ್ಮಗಳನ್ನು ಮಾತ್ರ ರಹಸ್ಯವಾಗಿ ನೀಡಿರಿ" ಎಂದು ಪೈಗಂಬರರು ತಿಳಿಸಿದ್ದಾರೆ.

"ದಾನಧರ್ಮಗಳನ್ನು ನೀವು ಬಹಿರಂಗವಾಗಿಯೇ ಮಾಡುವುದಿದ್ದರೂ ಅದು ಉತ್ತಮವೇ. ಆದರೆ ನೀವದನ್ನು ರಹಸ್ಯವಾಗಿ ಬಡವರಿಗೆ ಕೊಟ್ಟರೆ, ಅದುವೆ ನಿಮಗೆ ಇನ್ನಷ್ಟು ಉತ್ತಮ. ಅದು ನಿಮ್ಮ ಅದೆಷ್ಟೋ ಪಾಪಗಳನ್ನು ಪರಿಹರಿಸುವುದು." (2-271)

ಎಂದು ಕುರಾನ್ ತಿಳಿಸಿದೆ.

"ತಾವೇನನ್ನು ವೆಚ್ಚ ಮಾಡಬೇಕೆಂದು ಜನರು ನಿಮ್ಮನ್ನು ಕೇಳುತ್ತಾರೆ. ಹೇಳಿರಿ: ನೀವು ವೆಚ್ಚ ಮಾಡುವ
ಧನವೇನಿದ್ದರೂ ಅದನ್ನು ಮಾತಾಪಿತರಿಗೂ ಆಪ್ತ ಬಂಧುಗಳಿಗೂ
ಅನಾಥರಿಗೂ ನಿರ್ಗ[illegible] [illegible]ರಿಗೂ
ವೆಚ್ಚ ಮಾಡಿರಿ."

ಎಂದು ಕುರಾನ್ ಆದೇಶಿಸಿದೆ. ಮಾನವ ತಾನು ಗಳಿಸಿದ್ದನ್ನು ಕುಟುಂಬ ಮತ್ತು ಸಮಾಜಕ್ಕೆ ವೆಚ್ಚ ಮಾಡಬೇಕು ಎಂಬುದು ಇಲ್ಲಿ ಸ್ಪಷ್ಟವಾಗಿದೆ. ಮಾತಾಪಿತರಿಂದ ನಿರ್ಗತಿಕರವರೆಗೆ ಎಲ್ಲರನ್ನೂ ಪ್ರೀತಿ, ಗೌರವ ಮತ್ತು ಸಹಾನುಭೂತಿಯಿಂದ ಕಾಣುವ ಉದಾತ್ತ ಮಾನವನನ್ನು ನಿರ್ಮಾಣ ಮಾಡುವುದೇ ಕುರಾನಿನ ಇಚ್ಛೆಯಾಗಿದೆ. ಈ ಉದಾತ್ತ ಮಾನವನಿಗೆ ಇಡೀ ಸಮಾಜದ ಬಗ್ಗೆ ಕಾಳಜಿ ಇರುವಾಗ, ಆತ ಸುಲಿಗೆ ಬದುಕನ್ನು ಸಹಜವಾಗಿಯೆ ತಿರಸ್ಕರಿಸುವನು. ತನ್ನ ಕೃತ್ಯದಿಂದ ಭೂಮಿ, ನೀರು ಮತ್ತು ಗಾಳಿ



ಮಲಿನವಾಗಬಾರದು ಎಂಬ ಕಾಳಜಿ ಆತನಿಗೆ ಸಹಜವಾಗಿ ಇರುತ್ತದೆ. ಪರಿಸರನಾಶವನ್ನು ಆತ ಎಂದಿಗೂ ಒಪ್ಪಲಾರ. ಮನುಷ್ಯ ಸಂಬಂಧಗಳನ್ನು ಕೆಡಿಸುವವರನ್ನು ಬೆಂಬಲಿಸಲಾರ. ನಿರಾಡಂಬರ ಬದುಕಿನಲ್ಲಿ ತೃಪ್ತಿ ಹೊಂದುತ್ತ ದೇವರ ಧ್ಯಾನದಲ್ಲಿ ಸುಖ ಪಡುತ್ತಾನೆ. ಇಂಥ ಮನುಷ್ಯರು ಲೋಕದಲ್ಲಿ ನಿರುಪದ್ರವಿಗಳಾಗಿ ಬದುಕಿ ಸದ್ದುಗದ್ದಲವಿಲ್ಲದೆ ಇಹಲೋಕ ಯಾತ್ರೆ ಮುಗಿಸುತ್ತಾರೆ. "ನಿಮ್ಮ ಧನವನ್ನು ನೀವು ಅನ್ಯಾಯವಾಗಿ ತಿನ್ನಬಾರದು" ಎಂಬ ಕುರಾನ್ ವಾಕ್ಯದ ಪ್ರಕಾರ ಅವರು ತಮ್ಮ ಸಂಪತ್ತಿನ ಒಂದು ಭಾಗವನ್ನು ಸಮಾಜದ ಒಳಿತಿಗಾಗಿ ಬಳಸುತ್ತಾರೆ. ಕುಟುಂಬಪ್ರಿಯರಾಗಿರುತ್ತಾರೆ. ಕುಟುಂಬದವರೊಡನೆ, ಬಂಧುಬಳಗದೊಡನೆ ಮತ್ತು ಮಿತ್ರರೊಡನೆ ಪ್ರೀತಿಯಿಂದ ಬದುಕಲಾರದವ ಇಡೀ ಸಮಾಜದ ಬಗ್ಗೆ ಕಾಳಜಿ ಹೊಂದಲು ಸಾಧ್ಯವಿಲ್ಲ. ಆದರೆ ಇಂಥ ಜನರ ಸಂಖ್ಯೆ ಇಳಿಮುಖವಾಗುತ್ತಿರುವಂತೆಯೆ ಸಾಮಾಜಿಕ ಅನಿಷ್ಟಗಳು ಹೆಚ್ಚಾಗತೊಡಗುತ್ತವೆ. ಫ್ಯಾಸಿಸ್ಟ್ ಮನೋಭಾವದ ಜನ ತಮ್ಮ ತಮ್ಮ ಧರ್ಮಗಳ ವಕ್ತಾರರಂತೆ ವರ್ತಿಸತೊಡಗುತ್ತಾರೆ.

"ಪೂರ್ವಪಶ್ಚಿಮದ ಕಡೆಗೆ ನಿಮ್ಮ ಮುಖವನ್ನು ತಿರುಗಿಸುವಲ್ಲಿ ಧರ್ಮಶೀಲತೆ ಇಲ್ಲ. ಆದರೆ ಅಲಾಹನಲ್ಲಿ, ಅಂತಿಮ ದಿವಸದಲ್ಲಿ, ದೇವದೂತರಲ್ಲಿ, ಪ್ರವಾದಿಗಳಲ್ಲಿ ವಿಶ್ವಾಸವಿಡುವವರು ತಮ್ಮ ಧನವನ್ನು ಆತನ ಸಂಪ್ರೀತಿಗಾಗಿ ಬಂಧುಗಳಿಗೆ, ಅನಾಥರಿಗೆ, ದರಿದ್ರರಿಗೆ, ಸಂಚಾರಿಗಳಿಗೆ, ಸಹಾಯಾರ್ಥಿಗಳಿಗೆ ಮತ್ತು ದಾಸ್ಯ ವಿಮೋಚನೆಗೆ (ಗುಲಾಮರನ್ನು ಸ್ವತಂತ್ರಗೊಳಿಸುವುದಕ್ಕೆ) ಕೊಡುವವರು, ನಮಾಜನ್ನು ಸ್ಥಿರಗೊಳಿಸುವವರು, ತಾವು ವಾಗ್ದಾನವಿತ್ತಿದ್ದರೆ ಅದನ್ನು ಪೂರ್ಣಗೊಳಿಸುವವರು, ಕಷ್ಟಕಾರ್ಪಣ್ಯದಲ್ಲಿ ಹಾಗೂ ಸಮರದಲ್ಲಿ ಸಹನೆ ಕಳೆದುಕೊಳ್ಳದವರೇ ಪುಣ್ಯಶೀಲರು. ಇಂಥವರೇ ಸತ್ಯಸಂಧರು ಮತ್ತು ಇವರೇ ದೈವಭಕ್ತರು ಆಗಿರುತ್ತಾರೆ" (2-177) ಎಂದು ಕುರಾನ್ ಸ್ಪಷ್ಟಪಡಿಸಿದೆ. ಕುರಾನಿನ ಆಶಯ ಸ್ವಯಂ ಪರಿಪೂರ್ಣವಾದ ಸಮಾಜವನ್ನು ಸೃಷ್ಟಿಸುವುದೇ ಆಗಿದೆ. ಆ ಸಮಾಜಕ್ಕೆ ಸುಭದ್ರವಾದ ಆರ್ಥಿಕ ಅಡಿಪಾಯ ಹಾಕುವುದರ ಬಗ್ಗೆ ಮಾರ್ಗದರ್ಶನ ನೀಡಿದೆ. ಈ ಗುರಿಯ ಸಾಧನೆಗಾಗಿ ಕುರಾನ್ ಮತ್ತು ಹದಿಸ್ (ಪೈಗಂಬರರ ಹೇಳಿಕೆಗಳು ಮತ್ತು ನಡವಳಿಕೆಗಳ ಸಂಗ್ರಹ) ಪದೆ ಪದೇ ಮುಸ್ಲಿಂ ಸಮುದಾಯವನ್ನು ಎಚ್ಚರಿಸಿವೆ. "ನೀವು ಪರಸ್ಪರ ಅಸೂಯೆಯಿಂದ ನೋಡಬೇಡಿರಿ. ಎರಡೂ ಪಕ್ಷದವರು ಒಂದೊಂದು ವ್ಯಾಪಾರದ ಚರ್ಚೆಯಲ್ಲಿ ಇರುವಾಗ ನೀವು ಮಧ್ಯೆ ಪ್ರವೇಶಿಸಿ, ಎಷ್ಟಕ್ಕೆ ಕೊಳ್ಳುತ್ತೀರೆಂಬುದನ್ನು ಹೇಳಬೇಡಿರಿ. ನೀವು ಪರಸ್ಪರ ಸಹೋದರರಾಗಿ, ಅಲ್ಲಾಹನ ನಿಜವಾದ ಸೇವಕರಾಗಿ" ಎಂದು ಪೈಗಂಬರರು ಮಾರ್ಗದರ್ಶನ ನೀಡಿದ್ದಾರೆ. ಜನರು ಇಂಥ ಮನಸ್ಥಿತಿಯಿಂದ ದೂರವಾದ ಕಾರಣ ಈರುಳ್ಳಿಯಂಥ ತರಕಾರಿ ಬೆಲೆಗಳು ಗಗನಕ್ಕೇರಿ ಎಲ್ಲ ದಾಖಲೆಗಳನ್ನೂ ಮುರಿದಿವೆ. "ನಮಾಜನ್ನು ಸ್ಥಿರಗೊಳಿಸಿರಿ, ಜಕಾತ್ ಕೊಡಿರಿ" ಎಂದು ಕುರಾನ್ ಒಂದೇ ಉಸಿರಿನಲ್ಲಿ ಎರಡು ವಿಚಾರಗಳನ್ನು ಹೇಳಿದೆ.

ಈ ಎರಡೂ ವಿಚಾರಗಳು ಇಸ್ಲಾಂ ಧರ್ಮದ ಎರಡು ಮುಖಗಳು. ನಮಾಜ್ ಮನುಷ್ಯನ ಆಂತರಿಕ ಜಗತ್ತಿಗೆ ಸಂಬಂಧಿಸಿದೆ. ಜಕಾತ್ ಬಾಹ್ಯ ಜಗತ್ತಿಗೆ ಸಂಬಂಧಿಸಿದೆ. ಮನುಷ್ಯ ತನ್ನ ಒಳ ಜಗತ್ತನ್ನು ಸರಿಯಾಗಿ ಇಟ್ಟುಕೊಂಡರೆ ಮಾತ್ರ ಹೊರ ಜಗತ್ತನ್ನು ಸರಿಯಾಗಿ ಇಟ್ಟುಕೊಳ್ಳಲು ಸಾಧ್ಯ. ಆದ್ದರಿಂದ ಇಸ್ಲಾಂನಲ್ಲಿ ಅರ್ಥಶಾಸ್ತ್ರವು ಧರ್ಮದ ಒಂದು ಭಾಗವಾಗಿದೆ. ಮಾನಸಿಕ ಸ್ವಾಸ್ಥ್ಯಕ್ಕಾಗಿ ನಮಾಜ್ ಇದ್ದರೆ, ಸಾಮಾಜಿಕ ಸ್ವಾಸ್ಥ್ಯಕ್ಕಾಗಿ ಜಕಾತ್ ಇದೆ.

"ಭೂಮಿಯಲ್ಲಿ ಸಂಚರಿಸಿ ಜೀವನೋಪಾಯ ಗಳಿಸಲು ಸಾಧ್ಯವಾಗದ ರೀತಿಯಲ್ಲಿ ಅಲ್ಲಾಹನ ಮಾರ್ಗದಲ್ಲಿ ಬಾಧಿತರಾದ ದರಿದ್ರರಿಗಾಗಿ ವೆಚ್ಚ ಮಾಡಿರಿ. ಅವರ ಸ್ವಾಭಿಮಾನದ ಕಾರಣವಾಗಿ ಅಜ್ಞಾನಿ ಅವರನ್ನು ಧನಿಕರೆಂದು
ಗ್ರಹಿಸುತ್ತಾನೆ. ಆದರೆ ಅವರ ಮುಖಲಕ್ಷಣದಿಂದ ನೀವು
ಅವರನ್ನು ಗುರುತಿಸಬಲ್ಲಿರಿ. ಅವರು ಜನರನ್ನು ಬೆನ್ನುಹತ್ತಿ
ಬೇಡುವವರಲ್ಲ, ನೀವೆಷ್ಟು ದಾನ ಮಾಡಿದರೂ ಅದನ್ನು ಕುರಿತು
ಅಲ್ಲಾಹನು ಚೆನ್ನಾಗಿ ಅರಿಯುವವನೇ ಆಗಿರುತ್ತಾನೆ."
(2-23)

ಹೀಗೆ ಕುರಾನ್ ಸಾಮಾಜಿಕ ಅಸಮಾನತೆಯನ್ನು ಹೋಗಲಾಡಿಸಲು ಪದೆ ಪದೆ ಒತ್ತಿ ಹೇಳಿದೆ.

"ಸಲ್ಮೆಯ ಒಂದು ಸವಿನುಡಿ ಹಾಗೂ ಕ್ಷಮೆಯು ಮನ ನೋಯಿಸುವ ದಾನಧರ್ಮಕ್ಕಿಂತ ಉತ್ತಮ ಅಲ್ಲಾಹನು ನಿರಪೇಕ್ಷನೂ ಸಹನಶೀಲನೂ ಆಗಿರುತ್ತಾನೆ." (2-263)

ಮನ ನೋಯಿಸದ ಮತ್ತು ವಿನಯಪೂರ್ವಕವಾದ ದಾನಧರ್ಮವನ್ನು ಕುರಾನ್ ಬಯಸುತ್ತದೆ. ಐಹಿಕ ಅಭ್ಯುದಯದಿಂದ ಮಾತ್ರ ಸುಖಿ ಸಮಾಜ ನಿರ್ಮಾಣವಾಗುವುದಿಲ್ಲ, ಅದಕ್ಕಾಗಿ ಮಾನಸಿಕ ಅಭ್ಯುದಯವೂ ಬೇಕಾಗುತ್ತದೆ. ಈ ಮಾನಸಿಕ ಅಭ್ಯುದಯವು ಮನುಷ್ಯನನ್ನು ಸಾತ್ವಿಕ ಬದುಕಿನ ಕಡೆಗೆ ಒಯ್ಯುತ್ತದೆ.

"ವ್ಯಾಪಾರವನ್ನು ಅಲ್ಲಾಹನು ಧರ್ಮಬದ್ಧಗೊಳಿಸಿದ್ದಾನಲ್ಲದೆ ಬಡ್ಡಿಯನ್ನು ನಿಷೇಧಗೊಳಿಸಿದ್ದಾನೆ."
(2-275)

ಎಂಬುದು ಕುರಾನಿನ ಆದೇಶ. ಬಡ್ಡಿ ಇಲ್ಲದ ಅರ್ಥವ್ಯವಸ್ಥೆ ಮಾತ್ರ ಜಗತ್ತನ್ನು ಬದುಕಿಸಬಲ್ಲುದು. ಬಡ್ಡಿ ಇರುವವರೆಗೆ ನೂರಾರು ಅಮರ್ತ್ಯ ಸೇನರು ಬಂದರೂ ಜನರ ಆರ್ಥಿಕ ಜೀವನದಲ್ಲಿ ಭಾರೀ ಬದಲಾವಣೆಗಳಾಗುವುದಿಲ್ಲ, ಬರಿ ಬಡ್ಡಿಯನ್ನು ನಿಷೇಧಿಸಿದರೂ ಉಪಯೋಗವಿಲ್ಲ, ಅದರ ಜೊತೆ ಸಾತ್ವಿಕ ಜೀವನವೂ ಬೇಕಾಗುತ್ತದೆ. ಆ ಸಾತ್ವಿಕ ಜೀವನದಲ್ಲಿ ಪ್ರಕೃತಿ, ಶರೀರ ಮತ್ತು ಮನಸ್ಸನ್ನು ಕೆಡಿಸುವ ವಸ್ತುಗಳಿಗೆ ಮತ್ತು ಕೃತ್ಯಗಳಿಗೆ ಬಹಿಷ್ಕಾರವಿದೆ. ಹೀಗೆ ವ್ಯಕ್ತಿ ಸಮುದಾಯ ಮತ್ತು ರಾಷ್ಟ್ರಶಕ್ತಿಗಳು ಸೇರಿ ಸುಸಂಸ್ಕೃತ ಮತ್ತು ಸುಜ್ಞಾನದ ಸಮಾಜವನ್ನು ರೂಪಿಸಬೇಕಾಗುತ್ತದೆ. ಸೋವಿಯತ್ ಗಣರಾಜ್ಯವು ಸುಲಿಗೆ ಇಲ್ಲದ ಸಮಾಜದ ಉದಾತ್ತ ಧ್ಯೇಯದಿಂದ ಕೂಡಿದ ಮಾರ್ಕ್ಸ್‌ವಾದದ ಆಧಾರದ ಮೇಲೆ ರೂಪುಗೊಂಡಿತು. ಆದರೆ ಅಲ್ಲಿನ ಜನ ಅಕ್ಟೋಬರ್ ಕ್ರಾಂತಿಯ ಹಿಂದಿನ ದಿನಗಳನ್ನು ಮರೆತರು. ಉಪಭೋಗವಾದದಲ್ಲಿ ಮಾರ್ಕ್ಸ್‌ವಾದವನ್ನು ಮರೆತರು. ಈ ಉಪಭೋಗವಾದ (ಕಂನ್ಸೂಮರಿಸಂ) ಸಮತಾವಾದ(ಕಮ್ಯೂನಿಸಂ)ವನ್ನು ಸೋಲಿಸಿತು. ಝಾರ್ ದೊರೆಗಳ ಕಾಲದಲ್ಲಿ ರಷ್ಯಾದಲ್ಲಿ ಕಡುಬಡವರು, ನಿರಾಶ್ರಿತರು ತುಂಬಿದ್ದರು. ಕ್ರಾಂತಿಯ ನಂತರ ಸಂಯುಕ್ತ ಸೋವಿಯತ್ ಸಮಾಜವಾದಿ ಗಣರಾಜ್ಯ (ಯು.ಎಸ್.ಎಸ್.ಆರ್)ವು ಮಹಾನ್ ನಾಯಕ ಲೆನಿನ್ ಅವರ ನೇತೃತ್ವದಲ್ಲಿ ಅಸ್ತಿತ್ವಕ್ಕೆ ಬಂದಿತು. ಭಾರೀ ಸಾಮಾಜಿಕ ಬದಲಾವಣೆಯಾಗಿ ಬಡವರು ಮತ್ತು ಶ್ರೀಮಂತರು ಒಂದಾಗಿ ವರ್ಗರಹಿತ ಸಮಾಜ ನಿರ್ಮಾಣವಾಯಿತು. ಈ ಹೊಸ ಸಮಾಜದಲ್ಲಿ ಜನರ ಮಧ್ಯದ ಆರ್ಥಿಕ ಸಾಮರ್ಥ್ಯದ ಅಂತರ ಅತ್ಯಂತ ಕಡಿಮೆ ಇತ್ತು, ಬಡ್ಡಿಯ ವ್ಯವಹಾರ ಸಂಪೂರ್ಣವಾಗಿ ನಿಂತುಹೋಗಿತ್ತು, ಬೆಲೆ ಏರಿಕೆಯ ತಾಪತ್ರಯವಿರಲಿಲ್ಲ, ಐಷಾರಾಮಿ ವಸ್ತುಗಳ ಮೇಲೆ ಕಡಿವಾಣ ಹೇರಲಾಗಿತ್ತು, ಕಾರ್ಮಿಕರು ಮೊದಲು ಮಾಡಿ ಪ್ರತಿಯೊಬ್ಬರಿಗೂ ಕೊಳ್ಳುವ ಶಕ್ತಿ ಬಂದಿತ್ತು, ಆದರೆ ಬಂಡವಾಳಶಾಹಿ ಜಗತ್ತು ಉತ್ಪಾದಿಸುವ ಮೋಹಕ ವಸ್ತುಗಳನ್ನು ಸೋವಿಯತ್ ದೇಶ ಹೊಸ ಹೊಸ ವಿನ್ಯಾಸಗಳಲ್ಲಿ ಉತ್ಪಾದಿಸಲಿಲ್ಲ, ಅವೆಲ್ಲ ನಿರುಪಯುಕ್ತವೆಂಬ ಸತ್ಯ ಸೋವಿಯತ್ ದೇಶದ ಪಿತಾಮಹರಿಗೆ, ಮಹಾನ್ ನಾಯಕರಿಗೆ ಹಾಗೂ ಮಾರ್ಕ್ಸ್‌ವಾದಿ ಅರ್ಥಶಾಸ್ತ್ರಜ್ಞರಿಗೆ ಗೊತ್ತಿತ್ತು, ಆದರೆ ಬಹುಪಾಲು ಜನಸಮುದಾಯಕ್ಕೆ ಬಂಡವಾಳಶಾಹಿ ಕ್ರೌರ್ಯದ ಅರಿವಾಗಲಿಲ್ಲ, ಅದರ ಮೋಹಕ ವಸ್ತುಗಳಿಗೆ ಬಲಿಯಾದರು. ಸ್ವೇಚ್ಛಾಚಾರದ ಬದುಕಿನಲ್ಲಿ ಸ್ವಾತಂತ್ರ್ಯವಿದೆ ಎಂದು ಭ್ರಮಿಸಿದ್ದರು. ಸೋವಿಯತ್ ದೇಶಕ್ಕೆ ಬರುವ ಬಂಡವಾಳಶಾಹಿ ದೇಶಗಳ ಪ್ರವಾಸಿಗರಿಂದ ಹಳೆ ಜೀನ್ಸ್ ಪ್ಯಾಂಟ್, ಹಳೆ ಗಾಗಲ್, ಹೊಸ ನಮೂನೆಯ ಸಿಗರೇಟ್ ಪ್ಯಾಕ್, ಹೊಸ ನಮೂನೆಯೆ ಕ್ಯಾಮರಾ, ಲೈಟರ್, ವಿಡಿಯೊ ಕ್ಯಾಮರಾ, ಬೂಟು, ಪರ್ಟುಮ ಮುಂತಾದ ಮನಮೋಹಕ ವಸ್ತುಗಳನ್ನು ಕೊಳ್ಳುತ್ತಿದ್ದರು. ಇಂಥ ಮೋಹಕ ವಸ್ತುಗಳಿಗಾಗಿ ಅನೇಕ ಯುವತಿಯರು ವಿದೇಶಿ ಪ್ರವಾಸಿಗರ ಜೊತೆ ಲೈಂಗಿಕ ಸಂಬಂಧಕ್ಕೂ ಸಿದ್ಧರಾದರು. ಅವರು ಬಯಸಿದ ಎಲ್ಲ ವಸ್ತುಗಳನ್ನು ಸೋವಿಯತ್ ದೇಶ ಉತ್ಪಾದಿಸುತ್ತಿದ್ದರೂ ಅವುಗಳ ಗುಣಮಟ್ಟ ಶ್ರೇಷ್ಠವಾಗಿದ್ದರೂ ಅಲ್ಲಿನ ಜನರಿಗೆ ಆಕರ್ಷಕವಾಗಿ ಕಾಣುತ್ತಿರಲಿಲ್ಲ, ಏಕೆಂದರೆ ಅವುಗಳ ವಿನ್ಯಾಸ ಅವರ ಅಜ್ಜನ ಕಾಲದವು ಆಗಿದ್ದವು. ಬಂಡವಾಳಶಾಹಿ ರಾಷ್ಟ್ರಗಳು ಸುಲಿಗೆಯ ಉದ್ದೇಶದಿಂದ ವಸ್ತುಗಳ ವಿನ್ಯಾಸವನ್ನು ಪದೆ ಪದೇ ಬದಲಾಯಿಸುತ್ತ ಗ್ರಾಹಕರನ್ನು ಆಕರ್ಷಿಸುತ್ತವೆ. ಇಂಥ ಪ್ರಮೇಯ ಸಮತಾವಾದಿ ರಾಷ್ಟ್ರಗಳಿಗೆ ಇರುವುದಿಲ್ಲ, ಆದರೆ ಅಲ್ಲಿನ-ಹೊಸ ಸಮುದಾಯ, ತಮ್ಮ ಪೂರ್ವಜರು ಎಂಥ ಕಷ್ಟಗಳಲ್ಲಿ ಬದುಕಿದ್ದರು, ಎಂಥ ಹೋರಾಟ ಮಾಡಿ ಸಮಾನತೆಯನ್ನು ರೂಪಿಸಿದರು ಎಂಬುದನ್ನು ಮರೆತು, ಬಂಡವಾಳಶಾಹಿ ರಾಷ್ಟ್ರಗಳ ಜನ ಹೇಗೆ ಬದುಕುತ್ತಿದ್ದಾರೆ ಎಂಬುದನ್ನಷ್ಟೇ ನೋಡಿದರು. ಸಮತಾವಾದದ ಸಾತ್ವಿಕ ಜೀವನದ ಪರಿಕಲ್ಪನೆಯ ಬಗ್ಗೆ ಅವರು ತಲೆಕೆಡಿಸಿಕೊಳ್ಳಲಿಲ್ಲ, ಹೀಗಾಗಿ ಹಾಳಾಗಿಹೋದರು. ಸೋವಿಯತ್ ದೇಶದ ಪತನದ ನಂತರ ಅಲ್ಲಿಯ ಜನ ಭಿಕಾರಿಗಳಂತಾಗಿದ್ದಾರೆ. ಉದ್ಯೋಗ, ಶಿಕ್ಷಣ ಮತ್ತು ಆರೋಗ್ಯದ ಹಕ್ಕುಗಳನ್ನು ಅವರು ಕಳೆದುಕೊಂಡಿದ್ದಾರೆ. ಸೋವಿಯತ್ ದೇಶವಿದ್ದಾಗ ಡಾಲರ್ ಮತ್ತು ರೂಬಲ್ ಬೆಲೆ ಸಮಸಮವಾಗಿತ್ತು, ಸೋವಿಯತ್ ವ್ಯವಸ್ಥೆಯ ಪತನದ ನಂತರ ಒಂದು ಡಾಲರ್ ಪಡೆಯಲು ಆರು ಸಾವಿರಕ್ಕಿಂತ ಹೆಚ್ಚು ರೂಬಲ್ ಕೊಡಬೇಕಾಯಿತು! ಹೀಗೆ ಜನರು ಸಾತ್ವಿಕ ಜೀವನವನ್ನು ಮರೆತರೆ ನವಸಮಾಜ ನಿರ್ಮಾಣ ಮಾಡಲು ಸಾಧ್ಯವಿಲ್ಲ, ಅಂತೆಯೆ ಇಸ್ಲಾಂ ಅರ್ಥವ್ಯವಸ್ಥೆಯಲ್ಲಿ ವ್ಯಕ್ತಿ, ಸಮುದಾಯ ಮತ್ತು ಸರ್ಕಾರದ ಜವಾಬ್ದಾರಿಗಳಲ್ಲಿ ಸಮತೋಲನವಿದೆ. ನಮ್ಮ ದೇಶದಲ್ಲಿ ಎಲ್ಲ ದುಶ್ಚಟಗಳಿಗೂ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಪ್ರತ್ಯಕ್ಷ ಮತ್ತು ಪರೋಕ್ಷ ಬೆಂಬಲವಿದೆ. ಮದ್ಯ, ಸಿಗರೇಟು ನಿಲ್ಲಿಸದಿರುವುದು, ಪ್ರವಾಸೋದ್ಯಮ ನೆಪದಲ್ಲಿ ನಡೆಯುವ ಅನೈತಿಕ ವ್ಯವಹಾರಗಳು, ಯುವ ಜನಾಂಗದ ನೈತಿಕ ಅಧಃಪತನಕ್ಕೆ ಕಾರಣವಾಗುತ್ತಿರುವ ಟಿವಿ, ಸಿನಿಮಾಗಳ ಮೇಲೆ ಸರಿಯಾದ ಹತೋಟಿ ಇಲ್ಲದೆ ಇರುವುದು, ಜನರ ಶಿಕ್ಷಣ, ಆರೋಗ್ಯ ಮತ್ತು ಬದುಕುವ ಹಕ್ಕನ್ನು ಖಾಸಗೀಕರಣ, ಉದಾರೀಕರಣ ಮುಂತಾದವುಗಳ ಹೆಸರಿನಲ್ಲಿ ಕಿತ್ತುಕೊಳ್ಳುವುದು, ಸುಲಿಗೆಕೋರರಿಗೆ ಎಲ್ಲ ರೀತಿಯಿಂದ ಸಹಾಯ ಮಾಡುವುದು, ಕಾಳಸಂತೆಕೋರರನ್ನು ರಕ್ಷಿಸುವುದು - ಮುಂತಾದವುಗಳನ್ನು ನಮ್ಮ ಸರ್ಕಾರಗಳು ವ್ಯವಸ್ಥಿತವಾಗಿ ಮಾಡುತ್ತಿವೆ. ಅನೇಕ ರಾಜಕಾರಣಿಗಳು ಮತ್ತು ಅಧಿಕಾರಿಗಳು ಇಂಥ ವ್ಯವಸ್ಥೆಯ ಬೆಂಬಲಿಗರಾಗಿದ್ದಾರೆ. ನೊಬೆಲ್ ಪ್ರಶಸ್ತಿ ವಿಜೇತ ಅಮರ್ತ್ಯ ಸೇನ್ ಅವರ ಕಲ್ಯಾಣ (ವೆಲ್ಫೇರ್) ಅರ್ಥಶಾಸ್ತ್ರ ಮೌಲ್ಯಾಧಾರಿತ ವ್ಯವಸ್ಥೆಯ ಮೇಲೆ ನಿಂತಿದೆ. ಜನರಿಗೆ ದುಡಿಯುವ ಹಕ್ಕು, ಆರೋಗ್ಯ ಮತ್ತು ಶಿಕ್ಷಣ ನೀಡುವಂಥದ್ದಾಗಿದೆ ಎಂಬುದನ್ನು ನಮ್ಮನ್ನು ಆಳುವವರು ಮರೆಯಬಾರದು. ಇಸ್ಲಾಂ ಧರ್ಮದ ಅರ್ಥಶಾಸ್ತ್ರದ ತಿರುಳು ಕೂಡ ಇದೇ ಆಗಿದೆ!

(ಮುಂದುವರಿಯುವುದು) ■

ಅರಮನೆ ಮದುವೆ, ಸೊರಗಿದ ಪ್ರಜಾತಂತ್ರ!





Get the best seats at the Royal wedding. -The finest and most comprehensive coverage of Mysore Royal wedding in Karnataka's largest read daily...!

ಜೂನ್ 28 ರ ಟೈಮ್ಸ್ ಆಫ್ ಇಂಡಿಯಾದ ಬೆಂಗಳೂರು ಆವೃತ್ತಿಯಲ್ಲಿ ಟೈಮ್ಸ್‌ನ ತಂಗಿ ರೂಪವಾದ ಕನ್ನಡದ 'ವಿಜಯ ಕರ್ನಾಟಕ'ದಲ್ಲಿ ಮೈಸೂರು ಮಹಾರಾಜರ ಮದುವೆಯ ವಿಶೇಷ ವರದಿಯ ಕುರಿತ ಕಾಲು ಪುಟದ ಜಾಹೀರಾತು. ರಾಷ್ಟ್ರೀಯ ಇಂಗ್ಲಿಷ್ ದೈನಿಕವೊಂದು ಮೈಸೂರು ಮಹಾರಾಜರ 'ರಾಜಕಲ್ಯಾಣ'ದ ಕುರಿತಂತೆ ತನ್ನ ಕನ್ನಡದ ಅವತರಣಿಕೆಯಂಥ ಮತ್ತೊಂದು ಪತ್ರಿಕೆಯಲ್ಲಿ ಪುಟಗಟ್ಟಲೇ ವರದಿಯನ್ನು ಕಣ್ಣಿಗೆ ಕಟ್ಟುವಂತೆ **Get the best seats at the Royal wedding** ಅಂದರೆ ನೀವೇ ಮದುವೆಯಲ್ಲಿ ಆಸೀನರಾಗಿದ್ದಂತೆ ಭಾವಿಸಿಕೊಂಡು ತನ್ನ ಪತ್ರಿಕೆ ಓದಿ ಎಂದು ವಿಶೇಷ ಜಾಹಿರಾತು ಪ್ರಕಟಿಸುತ್ತದೆ!

ಮುಖ್ಯಮಂತ್ರಿಯೊಬ್ಬರ ಪ್ರಮಾಣವಚನ, ವಿಧಾನಸಭೆಯೊಂದರ ವಿಶೇಷ ಅಧಿವೇಶನ, ಕನ್ನಡ ರಾಜ್ಯೋತ್ಸವ, ಸ್ವಾತಂತ್ರ್ಯ ದಿನಾಚರಣೆ, ಸಾರ್ವತ್ರಿಕ ಚುನಾವಣೆ ಅಥವಾ ಕನ್ನಡಿಗರ ರಾಜ್ಯವ್ಯಾಪಿ ಜನಾಂದೋಲನ- ಇತ್ಯಾದಿ ಪ್ರಜಾತಂತ್ರದ ಯಾವುದೇ ಘಟನಾವಳಿಗಳಿಗಿಲ್ಲದ ಮಹತ್ವ 'ಮೈಸೂರು ಮಹಾರಾಜ'ರ ಮದುವೆಗೆ?

ಅಂದರೆ ಚತುಷ್ಕೋಟಿ ಕನ್ನಡಿಗರ ಭೂತ ಭವಿಷ್ಯತ್ ವರ್ತಮಾನಕ್ಕಿಂತಲೂ 'ರಾಜ'ನ ಮದುವೆಯೇ ರಾಷ್ಟ್ರೀಯ ಸುದ್ದಿಸಂಸ್ಥೆಯೊಂದಕ್ಕೆ ದೊಡ್ಡದಾಗಿ ಹೋಯಿತೆ? ಇನ್ನು ವಿಜಯ ಕರ್ನಾಟಕದ ಜೂನ್ 28ರ ಸಂಚಿಕೆಯನ್ನು ತೆರೆದು ನೋಡಿದರಂತೂ ಬರೋಬ್ಬರಿ ಎರಡು ಪುಟಗಳ 'ಅರಮನೆ ಮದುವೆ'ಯ ವರ್ಣರಂಜಿತ ವಿಶೇಷ ಪುರವಣಿ. ಅದಕ್ಕೆಂದೇ 'ಸೆಂಟರ್ ಪೇಜ್'ನ ಪ್ರಾಶಸ್ತ್ಯ!

ಇದು ಕೇವಲ ಒಂದೆರಡು ಮನಸ್ಥಿತಿಯಾಗಿದ್ದರೆ 'ಹಾಳಾಗಲಿ ಬಿಡಿ' ಎನ್ನಬಹುದಿತ್ತು, ಕನ್ನಡದ ಬಹುತೇಕ ನ್ಯೂಸ್ ಚಾನಲ್ಲುಗಳಿಂದ ಹಿಡಿದು ಎಲ್ಲಾ ದಿನಪತ್ರಿಕೆಗಳದ್ದೂ ಇದೇ ಮನಸ್ಥಿತಿ. ಒಂದು ಚಾನಲ್ಲಂತೂ ದಿನವಿಡೀ 'ರಾಜಕಲ್ಯಾಣ'ದ ಲೈವ್ ಪ್ರಸಾರವನ್ನು ಐತಿಹಾಸಿಕವೆಂಬಂತೆ ಬಿತ್ತರಿಸಿದ್ದೇ ಬಿತ್ತರಿಸಿದ್ದು. ಮತ್ತೊಂದು ಚಾನಲ್ 'ಮೈಸೂರಿನ ರಾಜಮನೆತನ'ದ ಕುರಿತಂತೆ ವಿಶೇಷ ಪ್ಯಾನಲ್ ಡಿಸ್ಕಷನ್ ಏರ್ಪಡಿಸಿದ್ದನ್ನೇ ತನ್ನ ಮಹತ್ಸಾಧನೆಯೆಂಬಂತೆ ಜಾಹಿರಾತು ಕೊಟ್ಟಿತ್ತು. ಯಾವುದನ್ನು ಇದ್ದುದರಲ್ಲಿ ಜನಪರ ದಿನಪತ್ರಿಕೆಯೆಂದು ಭಾವಿಸುತ್ತೇವೋ ಇನ್ಯಾವುದೋ ಚಾನಲ್ಲನ್ನು 'ಪರವಾಗಿಲ್ಲ ಅಷ್ಟಿಷ್ಟು ನ್ಯಾಯವಿದೆ...' ಎಂದುಕೊಂಡಿದ್ದೇವೋ ಅವುಗಳೂ ಕೂಡ 'ರಾಜಕಲ್ಯಾಣ'ದ ಸನ್ನಿಯಿಂದ ಹೊರತಾಗಲಿಲ್ಲವೆಂದರೆ ಏನರ್ಥ?

ಬ್ರಿಟಿಷ್ ಕಾಲದಲ್ಲೋ, ಅದಕ್ಕೂ ಪೂರ್ವದಲ್ಲೋ ರಾಜರ ಮದುವೆಯಾಗಿದ್ದರೆ ಅದಕ್ಕೊಂದು ಮಹತ್ವವಿರುವುದರಲ್ಲಿ ಅರ್ಥವಿತ್ತು, ಏಕೆಂದರೆ ಆಗಿನದ್ದು ರಾಜಾ ಪ್ರತ್ಯಕ್ಷ ದೈವ ಮನಸ್ಥಿತಿ. ಸ್ವಾತಂತ್ರ್ಯ ಸಂಗ್ರಾಮ ನಡೆದು, ದೇಶಕ್ಕೆ ಸ್ವಾತಂತ್ರ್ಯ ಬಂದು, ನಿಜಾಮರು, ಸುಲ್ತಾನರು, ರಾಜರು, ಪಾಳೇಗಾರರೆಲ್ಲ ಗಂಟು ಮೂಟೆ ಕಟ್ಟಿ ಯಾವ ಕಾಲವಾಯ್ತು? ಅಳಿದುಳಿದ ರಾಜಸತ್ತೆಯ ವಿರುದ್ಧ ಜನ ಈ ಕಾಲದಲ್ಲೂ ಅದೆಂಥಾ ಆಕ್ರೋಶವಿಟ್ಟುಕೊಂಡಿರುತ್ತಾರೆಂಬುದಕ್ಕೆ ನೇಪಾಳಕ್ಕಿಂತ ಉದಾಹರಣೆ ಬೇಕೆ?

ಭೂಸಿಯ ಸುಲ್ತಾನ, ಬ್ರಿಟನ್ ರಾಣಿ, ಜಪಾನ್‌ನ ಚಕ್ರವರ್ತಿ, ಥೈಲ್ಯಾಂಡಿನ ದೊರೆ, ಲುಕ್ಸೆಂಬರ್ಗ್‌ನ ಡ್ಯೂಕ್-ಹೀಗೆ ವಿಶ್ವದ ದೊರೆಗಳು, ರಾಣಿಯರೇನಿದ್ದರೂ ಈಗ ಸಂಕೇತಗಳಷ್ಟೆ. ಇದು ಪ್ರಜಾತಂತ್ರದ ನಾಗರಿಕ ಪರ್ವ. ರಾಜಸತ್ತೆಗಳು ಮುಗಿದು ಯಾವ ಕಾಲವಾಯಿತು? ಮೈಸೂರು ಕೂಡ ರಾಜಾಳ್ವಿಕೆಯ ಪಳಿಯುಳಿಕೆಯೇ ಆದರೂ ಅದರ ಗತಲಕ್ಷಣಗಳಿನ್ನೂ ಪೂರ್ತಿ ಅಳಿದಿಲ್ಲ. ರಾಜರ ವಿವಿಧ ಪರಿವಾರಗಳು, ಅವರ ಪಾಳೇಗಾರರ ಅವಶೇಷಗಳು ಹಾಗೇ ಉಳಿದುಕೊಂಡಿವೆ. ಮೈಸೂರು ರಾಯಲ್ ಸಿಟಿ ನಿಜ. ಅದೇನಿದ್ದರೂ ಸಾಂಕೇತಿಕವೇ ಹೊರತು ಮೈಸೂರನ್ನು ಕನ್ನಡಿಗರ ಸಾಂಸ್ಕೃತಿಕ ರಾಜಧಾನಿಯೆಂದು ಇವತ್ತಿಗೂ ಜನ ಮತ್ತು ಸರ್ಕಾರ ಅಧಿಕೃತವಾಗಿ ಮನ್ನಿಸುತ್ತವೆ. ರಾಜಶಾಹಿಯನ್ನು ಕನ್ನಡಿಗರು ಮೀರಿ ಯಾವ ಕಾಲವಾಯಿತು?

ಶ್ರೀಕಂಠದತ್ತರ ನಿಧನಾನಂತರ 'ಪಟ್ಟಕ್ಕೇರಿದ' ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್‌ರನ್ನು ಪ್ರಮೋದಾದೇವಿ ದತ್ತು ಪಡೆದದ್ದು 2015ರ ಫೆಬ್ರವರಿಯಲ್ಲಿ. ಅದಕ್ಕೂ ಮುನ್ನ ಅಮೆರಿಕದಲ್ಲಿದ್ದ ಯದುವೀರ್ ಓದು ಮುಗಿಸಿ ಬೆಂಗಳೂರಿಗೆ ಬಂದಾಗಲೇ ತ್ರಿಷಿಕಾ ಕುಮಾರಿಯ ಜೊತೆ ನಿಶ್ಚಿತಾರ್ಥವಾಗಿತ್ತು. ರಾಜಸ್ಥಾನದ ಡುಂಗಾರ್‌ಪುರ್ ಸಂಸ್ಥಾನದ ವಾರಸುದಾರ ಹರ್ಷವರ್ಧನ್‌ಸಿಂಗ್-ಮಹೇಶ್ರೀಕುಮಾರಿ ದಂಪತಿಗಳ ಮಗಳೇ ತ್ರಿಷಿಕಾ. ರಜಪೂತದ ಯುವರಾಣಿಯೀಗ ಮೈಸೂರಿನ ರಾಣಿ!

ಇಂಥ ರಾಜೇತಿಹಾಸವೇನಿದ್ದರೂ ಅವರ ಕುಟುಂಬದ ಮಟ್ಟಿಗೆ ಹೊರತು ಸರ್ಕಾರದ ವಿಷಯಕ್ಕಲ್ಲ. ಹಾಗೆ ನೋಡಿದರೆ ಯದುವೀರ್-ತ್ರಿಷಿಕಾ ವಿವಾಹವೆಂಬುದು ಮೈಸೂರು ಮಾಜಿ ರಾಜಪರಿವಾರದ ಕೌಟುಂಬಿಕ ವ್ಯವಹಾರವೇ ಹೊರತು ಸರ್ಕಾರಕ್ಕಾಗಲಿ, ಜನತೆಗಾಗಲಿ ಇದರೊಡನೆ ಯಾವುದೇ ಸಂಬಂಧವಿಲ್ಲ. ಬ್ರಿಟಿಷ್ ಭಾರತದಲ್ಲಿ ಮೈಸೂರು ಸಂಸ್ಥಾನಕ್ಕೆ ಆದರದ್ದೇ ಆದ ಗೌರವ-ಪ್ರತಿಷ್ಠೆಗಳಿದ್ದದ್ದು ನಿಜವೇ ಆದರೂ ಅದಕ್ಕೆ ಕಾರಣವಾಗಿದ್ದು ಮೈಸೂರು ರಾಜರುಗಳ ಜನಪರ ಕಾಳಜಿ. ನಾಲ್ವಡಿ ಕೃಷ್ಣರಾಜ ಒಡೆಯರ್‌ರಿಂದ ಮೊದಲಾಗಿ ಕೊನೆಯ ದೊರೆ ಜಯಚಾಮರಾಜೇಂದ್ರ ಒಡೆಯರ್‌ವರೆವಿಗೂ ಮೈಸೂರೆಂದರೆ ಭಾರತದ ಆಕ್ಸ್‌ಫರ್ಡ್, ಕೇಂಬ್ರಿಡ್ಜ್ ಎಂಬಂತೆ ಭಾವಿಸಲ್ಪಡುವ ಕಾಲವೂ ಇತ್ತು. ಬಹುಶಃ ಅದು ಮೈಸೂರರಸರಿಗೆ ಬ್ರಿಟಿಷರು ನೀಡುತ್ತಿದ್ದ ಮನ್ನಣೆಯ ಕಾರಣಕ್ಕೂ ಇರಬೇಕು!

ಆದರೆ ಯದುವೀರ್-ತ್ರಿಷಿಕಾ ವಿವಾಹ ಮೈಸೂರು ದಸರೆಯಂತಲ್ಲವಲ್ಲ. ಕೇಂದ್ರ ಮಂತ್ರಿ ಸದಾನಂದಗೌಡ, ಅನಂತಕುಮಾರ್, ರಾಜ್ಯ ಬಿಜೆಪಿ ಅಧ್ಯಕ್ಷ ಯಡಿಯೂರಪ್ಪ ಕಾಂಗ್ರೆಸ್ ನಾಯಕ ಖರ್ಗೆ ಮುಂತಾದವರೆಲ್ಲ ಸಪತ್ನಿ ಸಮೇತರಾಗಿ 'ರಾಜ'ನ ಪಾದದಡಿ ಪೊಡಮಟ್ಟಿದ್ದೇ ಪ್ರಜಾತಂತ್ರದ ಅಣಕದಂತಿತ್ತು. 'ರಾಜ ರಾಣಿ' ಉರುಟಣೆ ಉಯ್ಯಾಲೆಯಲ್ಲಿ ಆಸೀನರಾಗಿದ್ದರೆ ನಮ್ಮ ಪ್ರಜಾ ಪ್ರತಿನಿಧಿಗಳು ಅವರ ಹತ್ತಿರಕ್ಕೂ ಬರುವಂತಿಲ್ಲ, ದೂರದಿಂದಲೇ ನಿಂ[illegible] ಹೂಗುಚ್ಛ ನೀಡಬೇಕು. 'ರಾಜ'ನಿಗೆ ಹಸ್ತಲಾಘ[illegible] ನೀಡುವುದೂ ನಿಷಿದ್ಧ. ಏಕೆಂದರೆ 'ರಾಜ ಪ್ರತ್ಯಕ್ಷ ದೈ[illegible] ಕೇಂದ್ರ ಮಂತ್ರಿ ಆಂಧ್ರದ ಅಶೋಕ್ ಗಜಪತಿರಾಜು ತ್ರಿಷಿ[illegible] ಕುಮಾರಿಗೆ ಸಂಬಂಧಿಯಂತೆ. ಮಾಜಿ ಕೇಂದ್ರ ಮಂ[illegible] ಕಲ್ಮಾಡಿ, ರಾಜ್ಯ ಸಚಿವರಾದ ಆರ್.ವಿ. ದೇಶಪಾಂಡೆ, ಕೆ.[illegible] ಜಾರ್ಜ್, ಹೆಚ್.ಸಿ. ಮಹದೇವಪ್ಪ ಸಿ.ಕೆ. ಜಾಫರ್ ಷರೀ[illegible] ಅಂಬರೀಶ್, ಡಿ.ಬಿ. ಚಂದ್ರೇಗೌಡ ಮುಂತಾದವರೆಲ್ಲ ತ[illegible] ಪ್ರಜಾನಿಷ್ಠೆಯನ್ನೂ ಮೀರಿದ ರಾಜನಿಷ್ಠೆಯನ್ನು ಮೆರೆಯ[illegible] ಅಗತ್ಯವಿತ್ತೆ?

ಜನತಂತ್ರವನ್ನೇ ಅಣಕಿಸಿದಂತೆ ನಡೆದ ಜನಪ್ರತಿನಿಧಿ[illegible] ಇಷ್ಟೆಲ್ಲ ಫ್ಯೂಡಲ್ ಮನೋದಾಸ್ಯದ ಮೇಲೆ ಬರೆ ಎಳೆದ[illegible] ಮಾಡಿದ್ದು ಮುಖ್ಯಮಂತ್ರಿ ಸಿದ್ದು. ಕೇಂದ್ರ ಮಂತ್ರಿಗಳ[illegible] ಅನಂತ್, ಸದಾನಂದ ಗೌಡರೇ 'ರಾಜಪೀಠ'ದಿಂದ ದೂ[illegible] ನಿಂತು 'ರಾಜ'ನಿಗೆ ಶಿರಬಾಗಿ ತಮ್ಮ ರಾಜಭಕ್ತಿಯ[illegible] ಮೆರೆಯುತ್ತಿದ್ದರೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅರಮನೆ[illegible] ಯಾವ ಪ್ರೊಟೋಕಾಲ್‌ಗಳನ್ನು ಲೆಕ್ಕಿಸದೇ ನೇರವ[illegible] ರಾಜಪೀಠವನ್ನೇ ಹತ್ತಿಬಿಟ್ಟರು.

ಸಾಕ್ಷಾತ್ ಮುಖ್ಯಮಂತ್ರಿಯೇ ರಾಜಠೀವಿಯಿಂ[illegible] ಬಂದದ್ದು ನೋಡಿ ದಂಗಾದ ಯದುವೀರ ಮತ್ತು ತ್ರಿಷಿ[illegible] ಬೇರೆ ಯಾರಿಗೂ ಎದ್ದು ನಿಂತು ಗೌರವಿಸದವರು ತಾ[illegible] ಶಿರಬಾಗಿ ಪೀಠದಿಂದಿಳಿದು ಬಂದು ಮುಖ್ಯಮಂತ್ರಿಯ[illegible] ಗೌರವಿಸಿದ್ದು ನಿಜಕ್ಕೂ ಪ್ರಜಾಸತ್ತೆಗೆ ಸಿಕ್ಕ ರಾ[illegible] ಮನ್ನಣೆಯಂತಿತ್ತು!

ಆ ಮಟ್ಟಿಗಾದರೂ ಸಿಎಂ ಸಿದ್ದು ತಾನೊಬ್ಬ ಜನ[illegible] ಪ್ರತಿನಿಧಿಯೆಂಬುದನ್ನೂ 'ರಾಜ' ಏನಿದ್ದರೂ ಸರ್ಕಾರ[illegible] ಅಧೀನ ಮಾತ್ರ ಎಂಬುದನ್ನು ಮೆಟ್ಟಿ ಹೇಳಿದರಲ್ಲ!

ವಿಷಾದದ ಸಂಗತಿಯೆಂದರೆ ಮುಖ್ಯಮಂತ್ರಿಯ [illegible] ದಿಟ್ಟತನವನ್ನಾಗಲಿ, 'ರಾಜ-ರಾಣಿ' ಮುಖ್ಯಮಂತ್ರಿಗೆ ನೀಡಿ[illegible] ಈ ಗೌರವವನ್ನಾಗಲಿ ಅಥವಾ ಬೇರೆಲ್ಲ ಮಂತ್ರಿ[illegible] ನಾಯಕರುಗಳು ಪೊಡಮಟ್ಟಿದ ಜನತಂತ್ರದ ಅಣಕವನ್ನಾಗ[illegible] ಯಾವ ಪತ್ರಿಕೆ ಮೀಡಿಯಾಗಳೂ ಗಮನಿಸಲೇ ಇ[illegible] ಏಕೆಂದರೆ ಮೀಡಿಯಾಗಳೇ 'ರಾಜ'ನ ಪಾದಪೂಜೆಗೆ ಸಜ್ಜಾ[illegible] ನಿಂತಿದ್ದವಲ್ಲ!

ಕನ್ನಡಿಗರ ಸುದೀರ್ಘ ಇತಿಹಾಸದಿಂದ ಮೈಸೂ[illegible] ರಾಜರನ್ನಾಗಲಿ ಬೇರೆ ಯಾರೇ ದೊರೆ, ಸಾಮಂತರ[illegible] ಮಠಮಾನ್ಯ, ದೇವಾಲಯ, ಪಾಳೇಗಾರರನ್ನಾಗ[illegible] ಹೊರತುಪಡಿಸಲಾಗದು ನಿಜ. ಹಾಗೆಂದ ಮಾತ್ರ[illegible] ಅವರ್‍ಯಾರೂ ನೆಲದ ಕಾನೂನು, ಸಂವಿಧಾನ, ಜನತಂತ್ರಕ್ಕಿಂ[illegible] ದೊಡ್ಡವರಲ್ಲ. ಅದರಲ್ಲೂ ಮೈಸೂರಿಗೆ ವಿಶ್ವವ್ಯಾ[illegible] ಮನ್ನಣೆಯಿರಬಹುದು. ಮೈಸೂರು ಸೋಪು, ಮೈಸೂರ[illegible] ಲ್ಯಾಂಪ್ಸ್, ಮೈಸೂರು ವಿವಿ, ಮೈಸೂರು ರೇಷ್ಮೆ, ಮೈಸೂರ[illegible] ಗಂಧ ಹಾಗೆಯೇ ಮೈಸೂರು ದಸರೆ, ಚಾಮುಂಡೇಶ್ವ[illegible] ತಾಯಿ, ಕಾವೇರಿ, ಕನ್ನಂಬಾಡಿ, ವಿಶ್ವೇಶ್ವರಯ್ಯ ಇತ್ಯಾದಿಗಳೆ[illegible] ಕನ್ನಡಿಗರ ಹೆಮ್ಮೆಯ ಲಾಂಛನಗಳೇ.

ಬ್ರಿಟನ್ನಿನ ಜನಕ್ಕೆ ಇವತ್ತಿಗೂ ಬಂಕಿಂಗ್‌ಹ್ಯಾಂ ಅರಮ[illegible] ಮತ್ತು ವಿಕ್ಟೋರಿಯಾ ರಾಣಿ ಅವರ ಸಂಸ್ಕೃತಿಯ[illegible] ಲಾಂಛನಗಳಾಗೇ ಬಳಕೆಯಾದಂತೆ ಕನ್ನಡಿಗರಿಗೆ ಮೈಸೂರ[illegible] ರಾಜನೋ ಅರಮನೆಯೋ ಸಾಂಸ್ಕೃತಿಕ ಕುರುಹಾಗಿ[illegible] ಬಹುದು. ಹಾಗಂತ ಅದೇ ಸರ್ವಸ್ವವಾಗಬಾರದಲ್ಲವೇ[illegible] ಸಂಗೊಳ್ಳಿ ರಾಯಣ್ಣನ ಬಲಿದಾನ, ಟಿಪ್ಪೂ ಸುಲ್ತಾನ[illegible] ಮಹಾತ್ಯಾಗ, ನಾಡಿಗಾಗಿ ಪ್ರಾಣತೆತ್ತ ಅಸಂಖ್ಯಾತ ಹುತಾತ್ಮರ[illegible] ಬಸವಾದಿ ಶರಣರ ತ್ಯಾಗದ ಫಲವಾಗಿ ರೂಪುಗೊಂ[illegible] ನಾಗರಿಕತೆಯೊಂದನ್ನು ರಾಜಭೋಗದ ಗತವೈಭವ[illegible] ಅಣಕಿಸುವಂತಾದರೆ ದುರಂತವಲ್ಲದೆ ಮತ್ತೇನು?

ಮೀಡಿಯಾಗಳ ಮನೋದಾಸ್ಯಕ್ಕೆ ಮದ್ದೆಲ್ಲಿಯದು?

ಸೋಮನಾಥ



ಟಿಪ್ಪೂ ಅವಸಾನದ ಅವಶೇಷದಂತೆ ಮಿಂಚಿದ್ದು ಬ್ರಿಟಿಷ್ ಅಧಿಕಾರಿ



ಮೈಸೂರು ರಾಜರ ಬ್ರಿಟಿಷ್ ನಿಷ್ಠೆಯ ಅವಶೇಷವೋ ಎಂಬಂತೆ ಯದುವೀರ್-ತ್ರಿಷಿಕಾ ಮದುವೆಯಲ್ಲಿ ವಿಶೇಷ ಗಮನ ಸೆಳೆದದ್ದು ಬ್ರಿಟಿಷ್ ಡೆಪ್ಯೂಟಿ ಕಮೀಷನರ್ ಡೊಮೆನಿಕ್ ಅಲಿಸ್ಟರ್. ಕರ್ನಾಟಕ ಸರ್ಕಾರದ ಮುಖ್ಯಮಂತ್ರಿಯ ಯಾವುದೇ ಸಮಾರಂಭಕ್ಕೂ ನೀಡದ ಪ್ರಾಶಸ್ತ್ಯವನ್ನು ಬೆಂಗಳೂರಿನ ಬ್ರಿಟಿಷ್ ಹೈಕಮೀಷನ್ 'ಮೈಸೂರು ರಾಜ'ನ ಮದುವೆಗೆ ನೀಡಿದ್ದು ಸುಮ್ಮನೇನಲ್ಲ. ಅದು ಬ್ರಿಟಿಷರ ಇತಿಹಾಸ ಪ್ರಜ್ಞೆ. ಬ್ರಿಟಿಷ್ ಆಳ್ವಿಕೆಯಲ್ಲಿ ದಕ್ಷಿಣ ಭಾರತದ ಮಟ್ಟಿಗೆ ಮೊಟ್ಟಮೊದಲ ಸಹಾಯಕ ಸೈನ್ಯ ಪದ್ಧತಿಯನ್ನು ಜಾರಿಗೆ ತಂದಿದ್ದೇ ಮೈಸೂರು ರಾಜರು. ಅಂದರೆ ಬ್ರಿಟಿಷ್ ಸೈನ್ಯವನ್ನು ನಾವು ಕರೆತಂದು ಸಾಕಿಕೊಂಡಂತೆ. ಮೇಲುನೋಟಕ್ಕೆ ಹೈದರಾಲಿ, ಟಿಪ್ಪೂ ಸುಲ್ತಾನರ ಆಧಿಪತ್ಯ ಆಕ್ರಮಣದ ವಿರುದ್ಧ ಇದು ಮೈಸೂರು ರಾಜರ ರಕ್ಷಣಾ ತಂತ್ರವಾಗಿ ಕಂಡರೂ ಕಾಲಕ್ರಮೇಣ ಇದೇ ಟಿಪ್ಪೂ ಅವಸಾನಕ್ಕೆ ಕಾರಣವಾಯಿತು ಮತ್ತು ದಕ್ಷಿಣ ಭಾರತದ ಬಹುತೇಕ ರಾಜ್ಯ, ಪಾಳೇಪಟ್ಟುಗಳೆಲ್ಲ ಶಾಶ್ವತವಾಗಿ ಬ್ರಿಟಿಷರ ಆಧಿಪತ್ಯಕ್ಕೊಳಪಟ್ಟವು. ಮೈಸೂರು ಅರಮನೆ, ಸಿಂಹಾಸನದ ಉಳಿವಿಗಾಗಿ ಇಡೀ ದಕ್ಷಿಣ ಭಾರತವೇ ಬ್ರಿಟಿಷ್ ದಾಸ್ಯಕ್ಕೀಡಾದ ದುರಂತದ ಅವಶೇಷವೋ ಏನೋ ಬ್ರಿಟಿಷ್ ಹೈಕಮೀಷನರ್ ಡೊಮೆನಿಕ್ ಆಲಿಸ್ಟರ್ 'ಮೈಸೂರು ರಾಜ'ನ ಮದುವೆಗೆ ವಿಕ್ಟೋರಿಯಾ ರಾಣಿಯ ಪ್ರತಿನಿಧಿಯಾಗಿ ಆಗಮಿಸಿದಂತಿತ್ತು!




ಗಪ್ಪಾದ ಅಂಬಿ ಬೆಪ್ಪಾದ ಪ್ರಸಾದ್

ಮಾಜಿ ಮುಖ್ಯಮಂತ್ರಿ ಎಸ್.ಎಂ. ಕೃಷ್ಣರನ್ನು ಭೇಟಿ ...ಿ 'ನಮ್ಮ' ನಿಲುವುಗಳನ್ನು ತಿಳಿಸಿದ್ದೇನೆ ಅಷ್ಟೇ. ಕೃಷ್ಣ ...ಹಿರಿಯ ನಾಯಕರು. ಅವರು ಏಕಾಏಕಿ ತಮ್ಮ ...ಪ್ರಾಯ ತಿಳಿಸಬೇಕು ಅಂತ ನಿರೀಕ್ಷಿಸೋದೇ ತಪ್ಪು. ...ಖ್ಯಮಂತ್ರಿ ಬದಲಾಗಬೇಕೆಂಬ ನನ್ನ ನಿಲುವು ಅಚಲ. ...ಯಕತ್ವ ಬದಲಾವಣೆ ಕುರಿತಂತೆ ದಿಗ್ವಿಜಯ್ ಸಿಂಗ್‌ಗೂ ...ನವರಿಕೆ ಮಾಡ್ತೀನಿ. ಇಷ್ಟೆಲ್ಲ ಆದ ಮೇಲೂ ...ರಾಮಯ್ಯನ ಜೊತೆ ಮಾತುಕತೆ ಮಾಡ್ಬೇಕಾ? ಆತನ ...ೆ ಮಾತುಕತೆ ಇನ್ನು ಮುಗಿದ ಅಧ್ಯಾಯ....

...ಜೂನ್ 28ರಂದು ಬೆಂಗಳೂರಿನಲ್ಲಿ ಪತ್ರಿಕೆಯೊಂದರ ...ದಿಗಾರರು ಕೆಣಕಿದ ರೀತಿಗಿದು ಮಾಜಿ ಕಂದಾಯ ...ತ್ರಿ ಶ್ರೀನಿವಾಸ್ ಪ್ರಸಾದ್ ಸಾಹೇಬರ ಆಕ್ರೋಶ. ...ರ ಮಾತಿನ ಧಾಟಿಯನ್ನೇ ಕೆದಕುತ್ತಾ ಹೋದರೆ ...ಶೆಯಲ್ಲದೆ ಬೇರೆ ಏನಾದರೂ ಕಾಣಲು ಸಾಧ್ಯವೆ? ...ಜಯ್ ಸಿಂಗ್‌ಗೆ ಮನದಟ್ಟು ಮಾಡುವುದು ...ದರೇನು? ಶ್ರೀನಿವಾಸ್ ಪ್ರಸಾದ್ ಹೇಳಿದಾಕ್ಷಣ ...ಜಯ್ ಸಿಂಗ್ ಸಿದ್ದುವನ್ನು ಮುಖ್ಯಮಂತ್ರಿ ಪದವಿಯಿಂದ ...ಸಲು ಸಾಧ್ಯವೆ? ಮಾಜಿ ಮು.ಮಂ. ಎಸ್.ಎಂ. ಕೃಷ್ಣರನ್ನು ...ಟಿಯಾದ ಮಾತ್ರಕ್ಕೆ ಕಾಂಗ್ರೆಸ್ ಶಾಸಕರೆಲ್ಲ ರಾತ್ರೋರಾತ್ರಿ ...ಮತೀಯರಾಗಿ ಬಂಡೇಳುತ್ತಾರಾ? ಮೂರು ವರ್ಷ ...ಷ್ಠಿತ ಖಾತೆಯ ಮಂತ್ರಿಯಾಗಿದ್ದು, ಮುಖ್ಯಮಂತ್ರಿಯ ...ಗ್ಗುಲಲ್ಲೇ ಗೆದ್ದು ಬಂದೂ ಶ್ರೀನಿವಾಸ್ ಪ್ರಸಾದ್ ...ಚ್ಚಿಗೆದ್ದಿರುವುದು ಕೇವಲ ಮಂತ್ರಿಗಿರಿಯಿಂದ ಕೈಬಿಟ್ಟ ...ಮಾತ್ರ ಕಾರಣಕ್ಕೇ....?

ಶ್ರೀನಿವಾಸ್ ಪ್ರಸಾದ್‌ರ ಸಿಟ್ಟಿನ ಮೂಲವಿರುವುದು ...ಂತ್ರಿಗಿರಿಯಿಂದ ಕೈಬಿಟ್ಟಿದ್ದಕ್ಕಲ್ಲ. ಹಕೀಕತ್ತೇ ಬೇರೆಯಿದೆ.





ಕಾರಣದಿಂದಾಗಿ ತಾನು ಮಂತ್ರಿಯಾಗಿ ಮುಂದುವರಿಯುವುದು ಸಾಧ್ಯವೇ ಇರಲಿಲ್ಲವೆಂಬುದನ್ನು ಅರ್ಥಮಾಡಿಕೊಳ್ಳದಷ್ಟು ದಡ್ಡರೇನಲ್ಲ ಶ್ರೀನಿವಾಸ್ ಪ್ರಸಾದ್. ಪುನರ್‌ರಚನೆಗೂ ಹಿಂದಿನ ಸಂಪುಟ ಸಭೆಯಲ್ಲಿ ಸಿಎಂ ಸ್ಪಷ್ಟವಾಗೇ 'ಎಲ್ಲರೂ ಕೋಆಪರೇಟ್ ಮಾಡಬೇಕು' ಅಂದಿದ್ದರು. ಅಂಬಿ, ಪ್ರಸಾದ್ ಸೇರಿದಂತೆ ಎಲ್ಲ ಮಂತ್ರಿಗಳೂ ಅದಕ್ಕೆ ತಲೆದೂಗಿದ್ದರು. ಯಾವತ್ತು ತನ್ನ ವರ್ಗಾವರ್ಗಿ ಪಟ್ಟಿಯನ್ನು ಸಿದ್ದು ತಡೆಹಿಡಿದದ್ದು ಗೊತ್ತಾಯಿತೋ ಪ್ರಸಾದ್ ಪಿತ್ಥ ನೆತ್ತಿಗೇರಿತು.

ಮೊದಮೊದಲು ವೀರಾವೇಶದಲ್ಲೇ ಸಿದ್ದು ವಿರುದ್ಧ ತೊಡೆ ತಟ್ಟಿದ ಪ್ರಸಾದ್‌ಗೆ ಅಂಬಿ ತನ್ನ ಹೆಗಲಿಗೆ ಹೆಗಲು ಕೊಟ್ಟು ನಿಲ್ಲುತ್ತಾರೆಂದೇ ನಿರೀಕ್ಷೆಯಿತ್ತು, ತನ್ನಂತೆ ಗಾದಿವಂಚಿತ ಖಮರುಲ್, ಚಿಂಚನಸೂರ್, ಜಾರಕಿಹೊಳಿ, ಲೇಔಟ್ ಕೃಷ್ಣಪ್ಪ ಸೇರಿದಂತೆ ಸೋಮಶೇಖರ್ ಮುನಿರತ್ನ ನೇತೃತ್ವದ ಸಮಾನ ಮನಸ್ಕ ಶಾಸಕರ ತಂಡವೂ ತನ್ನೊಂದಿಗೆ ಕೈಜೋಡಿಸಲಿದೆಯೆಂಬ ಹುಮ್ಮಸ್ಸಿತ್ತು, ಅದೇ ಹುಮ್ಮಸ್ಸಿನಲ್ಲಿ ಕೃಷ್ಣರನ್ನೂ ಕಂಡುಬಂದರು. ಕೃಷ್ಣ ಹೆಸರಿಗೆ ತಕ್ಕಂತೆ ಕೃಷ್ಣ ಗಾರುಡಿಗಾರ ತಾನೆ? ಯಾವುದೇ ಕಾರಣಕ್ಕೂ ಅಂಬಿಯನ್ನು ಜೊತೆಗಿಟ್ಟುಕೊಂಡರೆ ಕೃಷ್ಣ ಮೂಸಿಯೂ ನೋಡಲಾರ ಎಂಬ ವಾಸ್ತವ ಅರಿವಾಗುವ ಹೊತ್ತಿಗೆ ಪ್ರಸಾದ್ ಪಿತ್ಥ ಮತ್ತಷ್ಟು ಕೆರಳಿತ್ತು.

ಅದಕ್ಕೆ ಕಾರಣವಾಗಿದ್ದು ಸಿದ್ದು ಪರ ಬ್ಯಾಟಿಂಗಿಗಿಳಿದ ದಿಗ್ವಿಜಯ್ ಸಿಂಗ್. ಮಾಮೂಲಿನಂತೆ ಬೆಂಗಳೂರಿಗೆ 'ವಿಸಿಟ್' ಹಾಕಿದ ದಿಗ್ವಿಜಯ್ ಖರ್ಗೆ, ಆಸ್ಕರ್, ಮೊಯ್ಲಿ ಮತ್ತು ಕೃಷ್ಣರ ಜೊತೆ ಅದೇನು ವ್ಯವಹಾರ ಕುದುರಿಸಿದರೋ, ಸಿದ್ದು ವಿರುದ್ಧ ಯಾರೇನೇ ದೂರು ತಂದರೂ ಕೃಷ್ಣ ಮಾತ್ರ ಹೌದು ಅಂದರೆ ಹೌದು, ಅಲ್ಲಾ ಎಂದರೆ ಅಲ್ಲಾ ಎಂಬಂತೆ ತಲೆಕುಣಿಸಿ ನಗುತ್ತಿದ್ದರು!

ಇತ್ತ ಅಂಬಿಯ ಪಜೀತಿಯೂ ರಂಪಾಟಕ್ಕಿಟ್ಟು ಕೊಂಡಿತ್ತು. ಸಂಪುಟ ಪುನರ್‌ರಚನೆಗು ಮುನ್ನ ಐನೂರು ಕೋಟಿಗೂ ಅಧಿಕ ಮೊತ್ತದ ಟೆಂಡರ್ ಕರೆದು ಅದರ ಕಮೀಶನ್ ಬಾಬತ್ತಿನ್ನೂ ಪೂರ್ತಿಯಾಗಿ ಅಮರಾವತಿ ಚಂದ್ರಶೇಖರನ ಕೈಸೇರಿರಲಿಲ್ಲ, ಚೂರು ಯಡವಟ್ಟಾದರೂ ಟೆಂಡರ್ ಏನಾದರೂ ರದ್ದಾಯಿತೆಂದರೆ ಕೊಟ್ಟ ಕಮೀಶನ್ನಿಗಾಗಿ ಕಂಟ್ರಾಕ್ಟರುಗಳು ಶಿಷ್ಯ ಅಮರಾವತಿ ಚಂದ್ರನನ್ನು ಅಟ್ಟಾಡಿಸಿ ಬಡಿಯುವುದಂತೂ ಗ್ಯಾರಂಟಿ. ಪೊಲೀಸ್ ಅಧಿಕಾರಿಗಳಿಗೆಲ್ಲ ಸೈಟು ಕೊಡುತ್ತೇನೆಂದು ಅಮರಾವತಿ ಚಂದ್ರ ವಂಚಿಸಿದ ಕೇಸೇನಾದರೂ ಎದ್ದು ನಿಂತಿತೆಂದರೆ ಶಿಷ್ಯನನ್ನು ಜೈಲಿಂದ ಬಿಡಿಸಲು ತಾನು ಪಡಲು ಬಾಧೆ ಬೇಳಬೇಕೆಂಬ ಭೀತಿ ಅಂಬಿಯನ್ನು ಕಾಡತೊಡಗಿತ್ತು, ...ದಕ್ಕಿದಂತೆ ಮುಗುಮ್ಮಾದ ಅಂಬಿ ಶ್ರೀನಿವಾಸ್

ಪ್ರಸಾದ್‌ರ ಫೋನ್ ಕರೆಗಳನ್ನೇ ಅವಾಯ್ಡ್ ಮಾಡಲಾರಂಭಿಸಿದ್ದು ಜೂನ್ 26ಕ್ಕೆ. ಅತ್ತ ಕೃಷ್ಣರಿಂದಲೂ ಉತ್ತೇಜಕ ಪ್ರತಿಕ್ರಿಯೆಯಿಲ್ಲ, ಇತ್ತ ಅಂಬಿಯಿಂದಲೂ ನಿರೀಕ್ಷಿತ ಕುಮ್ಮಕ್ಕಿಲ್ಲ, ಮತ್ತೊಂದೆಡೆ ಖಮರುಲ್ ಮತ್ತು ಚಿಂಚನಸೂರ್‌ರ ರೋಷಾವೇಶಗಳ್ಯಾವುದೂ ಹಿಂದಿನಷ್ಟು ತೀವ್ರವಾಗಿಲ್ಲ. ಇದಕ್ಕೆ ಪೂರಕವೋ ಎಂಬಂತೆ ಮೊದಮೊದಲು ಶ್ರೀನಿವಾಸ್ ಪ್ರಸಾದ್‌ರೇ ನಮ್ಮ ನಾಯಕರು ಎಂದಿದ್ದ ಸತೀಶ್ ಜಾರಕಿಹೊಳಿ ಶ್ರೀನಿವಾಸ್ ಪ್ರಸಾದ್ ಮನೆಯಿಂದ ಹೊರಬಿದ್ದಿದ್ದೇ ಐದು ವರ್ಷಗಳ ಪೂರ್ತಿ ಸಿದ್ದರಾಮಯ್ಯನವರೇ ಮುಖ್ಯಮಂತ್ರಿ ಎಂದುಬಿಟ್ಟರು. ಇದು ಶ್ರೀನಿವಾಸ್ ಪ್ರಸಾದ್‌ಗಾದ ಮತ್ತೊಂದು ಆಘಾತ. ಹಾಳಾಗಲಿ ಖಮರುಲ್, ಚಿಂಚನಸೂರ್‌ನ್ನಾದರೂ ಕಟ್ಟಿಕೊಂಡು ಎಸ್.ಟಿ. ಸೋಮಶೇಖರ್, ಮುನಿರತ್ನರ ಅತೃಪ್ತ ಶಾಸಕರ ಪಡೆಯನ್ನು ಬಲಗೊಳಿಸಿ ಸಿದ್ದು ವಿರುದ್ಧ ದಾಳಿ ಮುಂದುವರೆಸಿದರಾಯ್ತು ಎಂಬ ಆವೇಶದಲ್ಲೇ ಇದ್ದರು.

ಆದರೆ ವಾರದಹೊತ್ತಿಗೆ ಖಮರುಲ್ ಪಟಾಕಿಯೂ ಠುಸ್ಸಾಗಿತ್ತು, ಉರಿಯುತ್ತಿದ್ದ ಚಿಂಚನಸೂರ್‌ಗೆ ದಿಗ್ವಿಜಯ್ ಸಿಂಗ್ ಫೋನಾಯಿಸಿ ಎಂಥಾ ಧಮಕಿಯಿಟ್ಟರೆಂದರೆ ಅವರ ಮಾತಿಗೇ ಜೈಲಿನ ದರ್ಶನವಾದಂತೆ ಬೆಚ್ಚಿಬಿದ್ದ ಚಿಂಚನಸೂರ್ ಮರುದಿನವೇ ಗಪ್‌ಚುಪ್ಪಾಗಿಬಿಟ್ಟರು. ಅತ್ತ ಖಮರುಲ್‌ಗೂ ಖರ್ಗೆ ಬೇರೆಯದೇ ಮರಮ್ಮತ್ತು ಪ್ರಯೋಗಿಸಿದ್ದರು. ಇದು ಮಂತ್ರಿಗಳ ಪಾಡಾದರೆ ಭಿನ್ನಮತೀಯರ ಸೋಕಾಲ್ಡ್ ನಾಯಕ ಎಸ್.ಟಿ. ಸೋಮಶೇಖರ್‌ಗೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಬೋರ್ಡ್ ಮೆಂಬರ್‌ಗಿರಿಯ ಭರ್ಜರಿ ಬಳುವಳಿಯೇ ಕಾದಿತ್ತು!

ಶುರುವಿನಲ್ಲಿ ಅಸಮರ್ಥರನ್ನು ಇಳಿಸಿ ಹೊಸಬರನ್ನು ಮಂತ್ರಿ ಮಾಡಿ ಎಂಬುದು ಎಸ್.ಟಿ. ಸೋಮಶೇಖರ್ ಗುಂಪಿನ ಬೇಡಿಕೆ. ಯಾವುದೋ ಕಾಲಕ್ಕೆ ಸೋಮಶೇಖರ್ ಸಮಾನಮನಸ್ಕರ ಒಕ್ಕೂಟ ಎಂಬ ಸಂಘಟನೆ ಕಟ್ಟಿಕೊಂಡು ಹಿರಿಯರ ಸನ್ಮಾನ, ರಾಜ್ಯೋತ್ಸವ ಇತ್ಯಾದಿ ಸಮಾರಂಭಗಳನ್ನೇರ್ಪಡಿಸುತ್ತಿದ್ದರಂತೆ.

ಈಗ ಸಿದ್ದು ವಿರುದ್ಧ ಅತೃಪ್ತ ಶಾಸಕರನ್ನು ಕಲೆಹಾಕಿ ಅದಕ್ಕೂ ಸಮಾನ ಮನಸ್ಕ ಶಾಸಕರ ವೇದಿಕೆ ಎಂಬ ಹೆಸರಿಟ್ಟಿದ್ದು ಅವರ 'ಸಮಾನ ಮನಸ್ಕ' ಬ್ರಾಂಡಿನ ವ್ಯಸನದಂತೆ ವ್ಯಕ್ತವಾಗಿತ್ತು. ಸೋಮಶೇಖರ್ ಬೆನ್ನಿಗಿರುತ್ತಿದ್ದದ್ದು ಡಿಕೆ ಮತ್ತು ಕೃಷ್ಣ ಎಂಬುದು ಸಿದ್ದುಗೆ ಗೊತ್ತಿಲ್ಲವೆಂದೇನಲ್ಲ, ಜೂನ್ 27ರಂದು ಭೈರತಿ ಬಸವರಾಜ್ ಮತ್ತು ಸೋಮಶೇಖರ್‌ರನ್ನು ಬಿಡಿಎ ಸದಸ್ಯರನ್ನಾಗಿ ನೇಮಿಸಲಾಗಿದೆ ಎಂಬ ಮುಖ್ಯಮಂತ್ರಿ ಕಚೇರಿಯ ಪ್ರಕಟಣೆ ಹೊರಬಿದ್ದಿದ್ದೇ ಮುನಿರತ್ನರ ಗುಂಡಿಗೆಯು ವಿೀಟರ್ ಹೊಡೆದುಕೊಳ್ಳಲಾರಂಭಿಸಿತು.

ಇದ್ದುದರಲ್ಲಿ ಲೇಔಟ್ ಕೃಷ್ಣಪ್ಪ ವ್ಯವಹಾರಸ್ಥ. ಮುಖ್ಯಮಂತ್ರಿಯನ್ನೇನಾದರೂ ಎದುರಾಕಿಕೊಂಡರೆ ಮಾಗಡಿ ರಸ್ತೆಯ ತಾವರೆಕೆರೆಯಿಂದ ಮೈಸೂರು ರಸ್ತೆಯ ಬಿಡದಿತನಕ ಕೆರೆಕಟ್ಟೆ ಗೋಮಾಳ ಬೆಟ್ಟಗುಡ್ಡ ಇತ್ಯಾದಿಗಳನ್ನು ನೆಲಸಮಗೊಳಿಸಿ ಸೈಟು ಮಾಡಿ ಮಾರಿಕೊಂಡದ್ದೇನಾದರೂ ಕೆದಕಿದರೆ ತನಗೇ ಸಮಸ್ಯೆ ಗ್ಯಾರಂಟಿ ಎಂಬುದು ಯಾವತ್ತಿಗೋ ಗೊತ್ತಾಗಿತ್ತು, ಇನ್ನು ಮುನಿರತ್ನ, ರಾಜಶೇಖರ್ ಪಾಟೀಲ್, ಶಿವಮೂರ್ತಿ ನಾಯಕ್ ಇತ್ಯಾದಿಗಳು ನಿಲ್ಲುವುದುಂಟೆ?

ವಾರ ಕಳೆಯುವುದರೊಳಗಾಗೇ ಭುಗಿಲೆದ್ದ ಭಿನ್ನಮತ, ಸಮಾನ ಮನಸ್ಕರ ಆಕ್ರೋಶ, ಖಮರುಲ್, ಚಿಂಚನಸೂರ್ ವೀರಾವೇಶಗಳೆಲ್ಲವೂ ಒಂದು ಹದಕ್ಕೆ ಬಂದಾಗಿತ್ತು, ಎಸ್.ಟಿ. ಸೋಮಶೇಖರ್ ಸಂತೃಪ್ತಿಯಿಂದಲೇ ಬಿಡಿಎ ಆವರಣದಲ್ಲಿ ಓಡಾಟ ಶುರುವಿಟ್ಟಿದ್ದರು. ಪಾಪ ಶ್ರೀನಿವಾಸ್ ಪ್ರಸಾದ್‌ರದ್ದು ಆರ್ತನಾದವೇ. ದಿಗ್ವಿಜಯ್‌ಗೆ ಮನವರಿಕೆ ಮಾಡುತ್ತೇನೆನ್ನುತ್ತಾರೆ. ಎಸ್.ಎಂ. ಕೃಷ್ಣ ಹಿರಿಯರಂತೆ. ಈಗಲೇ ಏನೂ ಹೇಳುವುದಿಲ್ಲವಂತೆ. ಸಿದ್ದು ಜೊತೆ ಮಾತ್ರ ಮಾತುಕತೆ ಸಾಧ್ಯವೇ ಇಲ್ಲವಂತೆ....!

ರೋಷಾವೇಶದಲ್ಲೇ ತೊಡೆತಟ್ಟುತ್ತಿದ್ದಾರೆ ನಿಜ; ತಟ್ಟಿದ ಸದ್ದು ಕೇಳಿಸುತ್ತಲೇ ಇಲ್ಲ. ಏಕೆಂದರೆ ತೊಡೆಯಲ್ಲಿ ಖಂಡ ರಟ್ಟೆಯಲ್ಲಿ ತಾಕತ್ತು ಹಿಂದಿನಂತಿರಬೇಕಲ್ಲ!

● ರಾ. ಸೋಮನಾಥ್







ಭೈರತಿ




...ಮು ತಿಂಗಳ ಹಿಂದೆ ಅಂದರೆ ಸಂಪುಟ ಪುನರ್‌ರಚನೆಯ ...ಸನೆ ಹತ್ತಿದ್ದೇ ತನ್ನ ಮಂತ್ರಿಗಿರಿಯ ಕಡೆಗಾಲದಲ್ಲಿ ...ನಿವಾಸ್ ಪ್ರಸಾದ್ ಮಾಡಿದ ಸಾರಾಸಗಟು ವರ್ಗಾವರ್ಗಿ ...ಟ್ಟಿಯನ್ನು ಮುಖ್ಯಮಂತ್ರಿ ಸಿದ್ದು ರದ್ದುಪಡಿಸಿದ್ದರ ಪ್ರತಿಫಲ. ...ನಿವಾಸ್ ಪ್ರಸಾದ್ ವೈಯಕ್ತಿಕವಾಗಿ ಭ್ರಷ್ಟರಲ್ಲ ನಿಜ. ...ಮ್ಮ ಬದುಕಿನುದ್ದಕ್ಕೂ ಕೈಬಾಯಿ ಕೆಡಿಸಿಕೊಂಡವರಲ್ಲ. ...ದೇ ಆದರ್ಶ, ವ್ಯಕ್ತಿತ್ವ ಕಾಯ್ದುಕೊಂಡೇ ಬಂದ ಶ್ರೀನಿವಾಸ್ ...ಸಾದ್ ತಮ್ಮ ಬದುಕಿನ ಕಡೇಗಾಲದಲ್ಲಿ ಎಡವಿದ್ದು ...ಳಿಯನ ಮೇಲಿನ ವ್ಯಾಮೋಹಕ್ಕೆ.

ಅಳಿಯನಿಗೆ ಪಕ್ಕವಾದ್ಯದಂತೆ ಸೇರಿಕೊಂಡವನು ...ಸೂರಿನ ಮೂಡಾ ಅಧ್ಯಕ್ಷ ಮತ್ತು ಪ್ರಸಾದ್ ಸಾಹೇಬರ ...ಯತ್ತಿನ ಬಂಟ ಕೆ.ಆರ್. ಮೋಹನ್ ...ಮಾರ್. ಅಳಿಯನ ಜೊತೆ ಬಂಟನೂ ...ೇರಿಕೊಂಡು ಕಂದಾಯ ಕ್ರಾಂತಿ ...ಡಬಹುದೆಂಬ ಸಾಹೇಬರ ನಿರೀಕ್ಷೆಗೆ ...ಕ್ಕಂತೆ ರಾಜ್ಯದ ಬೇರೆ ಬೇರೆ ಭಾಗಗಳ ...ಹಸೀಲ್ದಾರ್‌ಗಳು, ಉಪವಿಭಾಗಾಧಿಕಾರಿ ...ಳು, ರೆವಿನ್ಯೂ ಇನ್ಸ್‌ಪೆಕ್ಟರ್‌ಗಳು, ವಿಲೇಜ್ ...ಕೌಂಟೆಂಟರು ಸೇರಿದಂತೆ ಎಂಟು ...ೂರಕ್ಕೂ ಅಧಿಕ ಮಂದಿಯ ವರ್ಗಾವರ್ಗಿ ...ಟ್ಟಿ ಮಾಡಿದ್ದೇ ಮಾಡಿದ್ದು, ಅಳಿಯನನ್ನು ...ಂಬಿ ಪ್ರಸಾದ್ ಅಂಕಿತವಿಟ್ಟದ್ದೂ ಆಯ್ತು, ...ನ್ನೇನು ಪಟ್ಟಿ ಜಾರಿಗೆ ಬರಬೇಕೆನ್ನುವಷ್ಟರಲ್ಲೇ ...ಮಂತ್ರಿಗಿರಿಯೂ ಹೋಯ್ತು ಮಾಡಿದ ...ವರ್ಗಾವರ್ಗಿಯನ್ನೂ ಸಿಎಂ ...ಡೆಹಿಡಿದಾಗಿತ್ತು,

ಇಲ್ಲಿ ಪ್ರಸಾದ್ ರೊಚ್ಚಿಗೆದ್ದಿದ್ದು ತನ್ನ ...ವರ್ಗಾ ಪಟ್ಟಿಯನ್ನು ತಡೆಹಿಡಿದದ್ದಕ್ಕೇ ...ೂರತು ಮಂತ್ರಿಗಿರಿಯ ಕಾರಣಕ್ಕಲ್ಲ ಎಂಬ ...ಸತ್ಯ ಹೊರಜಗತ್ತಿಗೆಲ್ಲ ಗೊತ್ತು?


ಮೊದಮೊದಲು ಖರ್ಗೆ ಮಗನಿಗೆ ...ಮಂತ್ರಿಸ್ಥಾನ ಕಲ್ಪಿಸಲೆಂದೇ ತನ್ನನ್ನು ಕೈಬಿಟ್ಟ... ಪ್ರಸಾದ್ ... ಖರ್ಗೆ ... [illegible] ... ಖರ್ಗೆ ... ಪಕ್ಕ ಬಿದ್ದಿದ್ದರೂ ಹೈಕಮಾಂಡ್















ಜೆಡಿಎಸ್, ಬಿಜೆಪಿಗಳೇ ಅಲ್ಲಾಡುತ್ತಿರುವಾಗ

ಅತೃಪ್ತರ ಆಟಕ್ಕೆಲ್ಲಿ ಬೆಲೆ?

ಯಾಕೋ ಸಿದ್ದು ವಿರೋಧಿಗಳ ಟೈಮೇ ಸರಿಯಿರುವಂತಿಲ್ಲ, ಇತ್ತ ಅಂಬರೀಶ್ ಮತ್ತು ಶ್ರೀನಿವಾಸ್ ಪ್ರಸಾದ್‌ರ ಆರೋಗ್ಯ ಕೈಕೊಡುತ್ತಿದ್ದಂತೆ ಬಿಜೆಪಿಯಲ್ಲಿ ಯಡ್ಡಿ ವಿರುದ್ಧವೇ ಅತೃಪ್ತಿ ಭುಗಿಲೆದ್ದಿದೆ. ಈಶ್ವರಪ್ಪ ಮತ್ತು ಸಿ.ಟಿ. ರವಿ ಒಟ್ಟೊಟ್ಟಿಗೆ ಯಡ್ಡಿ ವಿರುದ್ಧ ತಿರುಗಿಬಿದ್ದು ಬಿಜೆಪಿ ಕಚೇರಿಯಲ್ಲೇ ಬಂಡಾಯದ ಬಾವುಟ ಹಾರಿಸಿದ್ದಾರೆ. ಜಿಲ್ಲಾಧ್ಯಕ್ಷರ ನೇಮಕಾತಿಯಲ್ಲಿ ಮೂಲ ಬಿಜೆಪಿಯವರನ್ನು ಬದಿಗೊತ್ತಿ ತನ್ನ ಕೆಜೆಪಿಯಲ್ಲಿದ್ದವರನ್ನೇ ಹುಡುಹುಡುಕಿ ಯಡ್ಡಿ ಜಿಲ್ಲಾಧ್ಯಕ್ಷರನ್ನಾಗಿಸುತ್ತಿರುವುದು ಒಂದು ಆಕ್ರೋಶವಾದರೆ ಯಾರೇನೇ ಮನವಿಯಿತ್ತರೂ ಶೋಭಾ ಕರಂದ್ಲಾಜೆ ಜೊತೆ ಚರ್ಚಿಸಿ ಎಂದು ಸಾಗಹಾಕುತ್ತಿರುವುದು ಯಡ್ಡಿ ವಿರುದ್ಧದ ಮೂಲ ಬಿಜೆಪಿಗರ ಬಂಡಾಯದ ಮೂಲ ಕಾರಣ. [illegible]

ತಾನೇ ಹಾಕಿದ ಬಲೆಯಲ್ಲಿ ತಾನೇ ಸಿಕ್ಕಿ ಬೀಳಬೇಕಾದ ದುಸ್ಥಿತಿ ... ಸಿದ್ದು ಅಧಿಪತಿಗಳಾದ ದೇವೇಗೌಡ, ಕುಮಾರಣ್ಣರದ್ದು ಇದಕ್ಕಿಂತಲೂ ದುರ್ಗತಿ. ಪಕ್ಷವೇ ... ಹೋಗುತ್ತಿರುವಾಗ ಸಿದ್ದು ವಿರುದ್ಧ ತಾನೇ ಅದೇನೆಂದು ಕತ್ತಿ ಮಸೆಯಲು ಸಾಧ್ಯ? ಬಿಜೆಪಿ, ಜೆಡಿಎಸ್‌ಗಳೇ ಅಲ್ಲಾಡುತ್ತಿರುವಾಗ ... ಕಾಂಗ್ರೆಸ್ಸಿನ ಅತೃಪ್ತರಿಗೆಲ್ಲಿ ಧೈರ್ಯ ಸಾಧ್ಯ? ಎತ್ತಿಂದೆತ್ತ ಲೆಕ್ಕ ಹಾಕಿದರೂ ಸಿದ್ದು ಸಮ್ಮದಿಗೆ ಭಂಗವಿಲ್ಲ.






ಗುಲ್ಬರ್ಗ್ ಸೊಸೈಟಿ ಹತ್ಯಾಕಾಂಡ ತಡವಾಗಿ ದೊರೆತ ಅಪೂರ್ಣ ನ್ಯಾಯ

2002ರ ಗುಜರಾತ್ ಗಲಭೆಯ ವೇಳೆ ನಡೆದ ಗುಲ್ಬರ್ಗ್ ಸೊಸೈಟಿ ಹತ್ಯಾಕಾಂಡ ಪ್ರಕರಣಕ್ಕೆ ಸಂಬಂಧಿಸಿದಂತೆ ವಿಶೇಷ ನ್ಯಾಯಾಲಯವು ಕಳೆದ ಜೂನ್ 2ರಂದು ತೀರ್ಪು ನೀಡಿತು. ಈ ಪ್ರಕರಣದಲ್ಲಿ 64 ಆರೋಪಿಗಳ ಪೈಕಿ 24 ಮಂದಿ ತಪ್ಪಿತಸ್ಥರು ಎಂದು ಹೇಳಿ 36 ಮಂದಿಯನ್ನು ಖುಲಾಸೆಗೊಳಿಸಲಾಯಿತು. 2002ರಲ್ಲಿ ಗುಜರಾತ್‌ನಲ್ಲಿ ನಡೆದ ಭೀಕರ ಹತ್ಯಾಕಾಂಡದ ವೇಳೆ ಗುಲ್ಬರ್ಗ್ ಸೊಸೈಟಿಯಲ್ಲಿ 69 ಮಂದಿಯನ್ನು ದಾರುಣವಾಗಿ ಹತ್ಯೆಗೈಯ್ಯಲಾಗಿತ್ತು, ಈ ತೀರ್ಪಿನ ಕುರಿತಂತೆ ವಿವಿಧ ಪ್ರತಿಕ್ರಿಯೆಗಳು ಬಂದಿವೆ. 24 ಆರೋಪಿಗಳಿಗೆ ಶಿಕ್ಷೆಯಾದುದಕ್ಕೆ ಕೆಲವರು ಸಂತೋಷ ವ್ಯಕ್ತಪಡಿಸಿದ್ದಾರೆ. ಇನ್ನು 14 ವರ್ಷಗಳ ಸುದೀರ್ಘ ಕಾಯುವಿಕೆಯ ಬಳಿಕವೂ 36 ಆರೋಪಿಗಳನ್ನು ಖುಲಾಸೆಗೊಳಿಸಿರುವ ಈ ತೀರ್ಪಿನ ಕುರಿತಂತೆ ಭಯಾನಕ ಹತ್ಯೆಗೊಳಗಾದ ಮಂದಿಯ ಕುಟುಂಬಸ್ಥರು ತೀವ್ರ ನಿರಾಸೆ ವ್ಯಕ್ತಪಡಿಸಿದ್ದಾರೆ. ಈ ದೇಶದಲ್ಲಿ ಗಲಭೆ ಸಂತ್ರಸ್ತ ಮುಸ್ಲಿಮರಿಗೆ ನ್ಯಾಯವು ಮರೀಚಿಕೆಯಾಗಿದೆ ಎಂಬುದನ್ನು ಈ ತೀರ್ಪು ಮತ್ತೊಮ್ಮೆ ಸಾಬೀತುಪಡಿಸಿದೆ.

ಭಾರತದಲ್ಲಿ ಕೋಮು ಹಿಂಸೆಯ ಕುರಿತ ಪ್ರಕರಣಗಳಿಗೆ ಸಂಬಂಧಿಸಿದಂತೆ ನ್ಯಾಯಾಲಯದಲ್ಲಿನ ವಿಚಾರಣಾ ಪ್ರಕ್ರಿಯೆಯನ್ನು ಅಧಿಕ ಸಮಯದವರೆಗೆ ನಡೆಸಲಾಗುತ್ತದೆ ಮತ್ತು ಸಾಮಾನ್ಯವಾಗಿ ಈ ಘಟನೆಗಳಲ್ಲಿ ತುಂಬಾ ಕಡಿಮೆ ಮಂದಿಗೆ ಶಿಕ್ಷೆಯನ್ನು ನೀಡಲಾಗುತ್ತದೆ. ಸ್ಟಾನ್‌ಫರ್ಡ್ ಲಾ ಸ್ಕೂಲ್ ಅಧ್ಯಯನವೊಂದರ ಪ್ರಕಾರ, ಭಾರತದಲ್ಲಿ ಗಲಭೆ ಪ್ರಕರಣಗಳಿಗೆ ಸಂಬಂಧಿಸಿ ಅಪರಾಧ ನಿರ್ಣಯದ ಪ್ರಮಾಣವು 2012ರ ವರೆಗೆ ಶೇ.18.5 (39,450 ಆರೋಪಿಗಳಲ್ಲಿ ಕೇವಲ 7,281 ಮಂದಿಯನ್ನು ಅಪರಾಧಿಗಳೆಂದು ಕಂಡುಕೊಳ್ಳಲಾಗಿತು) ಇತ್ತು, ಗುಜರಾತ್ ಗಲಭೆಗೆ ಸಂಬಂಧಿಸಿದ ಪ್ರಕರಣಗಳಲ್ಲಿ 2012ರ ವರೆಗೆ ಅಪರಾಧ ನಿರ್ಣಯದ ಪ್ರಮಾಣವು ಕೇವಲ ಶೇ.1.18ರಷ್ಟಿತ್ತು, ಇದೂ ಕೂಡ ಸಿಟಿಜನ್ ಫಾರ್ ಜಸ್ಟಿಸ್ ಆ್ಯಂಡ್ ಪೀಸ್‌ನ ತೀಸ್ತಾ ಸೆತಲ್ವಾಡ್ ಮತ್ತು ಇತರ ನಾಗರಿಕ ಸಂಘಟನೆಗಳ ನಿರಂತರ ಹಾಗೂ ಕಠಿಣ ಹೋರಾಟ ನಡೆಸಿದ ಕಾರಣದಿಂದ ಮಾತ್ರ ಸಾಧ್ಯವಾಗಿತ್ತು.

ನಮ್ಮ ನ್ಯಾಯವ್ಯವಸ್ಥೆಯ ನ್ಯೂನತೆಗಳು ಮತ್ತು ಗಲಭೆ ಸಂತ್ರಸ್ತರ ಕಠಿಣ ಸಂಘರ್ಷವನ್ನು ಅರಿತುಕೊಳ್ಳಲು ಗುಲ್ಬರ್ಗ್ ತೀರ್ಪಿನ ಗಹನವಾದ ಅಧ್ಯಯನ ಅವಶ್ಯವಾಗಿದೆ. ಈ ಪ್ರಕರಣದಲ್ಲಿ ದೋಷಮುಕ್ತರಾದ ಆರೋಪಿಗಳ ಸಂಖ್ಯೆಯು ಅಪರಾಧ ಸಾಬೀತಾದ ಆರೋಪಿಗಳಿಗಿಂತಲೂ ತುಂಬಾ ಹೆಚ್ಚಾಗಿದೆ. ನ್ಯಾಯಾಲಯವೂ ಈ ಹಿಂಸೆಯ ಹಿಂದೆ ಯಾವುದೇ ಅಪರಾಧ ಷಡ್ಯಂತ್ರ ಇರುವುದನ್ನು ತಿರಸ್ಕರಿಸಿದೆ. ಆದಾಗ್ಯೂ, ಕೋಮು ಹಿಂಸೆಯನ್ನು ಪ್ರಚೋದಿಸುವವರು, ಅದನ್ನು ಪ್ರಾಯೋಜಿಸುವವರು, ಅದರ ಯೋಜನೆ ರೂಪಿಸುವವರು ಮತ್ತು ಅದನ್ನು ಅನುಷ್ಠಾನಕ್ಕೆ ತರುವ ಮಂದಿ ಗಲಭೆ ಯಾವಾಗಲೂ ಸಹಜ ಮತ್ತು ಯೋಜಿತವಲ್ಲದ್ದಾಗಿರುತ್ತದೆ ಎಂದು ವಾದಿಸುತ್ತಾರೆ. ಆದರೆ ಪಾಲ್ ಬ್ರಾಸ್‌ನಂತಹ ವಿದ್ವಾಂಸರು, ಗಲಭೆಗಳನ್ನು ಪೂರ್ವಯೋಜಿತ ಷಡ್ಯಂತ್ರಗಳ ಮೂಲಕ ಪ್ರಚೋದಿಸಲಾಗುತ್ತದೆ ಮತ್ತು ರಾಜಕೀಯ ಪಕ್ಷಗಳು ದ್ವೇಷ ಮತ್ತು ವದಂತಿಗಳನ್ನು ಹರಡುತ್ತಾ ಜನರನ್ನು ಹಿಂಸೆ ನಡೆಸುವಂತೆ ಕೆರಳಿಸುತ್ತಾರೆ ಎಂದು ನಂಬುತ್ತಾರೆ. ಅವರು ಪೂರ್ವಯೋಜಿತರಾಗಿದ್ದ ಕಾರಣದಿಂದಲೇ ಗುಜರಾತ್‌ನಲ್ಲಿ ಇಷ್ಟೊಂದು ದೊಡ್ಡ ಪ್ರಮಾಣದ ಗಲಭೆ ನಡೆದಿರುವುದು.

ಜೂನಾಗಢ್ ಮತ್ತು ನವ್‌ಸಾರಿಯಂತ ಕಡೆಗಳಲ್ಲಿ ಬಿಜೆಪಿಯು ಬಲಿಷ್ಠವಾಗಿತ್ತು, ಅಲ್ಲಿ ಅದಕ್ಕೆ ಇನ್ನಷ್ಟು ಮತಗಳನ್ನು ಸೆಳೆಯುವ ಅವಶ್ಯಕತೆ ಇರಲಿಲ್ಲ, ಅಲ್ಲಿ ಗಲಭೆಗಳೂ ನಡೆಯಲಿಲ್ಲ, ಅದೇರೀತಿ ಭಾವನಗರದಂತಹ ಸ್ಥಳಗಳಲ್ಲಿ ಗಲಭೆಯನ್ನು ನಿಯಂತ್ರಿಸಲು ಪೊಲೀಸರು ತೀವ್ರ ಶ್ರಮಪಟ್ಟರು. ಅಲ್ಲಿಯೂ ಹಿಂಸೆ ನಡೆಯಲಿಲ್ಲ, ಅತಿಹೆಚ್ಚು



ಗುಲ್ಬರ್ಗ್ ಹತ್ಯಾಕಾಂಡದಲ್ಲಿ ಅಸುನೀಗಿದ ಜಾಫ್ರಿ ಮತ್ತು ಅವರ ಮಗಳು

ಹಿಂಸೆ ಖೇಡಾ ಮತ್ತು ಆನಂದ್‌ನಂತಹ ಪ್ರದೇಶಗಳಲ್ಲಿ ನಡೆಯಿತು. ಇಲ್ಲಿ ಬಿಜೆಪಿಗೆ ಚುನಾವಣೆಯಲ್ಲಿ ಗೆಲ್ಲುವುದು ಕಷ್ಟಕರವಾಗಿತ್ತು ಮತ್ತು ಅದಕ್ಕೆ ಸಮಾಜದ ಕೋಮು ಧ್ರುವೀಕರಣದಿಂದ ಲಾಭ ದೊರಕುವ ನಿರೀಕ್ಷೆ ಇತ್ತು, ಗುಜರಾತ್‌ನಲ್ಲಿ ವಿವಿಧ ಕಡೆಗಳಲ್ಲಿ ಗಲಭೆಯ ತೀವ್ರತೆಯಲ್ಲಿ ಅಂತರ ಯಾಕಿತ್ತು ಎಂಬ ಪ್ರಶ್ನೆಯನ್ನು ಹಲವು ಬಾರಿ ಕೇಳಲಾಗಿದೆ. ಒಂದು ವೇಳೆ ಈ ಗಲಭೆಗಳು ಜನರ ಆಕ್ರೋಶದಿಂದ ಬೆಳೆದಿದ್ದರೆ, ಅಲ್ಲದೇ ಮೋದಿಯ ಮಾತಿನ ಪ್ರಕಾರ ಕ್ರಿಯೆಗೆ ಪ್ರತಿಕ್ರಿಯೆ ಆಗಿದ್ದರೆ, ಈ ಸಂದರ್ಭದಲ್ಲಿ ಇಡೀ ಪ್ರದೇಶದಲ್ಲಿ ಹಿಂಸೆ ನಡೆಯಬೇಕಿತ್ತು, ಹಾಗೆಯೇ ಗಲಭೆ ಪ್ರಚೋದಿಸಲು ಕಾರಣ ಎಂದು ತೋರಿಸಲಾದ ಅಗ್ನಿ ಅವಘಡವಾದ ಗೋಧ್ರಾದಲ್ಲಂತೂ ಅತ್ಯಂತ ಹೆಚ್ಚು ಹಿಂಸೆ ನಡೆಯಬೇಕಿತ್ತು, ಆದರೆ ಹೀಗಾಗಲಿಲ್ಲ, ಇದಕ್ಕೆ ಕಾರಣವೇನೆಂದರೆ ಇದರ ಹಿಂದೆ ಒಂದು ಪೂರ್ವಯೋಜಿತ ಷಡ್ಯಂತ್ರವಿತ್ತು, ಗಲಭೆಯನ್ನು ಯಾವುದೇ ಕ್ರಿಮಿನಲ್ ಪಿತೂರಿಯ ಮೂಲಕ ಪ್ರಚೋದಿಸಲಾಗಿರಲಿಲ್ಲ ಎಂದು ನ್ಯಾಯಾಲಯವು ಹೇಳುವ ಮೂಲಕ ಗೋಧ್ರಾ ಘಟನೆಯು ಸಹಜ ಪ್ರತಿಕ್ರಿಯೆಯಾಗಿತ್ತು ಎಂಬ ಬಿಜೆಪಿಯ ವಾದವನ್ನು ನ್ಯಾಯಸಮ್ಮತಗೊಳಿಸಿದೆ.

ಗಲಭೆ ನಿಯಂತ್ರಿಸಲು ಸಮರ್ಥವಾಗಿದ್ದ ಮತ್ತು ತಮ್ಮ ಕರ್ತವ್ಯಪಾಲನೆಯಲ್ಲಿ ನ್ಯೂನತೆ ತೋರಿದ ಆ ವ್ಯಕ್ತಿಗಳ ಹೊಣೆಗಾರಿಕೆ ಮತ್ತು ಉತ್ತರದಾಯಿತ್ವವನ್ನು ಈ ತೀರ್ಪಿನಲ್ಲಿ ನಿರ್ಧರಿಸಿಲ್ಲ, ಇದಕ್ಕೆ ಪ್ರತಿಯಾಗಿ ನರೋಡಾ ಪಾಟಿಯಾ ಪ್ರಕರಣದ ತೀರ್ಪಿನಲ್ಲಿ ಷಡ್ಯಂತ್ರದ ಆರೋಪವನ್ನು ಸರಿ ಎಂದು ಹೇಳಲಾಯಿತು ಮತ್ತು ಗುಜರಾತ್ ಸರಕಾರದ ಸಚಿವೆ ಹಾಗೂ ಬಿಜೆಪಿ ನಾಯಕಿ ಮಾಯಾಬೆನ್ ಕೊಡ್ನಾನಿ ಮತ್ತು ವಿಎಚ್‌ಪಿ ನಾಯಕ ಬಾಬು ಬಜರಂಗಿಯನ್ನು ತಪ್ಪಿತಸ್ಥನೆಂದು ಘೋಷಿಸಲಾಯಿತು. ಈ ಪ್ರಕರಣದಲ್ಲಿ ನೀಡಲಾದ ತೀರ್ಪಿನಲ್ಲಿ ನ್ಯಾಯಾಧೀಶ ಜ್ಯೋತ್ಸನಾ ಯಾಜ್ಞನಿಕ್, ಕೊಡ್ನಾನಿ ಈ ಘಟನೆಯ ರೂವಾರಿಯಾಗಿದ್ದಾಳೆ; ಇದು ಗೋಧ್ರಾ ರೈಲು ದುರಂತ ಪ್ರಕರಣಕ್ಕೆ ಪ್ರತಿಕ್ರಿಯೆಯಾಗಿತ್ತು ಎಂದು ಹೇಳುತ್ತಾ ಇದರ ಗಂಭೀರತೆಯನ್ನು ಕಡಿಮೆಗೊಳಿಸಲು ಸಾಧ್ಯವಿಲ್ಲ ಎಂದು ಹೇಳಿದ್ದರು. ಈ ತೀರ್ಪಿನ ಬಳಿಕ ನ್ಯಾಯಾಧೀಶ ಯಾಜ್ಞನಿಕ್‌ರಿಗೆ ಜೀವ ಬೆದರಿಕೆಗಳು ಬರುತ್ತಿವೆ ಮತ್ತು ರಾಜ್ಯ ಸರಕಾರವು ಅವರಿಗೆ ಯಾವುದೇ ಸೂಕ್ತ ರಕ್ಷಣೆಯನ್ನು ನೀಡುತ್ತಿಲ್ಲ. ಒಂದು ವೇಳೆ ನರೋಡಾ ಪಾಟಿಯಾ ಮತ್ತು ಗುಲ್ಬರ್ಗ್ ಸೊಸೈಟಿ ಹತ್ಯಾಕಾಂಡವು ಒಂದೇ ಘಟನೆಯ ಪ್ರತಿಕ್ರಿಯೆಯಾಗಿದ್ದರೆ ಹಾಗೂ ಒಂದೇ ಸಮಯದಲ್ಲಾಗಿದ್ದರೆ, ಒಂದರ ಹಿಂದೆ ಷಡ್ಯಂತ್ರ ಇತ್ತು ಆದರೆ ಮತ್ತೊಂದರ ಹಿಂದೆ ಇರಲಿಲ್ಲ ಎಂಬುದು ಹೇಗೆ ಸಾಧ್ಯವಾಗುತ್ತಿತ್ತು ಎಂಬ ಪ್ರಶ್ನೆಯೂ ಉದ್ಭವವಾಗುತ್ತದೆ.

ಇದರಲ್ಲಿ 24 ಆರೋಪಿಗಳನ್ನು ತಪ್ಪಿತಸ್ಥರು ಎಂದು ಘೋಷಣೆ ಮಾಡಲಾಗಿರುವುದರಿಂದ ಕೆಲವರು ಈ ತೀರ್ಪನ್ನು ಮಹತ್ವಪೂರ್ಣ ತೀರ್ಪು ಎಂದು ಹೇಳುತ್ತಿದ್ದಾರೆ. ಆದರೆ ಕರ್ತವ್ಯಪಾಲನೆ ಮಾಡದಿದ್ದ ಕೆ.ಜಿ.ಇರ್ಡಾ ಮತ್ತು ಬಿ.ಪಿ.ಎನ್.ಪಾಟೇಲ್‌ರಂತಹವರನ್ನು ಖುಲಾಸೆಗೊಳಿಸಿರುವುದನ್ನು ನಿರ್ಲಕ್ಷಿಸಲಾಗುತ್ತಿದೆ. ಗುಲ್ಬರ್ಗ್ ಸೊಸೈಟಿ ಯಾವ ಪ್ರದೇಶದಲ್ಲಿತ್ತೋ, ಇರ್ಡಾ ಅಲ್ಲಿನ ಪೊಲೀಸ್ ಉಪ ಅಧೀಕ್ಷಕರು ಮತ್ತು ಬಿ.ಪಿ.ಎನ್. ಪಾಟೇಲ್ ಬಿಜೆಪಿ ಶಾಸಕರಾಗಿದ್ದರು. ಈ ರೀತಿಯ ಜನರನ್ನು ಖುಲಾಸೆಗೊಳಿಸಿ ಮತ್ತು ಷಡ್ಯಂತ್ರದ ಸಂಭವನೀಯತೆಯನ್ನು ತಿರಸ್ಕರಿಸಿ ನ್ಯಾಯಾಲಯವು ಯಾವ ಜನರಿಗೆ ಕ್ಲೀನ್ ಚಿಟ್ ನೀಡಿತೋ ಅವರ ಮೇಲೆ ನಾಗರಿಕರ ರಕ್ಷಣೆಯ ಹೊಣೆಗಾರಿಕೆಯಿತ್ತು. ಈ ಹತ್ಯಾಕಾಂಡದಲ್ಲಿ ಹತ್ಯೆಗೈಯ್ಯಲ್ಪಟ್ಟ 69 ಜನರಲ್ಲಿ ಮಾಜಿ ಸಂಸದ ಇಶಾನ್ ಜಾಫ್ರಿಯೂ ಇದ್ದರು. ಅವರು ಪೊಲೀಸ್ ಕಮಿಷನರ್‌ಗೆ ಹಲವಾರು ಬಾರಿ ಕರೆ ಮಾಡಿದ್ದರು. ಆದರೆ ಗಲಭೆಕೋರರು ಅಲ್ಲಿ 6 ಗಂಟೆಗಳ ಕಾಲ ಹಿಂಸಾ ತಾಂಡವ ನಡೆಸುತ್ತಿದ್ದರೂ ಪೊಲೀಸರು ಅಲ್ಲಿಗೆ ತಲುಪಿರಲಿಲ್ಲ ಎಂಬ ಅಂಶವು ವಿಶೇಷ ತನಿಖಾ ತಂಡದ ತನಿಖೆಯಿಂದ ಹೊರಬಿದ್ದಿತ್ತು, ಯಾವುದೇ ದೊಡ್ಡ ನಗರದ ಯಾವುದೇ ಪ್ರದೇಶಕ್ಕೂ ಪೊಲೀಸ್ ಪಡೆ ತಲುಪಲು ಸಾಮಾನ್ಯವಾಗಿ ಕೆಲವೇ ನಿಮಿಷ ಅಥವಾ ಹೆಚ್ಚೆಂದರೆ ಒಂದು ಗಂಟೆ ತಗುಲಬಹುದು. ಆದರೆ ಪೊಲೀಸರಾಗಲಿ, ರಾಜಕಾರಣಿಗಳಾಲೀ ಗಲಭೆಕೋರರ ಗುಂಪಿನಿಂದ ಗುಲ್ಬರ್ಗ್ ಸೊಸೈಟಿಯ ಜನರನ್ನು ರಕ್ಷಿಸುವ ಯಾವುದೇ ಪ್ರಯತ್ನ ಮಾಡಲಿಲ್ಲ, ಈ ಗುಂಪಿನಲ್ಲಿ ವಿಹಿಂಪ ಕಾರ್ಯಕರ್ತರೂ ಇದ್ದರಲ್ಲದೆ, ಅವರು ತಲವಾರು ಶಸ್ತ್ರಸಜ್ಜಿತರಾಗಿದ್ದರು (ಇದು ಪೂರ್ವ ತಯಾರಿಗೆ ಆಧಾರವಾಗಿದೆ). ಗುಂಪುನಲ್ಲಿ... ಸೊಸೈಟಿಯಲ್ಲಿ ನೆಲೆಸಿದ್ದವರನ್ನು ಅವರ ಮನೆ... ಹೊರಗೆಳೆದು ಕ್ರೂರವಾಗಿ ಹತ್ಯೆ ನಡೆಸಿದರು. ಪೊ... ಘಟನಾ ಸ್ಥಳಕ್ಕೆ ಯಾಕೆ ತಲುಪಲಿಲ್ಲ? ಇದರ ಏಕ... ತರ್ಕಬದ್ಧ ಉತ್ತರವೇನೆಂದರೆ, ರಾಜ್ಯ ಮತ್ತು ಗಲಭೆಕೋ... ಗುಪ್ತ ಒಪ್ಪಂದ ನಡೆದಿತ್ತು.

ಪ್ರಜಾತಂತ್ರದ ರಕ್ಷಣೆ ಮತ್ತು ರಾಜ್ಯ... ನಿಷ್ಪಕ್ಷಪಾತವನ್ನಾಗಿರಿಸಲು ರಾಜ್ಯದ ವಿವಿಧ ಅಂ... ಮುಕ್ತವಾಗಿ ಕೆಲಸ ಮಾಡುವುದು ಕೂಡ ಅವಶ್ಯಕವ... ಆದರೆ ನಮ್ಮ ದೇಶದಲ್ಲಿ ಯಾವ ಪರಿಸ್ಥಿತಿ ಇದೆ ಎ... ಒಂದು ವೇಳೆ ಪೊಲೀಸ್ ಅಥವಾ ನ್ಯಾಯ ವ್ಯವ... ನಿರ್ಭೀತಿಯಿಂದ ತನ್ನ ಕರ್ತವ್ಯಪಾಲನೆ ಮಾ... ಬಯಸಿದರೂ ಅವುಗಳು ಹಾಗೆ ಮಾಡಲು ಸಾಧ್ಯ... ಯಾವ ಅಧಿಕಾರಿಗಳು ಸರಕಾರದ ಸ್ವಾರ್ಥ ಹಿತಾಸಕ್ತಿ... ಪೂರೈಸಲು ಅದಕ್ಕೆ ನೆರವು ನೀಡುವುದಿಲ್ಲವೋ ಅ... ಯಾವ ರೀತಿ ಹಿಂಸಿಸಲಾಗುತ್ತದೆ ಎಂಬುದನ್ನು ನಾವ... ಅರಿತಿದ್ದೇವೆ. ಸಂಜೀವ್ ಭಟ್ (ಇವರ ಹೇಳಿಕೆ... ಹಿಂದೂಗಳಿಗೆ ಮುಸ್ಲಿಮರ ಮೇಲೆ ತಮ್ಮ ಆಕ್ರೋ... ವ್ಯಕ್ತಪಡಿಸಲು ಬಿಡಲಿ ಎಂಬುದಾಗಿ ... ಮುಖ್ಯಮಂತ್ರಿಯು ಪೊಲೀಸ್‌ರೊಂದಿಗೆ ಹೇಳಿದ್ದರು)... ಅಧಿಕಾರಿಗಳನ್ನು ಅಮಾನತುಗೊಳಿಸಲಾಯಿತು ... ಯಾಜ್ಞನಿಕ್‌ರಂತಹ ನ್ಯಾಯಾಧೀಶರಿಗೆ ಬೆದರಿಕೆ... ಒಡ್ಡಲಾಗುತ್ತಿದೆ.

ಮಾಲೆಗಾಂವ್ ಸ್ಫೋಟ ಪ್ರಕರಣದ ವಿ... ಅಭಿಯೋಜಕಿ ರೋಹಿಣಿ ಸಾಲ್ಯಾನ್‌ರಿಗೆ, ಹಿಂ... ಸಂಘಟನೆಗಳ ಆರೋಪಿಗಳೊಂದಿಗೆ ಮೃದು ಧೋ... ತಾಳುವಂತೆ ಎನ್‌ಐಎ ನಿರ್ದೇಶನ ನೀಡಿತ್ತು, ಈ ಸ್ಫೋ... ಸಾಧ್ವಿ ಪ್ರಜ್ಞಾ ಪಾಲ್ಗೊಳ್ಳುವಿಕೆಯನ್ನು ಹೇಮಂತ್ ... ನೇತೃತ್ವದ ಎಟಿಎಸ್ ಬಹಿರಂಗಗೊಳಿಸಿತ್ತು, ... ಜಾರ್ಜ್‌ಶೀಟ್‌ನಲ್ಲಿ ಆಕೆಯ ಹೆಸರನ್ನು ಅಳಿಸಲಾಗಿ...


ನಿರ್ದೋಷಿ ನಾಗರಿಕರಿಗೆ ರಕ್ಷಣೆ ನೀಡುವುದು ... ಒಂದುವೇಳೆ ಅಪರಾಧ ನಡೆದರೆ ಅದನ್ನು ನಡೆಸುವ... ಶಿಕ್ಷಿಸಲು ನಿಷ್ಪಕ್ಷಪಾತ ತನಿಖೆ ನಡೆಸುವುದು ... ಸಾಕ್ಷ್ಯಾಧಾರಗಳನ್ನು ಕಲೆಹಾಕಬೇಕಾಗಿರುವುದು ಪೊಲೀ... ಬಹುದೊಡ್ಡ ಹೊಣೆಗಾರಿಕೆಯಾಗಿದೆ. ಯಾವುದೇ ಒ... ನಿರ್ದಿಷ್ಟ ಸಮುದಾಯವನ್ನು ಗುರಿಪಡಿಸಿ ನಡೆ... ಕೋಮುಹಿಂಸೆ, ವಿಶೇಷವಾಗಿ ಇದರಲ್ಲಿ ಹಲವಾರು ವ... ಹತ್ಯೆಗೈಯ್ಯಲ್ಪಟ್ಟಿರಬಹುದು, ತಮ್ಮ ಮನೆಗ... ಹೊರಹಾಕಲ್ಪಟ್ಟಿರಬಹುದು ಮತ್ತು ಕಣ್ಮರೆಯಾಗಿರಬಹ... ವಾಸ್ತವದಲ್ಲಿ ಇದು ಮಾನವತೆಯ ವಿರು... ಅಪರಾಧವಾಗಿದೆ. ಪೊಲೀಸರು ಈ ಪ್ರಕರಣಗಳಲ್ಲಿ ಇ... ಜಾಗರೂಕತೆಯಿಂದ ತನಿಖೆ ನಡೆಸಬೇಕಾಗಿದೆ. ... ಆಗುವುದು ಮಾತ್ರ ಇದಕ್ಕೆ ತದ್ವಿರುದ್ಧ.

ಗುಲ್ಬರ್ಗ್ ಸೊಸೈಟಿಯ ಸಂತ್ರಸ್ತರು ಮತ್ತು ಗುಜ... ಗಲಭೆಯ ಇತರ ಬಲಿಪಶುಗಳು ನ್ಯಾಯಕ್ಕಾಗಿ ಮನೆಮ... ಅಲೆದಾಡಬೇಕಾಯಿತು. ಪ್ರಬಲ ಹಿಂದುತ್ವ... ನಾಯಕರನ್ನು ಒಬ್ಬರ ಬಳಿಕ ಒಬ್ಬರ... ಖುಲಾಸೆಗೊಳಿಸಿದುದರಿಂದ ನೊಂದ ಸಂತ್ರಸ್ತರು ... ನ್ಯಾಯಾಲಯದ ಕದ ತಟ್ಟಿದರು. ಆಗ ಉಚ್ಚ ನ್ಯಾಯಾ... ಈ ಪ್ರಕರಣಗಳನ್ನು ಗುಜರಾತ್‌ನ ಹೊರಗೆ ಸ್ಥಳಾಂತರ...

⇨ 1...

ಐಕ್ಲಾಸಾಗಿ ಐಲೈಟಾಗಿವ್ನಿ ಅಲ್ವೆ ಸಾ

ಅಣಕ



• ಎಚ್.ಎಲ್.ಕೇಶವಮೂರ್ತಿ



ನಮ್ಮ ಊರಿಗೂ ಪ್ರತಿಭಟನೆಗಳಿಗೂ ಅವಿನಾಭಾವ ಸಂಬಂಧ ಇರುವಂತಿದೆ. ಹೆಚ್ಚುಕಡಿಮೆ ಪ್ರತಿದಿನ ಇವು ನಡೆಯುತ್ತಲೇ ಇರುತ್ತವೆ. ವಿಷಯ ಇಂತಹದ್ದೇ ಇರಬೇಕು ಎನ್ನುವಂತೆ ಕಂಡುಬರುವುದಿಲ್ಲ. ಇದು ಸಮಾಜಘಾತುಕ ಸಂಗತಿಗಳಿಗೇ ಸೀಮಿತ ಆಗಿರುತ್ತದೆಂದು ಭಾವಿಸಬೇಕಾಗಿಲ್ಲ. ಸಜ್ಜನರ ವಿಷಯಗಳಿಗೂ ಇದು ಸಂಗತವೇ. ನಮ್ಮ ಊರಿಗೆ ಸಂಬಂಧಿಸಿದ ಸಂಗತಿಯೇ ಇರಬೇಕು, ನಮ್ಮ ಬದುಕಿಗೆ ಸಂಬಂಧಿಸಿದ್ದೇ ಇರಬೇಕು ಅಂತಾನೂ ಇಲ್ಲ. ಎಲ್ಲಿ ಏನೇ ನಡೆದರೂ ನಮ್ಮ ಪ್ರತಿಭಟನೆಯ ಅಳಿಲುಸೇವೆ ಇದ್ದೇ ಇರುತ್ತೆ. ಇದರಲ್ಲಿ ನಾವು ವಿಶ್ವಮಾನವರು! ಉದಾಹರಣೆಗೆ ಹೇಳುವುದಾದರೆ....

ಯಾವುದೋ ಒಂದು ಊರು. ಅಲ್ಲೊಬ್ಬ ರೌಡಿ. ಜನರಿಗೆ ಕಿರುಕುಳ ನೀಡುತ್ತಿದ್ದ. ಅದು ಗೌಣ. ಆದರೆ ಇನ್ನೊಂದು ಗುಂಪಿನ ರೌಡಿ ದಂಧೆಗೂ ಕಿರುಕುಳ ನೀಡುತ್ತಿದ್ದ ಅದೇ ಪ್ರಮುಖ. ಆ ಗುಂಪು ಈ ರೌಡಿಯ ರಕ್ತ ಹೀರಲು ಹೊಂಚು ಹಾಕುತ್ತಿತ್ತು. ಸಮಯ ನೋಡಿ ಅವನನ್ನು ಕೊಚ್ಚಿ ಹಾಕಿತು. ಆದರೆ.....

ಕೊಲೆಯಾದ ಅವನು ಜನಪ್ರತಿನಿಧಿಯಾಗಿದ್ದ!

ಸರಿ. ಅವನ ಪಕ್ಷದವರು ಅಲ್ಲಿ ಪ್ರತಿಭಟನೆ ಮಾಡಿದರು.

ಅವರು ಅಲ್ಲಿ ಪ್ರತಿಭಟಿಸಿದ್ದಕ್ಕೆ ನಮ್ಮೂರವರು ಇಲ್ಲಿ ಬೆಂಬಲ ಸೂಚಿಸಿ ಪ್ರತಿಭಟನೆ ಮಾಡಿದರು!

ಹೀಗೆ ಇಂತಹ ಯಾವುದೇ ಕಾರಣ ಇರಬಹುದು.

ಆ ಪಕ್ಷದ ನಾಯಕನನ್ನು ಈ ಪಕ್ಷದವರು ಹೀಯಾಳಿಸಿದರು. ಆ ಪಕ್ಷದವರಿಂದ ಪ್ರತಿಭಟನೆ.

ಈ ಪಕ್ಷದ ಧುರೀಣರ ಬಗ್ಗೆ ಆ ಪಕ್ಷದವರು ಹೀನಾಯವಾಗಿ ಮಾತನಾಡಿದರು.

ಈ ಪಕ್ಷದವರಿಂದ ಪ್ರತಿಭಟನೆ

ಆ ಧರ್ಮದ ಹುಡುಗ ಈ ಧರ್ಮದ ಹುಡುಗಿಯನ್ನು ಮದುವೆಯಾದ.

ಎರಡೂ ಧರ್ಮದವರಿಂದ ಪ್ರತಿಭಟನೆ- ಪ್ರತ್ಯೇಕ ಪ್ರತ್ಯೇಕವಾಗಿ!

ಅಂತೂ ಪ್ರತಿಭಟನೆಗೆ ಬಂದು ನೆಪ ಸಿಕ್ಕಿದರೆ ಸಾಕು.

ಪ್ರತಿಭಟನೆ ಮಾಡಿದ್ದು ಜನರಿಗೆ ತಿಳಿಯಬೇಕು. ಇಲ್ಲದಿದ್ದರೆ ಎಲ್ಲಾ ವ್ಯರ್ಥ. ಪ್ರಚಾರ ಸಿಗಬೇಕಾದರೆ ಸಾಕಷ್ಟು ಸಂಖ್ಯೆಯಲ್ಲಿ ಜನ ಸೇರಿಸಬೇಕು. ಜನರಿಗೆ ಇಂತಹವು ಬೇಕಿಲ್ಲ. ದಿನಾ ಸಾಯುವವರಿಗೆ ಅಳುವವರು ಯಾರು?

ಈ ಸಮಸ್ಯೆಗೆ ಪರಿಹಾರ-ರಸ್ತೆತಡೆ!

ಇದಕ್ಕೆ ಬೇಕಿಲ್ಲ ನೂರಾರು ಜನ- ಎಂಟತ್ತು ಮಂದಿ ಇದ್ದರೆ ಅದೇ ಮಸ್ತು! ಹೆದ್ದಾರಿಯಲ್ಲಿರುವವರಿಗೆ ಇದು ಒಂದು ವರ- ಕೈಬೆರಳ ಎಣಿಕೆಯಷ್ಟು ಜನ ಸೇರಿ ರಸ್ತೆ ತಡೆ ಮಾಡಿದರೆ ಆಯಿತು. ವಾಹನಗಳು ಸಂಚಾರ ನಿಲ್ಲಿಸಲೇಬೇಕು. ಯಾವುದೋ ಪ್ರಯಾಣಿಕರಿಗೆ ಏನೋ ತುರ್ತು. ಪ್ರತಿಭಟನಾಕಾರರಿಗೆ ಅತ್ತ ಗಮನ ಇಲ್ಲ. ಅದರ ಚಿಂತೆ ಅವರಿಗಿಲ್ಲ. ಪ್ರಚಾರ ಸಿಗಬೇಕೆಂಬುದು ಅವರ ಧ್ಯೇಯ. ಸಾರ್ವಜನಿಕರಿಗೆ ಹೆಚ್ಚು ತೊಂದರೆಯಾದಷ್ಟು ಮಾಧ್ಯಮಗಳಲ್ಲಿ ಹೆಚ್ಚು ಪ್ರಚಾರ ಎಂಬ ಸತ್ಯದ ಅರಿವಿದೆ ಅವರಿಗೆ. ಮಾಧ್ಯಮಗಳೂ ಬಯಸುವುದೂ ಇಂತಹವನ್ನೇ. ಯಾವುದೋ ಎಂಟತ್ತು ಜನ ಶಾಂತಿಯುತವಾಗಿ ಪ್ರತಿಭಟನೆ ಮಾಡುತ್ತಿದ್ದಾರೆ ಅನ್ನಿ. ಪಾಪ ಅದನ್ನು ಏನೂ ಅಂತ ಬರೆದಾರು? ಹೇಗೆ ಚಿತ್ರಿಸಿಯಾರು? ಅದೇ ವಾಹನಸಂಚಾರ ನಿಲುಗಡೆ ಆದರೆ ಅದು ಸುದ್ದಿ. ಜಿಲ್ಲೆಯಲ್ಲಿ ಹೀಗೆ ಒಂದೆರಡು ಕಡೆ ರಸ್ತೆ ತಡೆ ನಡೆದರೆ... 'ಜಿಲ್ಲೆಯ ಎಲ್ಲೆಡೆ ಭುಗಿಲೆದ್ದ ಆಕ್ರೋಶ' ಎಂದು ತೋರಿಸಿದರೆ ವಾಹಿನಿಗೂ ಒಂದು ಕ್ರೆಡಿಟ್ಟು. ಈ ಆಕ್ರೋಶ ಸುದ್ದಿವಾಹಿನಿಗಳಲ್ಲಿ ಮಾತ್ರ 'ಭುಗಿಲೆ'ದ್ದಿರಬಹುದು. ಆದರೆ ಅದನ್ನು ನೋಡಿದವರು 'ಏನಯ್ಯಾ ಇದು ಜನ ದಂಗೆ ಏಳ್ತಾ ಇರಂಗವ್ರೆ' ಅಂತ ತಿಳ್ಕೊತಾರೋ... ಅಷ್ಟೇ ಸಾಕು.

ಈ ರಸ್ತೆ ತಡೆಯು ಇತ್ತೀಚೆಗೆ ಸಪ್ಪೆ ಅನ್ನಿಸುತ್ತಿದೆ. ಇದುವರೆಗೂ ಇದ್ದ, ಅಲ್ಲಲ್ಲಿ ಈಗಲೂ ಇರುವ ಚಳವಳಿಗಾರರ 'ಎಲ್ಲೀವರೆಗೆ ಹೋರಾಟ, ಸಾಯುವವರೆಗೂ ಹೋರಾಟ', 'ಸರ್ಕಾರವಂತೆ ಸರ್ಕಾರ ಅವರ ಅಪ್ಪನ್ದಂತಸರ್ಕಾರ' ಇಂತಹ ಘೋಷಣೆಗಳು ಕ್ರಮೇಣ ತಮ್ಮ ಸತ್ವವನ್ನೇ ಕಳೆದುಕೊಂಡಂತೆ ರಸ್ತೆ ತಡೆಯೂ ಅನಾಕರ್ಷಣೆ ಸ್ಥಿತಿಯನ್ನು ತಲುಪುತ್ತಿರುವಂತಿದೆ. ಚಳವಳಿಗೆ ರೋಚಕತೆ ತುಂಬಲು ಇರುವ ಸದ್ಯದ ಮಾರ್ಗ ಎಂದರೆ- ಆತ್ಮಾಹುತಿ ಯತ್ನ! ಇದು ಈಗ ಹೆಚ್ಚು ಪ್ರಚಲಿತದಲ್ಲಿದೆ.

ಇತ್ತೀಚೆಗೆ ನಮ್ಮ ಜಿಲ್ಲಾ ಮಂತ್ರಿಯನ್ನು ಮಂತ್ರಿ ಮಂಡಲದಿಂದ ಕಿತ್ತೊಗೆದಾಗ ವಾಹಿನಿಗಳ 'ಭುಗಿಲೆದ್ದ ಆಕ್ರೋಶ'ಕ್ಕೆ ಪೂರಕವೋ ಎಂಬಂತೆ ಇಂತಹ ಪ್ರಕರಣಗಳು ನಡೆದವು. ಪೆಟ್ರೋಲನ್ನು ಮೈಮೇಲೆ ಸುರಿದುಕೊಂಡು ಆತ್ಮಾಹುತಿಗೆ ಯತ್ನಿಸಿದ ಒಬ್ಬ ನನಗೆ ಪರಿಚಯ ಇದ್ದ. ಅವನನ್ನು ಮಾರನೆ ದಿನ ಕಂಡೆ. 'ಪೆಟ್ರೋಲ್ ಹಂಗೆ ತಲೆ ಮೇಲೆ ಸುರ್ಕಂಡಲ್ಲ.... ಬುದ್ಧಿಗಿದ್ದಿ ಐತ್ಲಾ ನಿಂಗೆ' ಅಂತ ಉಗಿದೆ..

ಅವನು ಮೌನವಾಗಿದ್ದ. ನಂತರ ಕೇಳ್ದ- 'ನೀವು ಟೀವಿಲಿ ಅದ ನೋಡಿದ್ರಾ ಸಾ!'

'ನೋಡಿದ್ನೇ ಕೇಳ್ತಿದೀನಿ.'

'ನಾನು ಐಕ್ಲಾಸಾಗಿ ಐಲೈಟಾಗಿವ್ನಿ ಅಲ್ವೆ ಸಾ' ಅಂದ!

ಇದು ಗಾನ್ ಕೇಸು ಅಂದ್ಕಂಡೆ. ಹಾಗೇ ಯೋಚಿಸಿದೆ.

ಸಾಯುವವರು ಯಾರನ್ನೂ ಹೇಳಿಕೇಳಿ ಸಾಯೋಲ್ಲ. ಒಂಟಿಯಾಗಿ ಎಲ್ಲೋ ಒಂದು ಕಡೆ ವಿಷ ಕುಡ್ಕೊ ನೇಣು ಬಿಗಿದುಕೊಂಡೋ, ಬೆಂಕಿ ಹಚ್ಚಿಕೊಂಡೋ ಸಾಯ್ತಾರೆ. ಹತ್ತಾರು ಮಂದಿ ಮುಂದೆ ಹಿಂಗೆ ಮಾಡಕೆ ಹೋಗಲ್ಲ. ಹೋದ್ರೂ ಜನ ಸಾಯಲು ಬಿಡಲ್ಲ. ಅದು ಗೊತ್ತಿದ್ದೇ ಇವನು ಹಂಗೆ ಮಾಡವ್ನೆ. ಪ್ರತಿಭಟನೆ ಮಾಡಿದಂಗೂ ಆಯ್ತು; ನಾಯಕ ನಿಷ್ಠೆ ತೋರಿದಂಗೂ ಆಯ್ತು. ಐನಾತಿ ಬಡ್ಡಿ ಹೈದ ಅವ್ನು ಅಂತ ಖಾತರಿ ಆಯಿತು.

ಈಗ ಗಾನ್ ಕೇಸು ಅವನಾ? ನಾನಾ?

ಅಲ್ಲ, ಒಂದು ವೇಳೆ ಈ ಬಡ್ಡಿ ಹೈದ ಹಿಂಗಾರ ಸಾಯಲಿ ಅಂತ ಯಾವ್ರೋನಾದ್ರೂ ಬೆಂಕಿಕಡ್ಡಿ ಗೀರಿದ್ದರೆ....! ●

ಹೆಂಗರುಳಿನ ಹಿಂದೂ ಗೋಳು ಕಥೆ ಪ್ರಚಾರಕರ ಅಸಲಿಯತ್ತು


ನೀರಲ್ಲಿ ತೇಲುವ ಮಂಜುಗಡ್ಡೆ ತನ್ನ ಸಣ್ಣದೊಂದು ಭಾಗವನ್ನಷ್ಟೇ ಮೇಲೆ ತೋರಿಸಿ ದೊಡ್ಡಭಾಗವನ್ನು ನೀರೊಳಗೇ ಬಚ್ಚಿಟ್ಟಿರುತ್ತದೆ. ಸಮುದ್ರದಲ್ಲಿ ತೇಲಿಬರುವ ಇಂತಹ ತುಣುಕನ್ನು ಕತ್ತಲಲ್ಲಿ ಅಂದಾಜಿಸದೇ ಟೈಟಾನಿಕ್‌ನಂತಹ ಟೈಟಾನಿಕ್ಕೇ ಒಡೆದು ಜಲಸಮಾಧಿಯಾಗಿತ್ತು.

ಮಂಗಳೂರಿನ ನಮ್ಮ ಹೆಮ್ಮೆಯ ಪೊಲೀಸ್ ಕಮಿಷನರ್ ಚಂದ್ರಶೇಖರ್ ಅವರು ಎಲ್ಲಾ ಒತ್ತಡ, ಅಸಹಕಾರ, ರಾಜಕೀಯ ಲಾಬಿಗಳನ್ನು ಮೆಟ್ಟಿನಿಂತು ಹಿಡಿದು ಹಾಕಿದ ಕರಾವಳಿಯ ಕುತಂತ್ರಿ ಕೊಲೆಗಾರ ನರೇಶ್ ಶೆಣೈ ಎಂಬ ಎಲಿಮೆಂಟು ಹಿಂದೂವಾದಿ ಜಿಎಸ್‌ಬಿ ಕಾಳತೆಯ ಒಂದು ಅತೀಸಣ್ಣ ಮಜಲೇ ಹೊರತು ಅದರ ವಿಶ್ವರೂಪದ ಆಳ-ಅಗಲವನ್ನು ಸಂಪೂರ್ಣವಾಗಿ ಬಲ್ಲವರು ಈತನಕ ಯಾರೂ ಇಲ್ಲ.

ಹಣ ಬಲ, ರಾಜಕೀಯ ಶಕ್ತಿ ಮತ್ತು ಮುಖ್ಯವಾಗಿ ಮಾಧ್ಯಮ ಬಲಗಳಿಂದ ತಾವೇನೇ ಮಾಡಿದರೂ ತಮ್ಮನ್ಯಾರೂ ಮುಟ್ಟಲು ಸಾಧ್ಯವಿಲ್ಲ, ತಾವು ಆಡಿದ್ದೇ ಆಟ ಎಂಬ ಭ್ರಮೆಯಲ್ಲಿದ್ದ ನರೇಶ್ ಶೆಣೈನಂತಹ ಕೋಮು ಕ್ರಿಮಿನಲ್‌ಗಳಿಗೆ ಕಮಿಷನರ್ ಚಂದ್ರಶೇಖರ್ ಇದೀಗ ಸರಿಯಾಗಿ ನಡುಕ ಹುಟ್ಟಿಸಿದ್ದಾರೆ. ಹನುಮಂತ ಕಾಮತ್ ಎನ್ನುವ ದಗಲುಬಾಜಿ ದಗಾಕೋರ ಕ್ರಿಮಿನಲ್ ಶೆಣೈಯನ್ನು ಬಚಾವ್ ಮಾಡಲು ಮೀಡಿಯಾಗಳ ಮುಂದೆ ಕಟ್ಟಿದ ಕಥೆಗಳೆಲ್ಲವೂ ಇದೀಗ ಠುಸ್ ಆಗಿ ಆತನ ಬಂಡವಾಳವೂ ಇದೀಗ ಬಟಾಬಯಲಾಗಿದೆ. ಕ್ರಿಮಿನಲ್ ಶೆಣೈ ಸಾಕ್ಷ್ಯನಾಶ ಮಾಡಹೋದದ್ದು ಇವನಿಗೆ ಗಣ್ಯರೆನಿಸಿದವರ ಸಾಥ್ ಸಿಕ್ಕಿದ್ದೆಲ್ಲವೂ ತನಿಖೆಯಿಂದ ಕಂಡುಕೊಳ್ಳಲಾಗಿದೆಯೆಂದು ಕಮಿಷನರೇ ಸುದ್ದಿಗೋಷ್ಠಿಯಲ್ಲಿ ಹೇಳಿದ್ದಾರೆ. ಆರ್‌ಟಿಐ ಕಾರ್ಯಕರ್ತ ಜೀವಂತವಿದ್ದರೆ ದೇಶಪ್ರೇಮದ ಹಗಲು ವೇಷ ಹಾಗು ಸುಂದರ ಮುಖದ ಹಿಂದಿನ ತಮ್ಮ ಹಲ್ಕಾ ಕೆಲಸಗಳ ನಿಜ ಬಣ್ಣವೆಲ್ಲ ಬಯಲಾಗುವುದೆಂದು ವೃದ್ಧ ಪೋಷಕರು ಹಾಗು ಬಾಳಿಗಾರ ಅವಿವಾಹಿತ ಸೋದರಿಯರ ಭವಿಷ್ಯವನ್ನೂ ಚಿಂತಿಸದೇ ನಿರ್ದಯವಾಗಿ ಕೊಲೆ ನಡೆಸಿದ ಶೆಣೈ ಚಟಾಲಮ್ಮಿಗೆ ಮರಣ ದಂಡನೆಯೂ ಸಣ್ಣ ಶಿಕ್ಷೆಯಿಂದೇ ಜನರಾಡಿಕೊಳ್ಳುತ್ತಿದ್ದಾರೆ.

ಹದಿನೈದಿಪ್ಪತ್ತು ವರ್ಷಗಳ ಹಿಂದೆ 'ಭಾರತ ದರ್ಶನ' ಎಂಬ ಹಿಂದೂಗಳು 'ಅನ್ಯ'ರಿಂದ ಅನುಭವಿಸಿದ 'ಗೋಳಿನ ಕಥೆ'ಗಳ ಮೂಲಕ ಆರೆಸ್ಸೆಸ್ ಹಿನ್ನೆಲೆಯ ವಿದ್ಯಾನಂದ ಶೆಣೈ ಎನ್ನುವ ವ್ಯಕ್ತಿ ಜನರಲ್ಲಿ ಹುಸಿ ದೇಶಭಕ್ತಿಯನ್ನು ಪ್ರಚೋದಿಸಲು ಹೊರಟು ಒಂದು ಹಂತದಲ್ಲಿ ಯಶಸ್ಸನ್ನೂ ಗಳಿಸಿದ್ದ. ಇಂತಹ ಒನ್ ಸೈಡೆಡ್ ಗೋಳು ಕಥೆಗಳು ಬಹುತೇಕ ಉತ್ಪ್ರೇಕ್ಷೆಯ ವಿಚಾರಗಳನ್ನೇ ಹೊಂದಿರುವುದು ಸಾಮಾನ್ಯ. ... ಸಾಕ್ಷಾತ್ ಶಿವ-ಪಾರ್ವತಿಯರು ನೆಲೆಸಿರುವ ನಮ್ಮ ಗೌರಿಶಂಕರ ... ಹೆಸರಾದ ಎವರೆಸ್ಟ್ ಹೆಸರಲ್ಲಿ ... ಒಂದು ಅಳುಬುರುಕ, ತೆಗೆದುಕೊಂಡರೆ ... ವಿಚಾರ ಗೊತ್ತಿಲ್ಲದವರ ಮನಸ್ಸಿಗೆ ಇದು ಹೌದಲ್ಲವೇ!!? ಎಂಥಾ ಅಸಂಬದ್ಧ. ಎಂದು ಕೇಳುಗರಲ್ಲಿ ದ್ವೇಷಭಾವನೆ ಪ್ರಚೋದಿಸಲ್ಪಟ್ಟರೆ ವಾಸ್ತವ ಸಂಗತಿ ಮಾತ್ರ ಬೇರೇಯದೇ ಇದೆ.

ಅಂದರೆ ಅಸಲಿಗೆ ಈ ಗೌರಿಶಂಕರ ಪರ್ವತ ಶಿವಪಾರ್ವತಿಯರನ್ನಾರಾಧಿಸುವ ಭಾರತದ್ದೇ ಅಲ್ಲ. ಅದು ಟಿಬೆಟ್ ಅಥವ ನೇಪಾಳಕ್ಕೆ ಹೊಂದಿಕೊಂಡಿರುವ



ಪರ್ವತ ಪ್ರದೇಶ. ಅದರ ಸ್ಥಳೀಯ ಟಿಬೆಟ್ ಹೆಸರು 'ಚೋಮೋಲುಂಗ್ಮಾ' ಎಂದು. (ಎಡ್ಮಂಡ್ ಹಿಲರಿಯೊಂದಿಗೆ ಮೊದಲಬಾರಿ ಈ ಶಿಖರವೇರಿದಾತನೂ ಭಾರತೀಯನಲ್ಲ. ಭೂಟಾ ಸಿಂಗ್ ಅಥವ ಮಿಲ್ಖಾ ಸಿಂಗನ ಸಂಬಂಧಿಯೋ ಎನ್ನುವಂತೆ ಕರೆಯಲಾಗುವ ನೇಪಾಳಿ ತೇನಸಿಂಗನ ನಿಜ ಹೆಸರು ತೆನ್ಝಿಂಗ್- **Tenzing**). ಹಿಮಾಲಯ ಪರ್ವತ ಶ್ರೇಣಿಯಲ್ಲಿ ಈ ಎವರೆಸ್ಟ್ ಅತ್ಯಂತ ಎತ್ತರದ್ದು ಎಂದು ಕಂಡುಕೊಂಡು ಅದಕ್ಕೆ ಇನ್ನಿಲ್ಲದ ವಿಶ್ವಮಾನ್ಯತೆ ದೊರಕಿದ ನಂತರದ ದಿನಗಳಲ್ಲಿ ಅಲ್ಲಿ ನಮ್ಮ ಶಿವಪಾರ್ವತಿಯರನ್ನು ಕಾಲ್ಪನಿಕವಾಗಿ ಕೂರಿಸಿ ಹಿಂದೂಗಳು ಮೆರೆಸಿದ್ದೂ ಆಯಿತು. ಇನ್ನೂ ವಿಶೇಷವೆಂದರೆ ಇದು ಎವರೆಸ್ಟ್ ಎಂಬಾತನಿಗೂ ಕೂಡ ನೇರವಾಗಿ ಸಂಬಂಧಿಸಿಲ್ಲವೆನ್ನುವುದು. ಯಾವುದೋ ಆಕಾಶಕಾಯಕ್ಕೆ ನಮ್ಮ ಸಿ.ವಿ.ರಾಮನ್, ರಾಮಾನುಜನ್, ವಿಜ್ಞಾನಿ ಚಂದ್ರಶೇಖರ್ ಅಂತಹವರ ಹೆಸರನ್ನು ಗೌರವಪೂರ್ವಕವಾಗಿ ನಾಸಾ ಇಟ್ಟಂತೆ ಇದೊಂದು ಗೌರವ ಪ್ರಧಾನದ ಮೂಲಕ ಬಂದಂತಹ "ತಕ್ಕುದಾದ" ಹೆಸರೇ ವಿನಃ ಬೇರೇನಲ್ಲ.

ಒಂದು ಪತ್ರ

ಅಂದರೆ **1800** ರ ಸುಮಾರಿಗೆ ಬ್ರಿಟಿಷ್ ಸರಕಾರ **"The great Arc project"** ಎಂಬ ಪ್ರಪಂಚದಲ್ಲಿ ಅವರೆಗೆ ಮಾಡಿರದಂತಹ ಅತ್ಯಂತ ದೊಡ್ಡ ಹಾಗು ಕ್ಲಿಷ್ಟ ಯೋಜನೆಯೊಂದನ್ನು ಭಾರತದಲ್ಲಿ ಕೈಗೆತ್ತಿಕೊಂಡಿತು. ಅದೆಂದರೆ, ಮರುಭೂಮಿ, ದಟ್ಟಾರಣ್ಯ, ಪರ್ವತಗಳೆಂಬ ವಿಚಿತ್ರ ವಿಚಿತ್ರ ತೆರನಾದ ಭೂಭಾಗವನ್ನು ಹೊಂದಿರುವ ಇಡೀ ಭಾರತವನ್ನು ಸರ್ವೇಮಾಡಿ ಭೂ ನಕ್ಷೆಯನ್ನು ಸಿದ್ಧಪಡಿಸುವ ಯೋಜನೆ ಅದು. ಹಲವು ದಶಕಗಳ ಕಾಲ, ಸಾವಿರಾರು ಜನರ ಶ್ರಮದಲ್ಲಿ ನಡೆದ ಈ ಮಹಾ ಯೋಜನೆ ಸಮಯದಲ್ಲಿ ಸರ್ವೇಯರ್ ಜನರಲ್ ಆಫ್ ಇಂಡಿಯಾ ಆಗಿದ್ದವರಲ್ಲಿ ಒಬ್ಬ ಈ ಸರ್ ಎವರೆಸ್ಟ್ ಎಂಬಾತ. ಆತನ ಗೌರವಕ್ಕಾಗಿ ಎತ್ತರದ ಶಿಖರವೆಂದು ಕಂಡುಕೊಳ್ಳಲಾದ ಪರ್ವತಕ್ಕೆ ಈ ಹೆಸರನ್ನು ಸೂಚಿಸಲಾಯಿತಾದರೂ ಆತನೇ ಅದನ್ನು ತಿರಸ್ಕರಿಸಿ ಸ್ಥಳೀಯ ಚೋಮೋಲುಂಗ್ಮ ಹೆಸರೇ ಸರಿಯೆಂದು ಸಲಹೆ ನೀಡಿದ್ದರೂ ಕೂಡ ಕೊನೆಗೆ ಎವರೆಸ್ಟ್ ಎಂಬ ಹೆಸರನ್ನೇ ಪರ್ವತಕ್ಕೆ ಇಡಲಾಯಿತು. ಇದು ವಾಸ್ತವ ಕಥೆ. (ಆರೇಳು ವರ್ಷಗಳ ಹಿಂದೆ ಡಾ. ರಜನಿ ಎನ್ನುವವರು ಯಾವುದೋ ಭೌಗೋಳಿಕ ಪ್ರಯೋಗಕ್ಕಾಗಿ ಸರ್ವೇ ಇಲಾಖೆಯಿಂದ ತರಿಸಿಕೊಂಡಂತಹ ಇಂತಹ ನಕ್ಷೆಗಳನ್ನು ನೋಡಿ ನಾನು ದಂಗಾಗಿದ್ದೆ. ಸೆಟಲೈಟ್, ಗೂಗಲ್ ಮ್ಯಾಪ್ ಇಲ್ಲದ ಆ ಕಾಲದಲ್ಲಿ ನಮ್ಮ ಗಮನಕ್ಕೇ ಬಾರದ ಸಣ್ಣಸಣ್ಣ ಹಳ್ಳಕೊಳ್ಳ, ಕಾಲುವೆ, ಏರು ತಗ್ಗು ಎಲ್ಲವನ್ನೂ ಆ ನಕ್ಷೆಯಲ್ಲಿ ಕರಾರುವಾಕ್ಕಾಗಿ ದಾಖಲಿಸಲಾಗಿತ್ತು.)

ವಿದ್ಯಾನಂದರ ಈ ಉತ್ಪ್ರೇಕ್ಷಿತ ಮಾತುಗಾರಿಕೆಯ ಸಿದ್ಧಾಂತವನ್ನೇ ಕ್ರಿಮಿನಲ್ ನರೇಶ್ ಶೆಣೈನ ಗುರು ಸೂಲಿಬೆಲೆಯಂತಹ ಢೋಂಗಿ ದಗಾಕೋರರು ನಂತರ ಮತ್ತಷ್ಟು ಪರಿಷ್ಕರಿಸಿ ನಂತರದ ದಿನಗಳಲ್ಲಿ ಚೆನ್ನಾಗಿ ಬಳಸಿಕೊಂಡರು. ಕ್ರಿಮಿನಲ್ ನರೇಶ ಶೆಣೈ ಸ್ಥಾಪಿಸಿದ ನಮೋ ಬ್ರಿಗೇಡ್‌ನ ಮುಖ್ಯ ಸಂಪನ್ಮೂಲ ವ್ಯಕ್ತಿ **(Resource person)** ಯೇ ಈ ಸೂಲಿಬೆಲೆ ಅಥವ ಆತನ ನಾಜೂಕುತನದ ಪ್ರಚೋದಕ ಮಾತುಗಳ ತರಬೇತಿ ಪಡೆದಂತಹ ಶಿಷ್ಯಂದಿರು. ದೇಶಪ್ರೇಮ, ಹಿಂದೂಪ್ರೇಮ, ಸೋದರತೆ ಎಂದು ತಮ್ಮವರನ್ನೇ (ವೆಂಕಟರಮಣನ ಪರಮ ಭಕ್ತ ಬಾಳಿಗಾ ಸ್ವತಃ ಬಿಜೆಪಿಯ ಪಕ್ಕಾ ಅನುಯಾಯಿಯಾಗಿದ್ದರು) ನಿರ್ದಯವಾಗಿ ಕೊಲ್ಲಿಸಿದ ಈ ಕ್ರಿಮಿನಲ್ ಪಡೆಗಳ ಮುಖವಾಡ ಇದೀಗ ಬಾಳಿಗಾ ಪ್ರಕರಣದಿಂದ ಕಳಚಿ ಬಿದ್ದಂತಾಗಿದೆ. ಹಿರಿಯ ವಿಚಾರವಾದಿ ನರೇಂದ್ರ ನಾಯಕ್ ಅಂತವರ ಹೋರಾಟ ಇಲ್ಲದಿರುತ್ತಿದ್ದರೆ ಇದೂ ಕೂಡ ಅಸಾಧ್ಯದ ಮಾತಾಗಿರುತಿತ್ತು. ಯಾಕೆಂದರೆ, ಅವರ ಹಣಬಲ ಬ್ರೈನ್‌ವಾಷ್ ಮಾಡಿ ಕಟ್ಟಿದ ಕ್ರಿಮಿನಲ್ ಶೂದ್ರ ಪಡೆ (ಈ ಬಾಳಿಗಾ ಪ್ರಕರಣದಲ್ಲಿ ಮೊದಲಿಗೆ ಕಂಬಿ ಒಳಸೇರಲ್ಪಟ್ಟವರು ಪೂಜಾರಿ, ದೇವಾಡಿಗ, ಕುಲಾಲಗಳೇ ವಿನಃ ಕಾಮತ್-ಶೆಣೈಗಳಲ್ಲ. ಒಂದು ವೇಳೆ ನರೇಂದ್ರ ನಾಯಕ್ ಹಾಗು ಕಮಿಷನರ್ ಚಂದ್ರಶೇಖರ್ ಇಲ್ಲದಿರುತ್ತಿದ್ದರೆ ಈ ಪ್ರಕರಣ ಕೇವಲ ಪೂಜಾರಿ, ದೇವಾಡಿಗಗಳ ತನಕವಷ್ಟೇ ಬಂದು ನಿಲ್ಲುತಿತ್ತು) ಇನ್ನಿತರ ನೆಟ್ ವರ್ಕೇ ಪಾಗಿದೆ. ಅಭಿನಂದನೆಗಳು ಕಮಿಷನರ್ ಚಂದ್ರಶೇಖರ್ ಸರ್!


ಪ್ರೀತಿಪೂರ್ವಕ ಅಭಿನಂದನೆಗಳು.

ಅವಿನಾಶ್ ಎಮ್.ಎಸ್. ನೆಲ್ಲಿಕಾರ್

ಆಪ್ತವಾದ, ಚೇತೋಹಾರಿಯಾದ ಮಕ್ಕಳ ಪುಸ್ತ

ಪುಸ್ತಕ ವಿಮರ್ಶೆ

ಪುಟ್ಟಲಕ್ಷ್ಮಿ ಕಥೆಗಳು
ಲೇಖಕ: ಚಿ.ಹ.ರಘುನಾಥ
ಪ್ರಕಾಶಕರು: ಅಂಕಿತ ಪುಸ್ತಕ
ಪುಟಗಳು: 110 ಬೆಲೆ: ರೂ. 80/-



ಈಚೆಗೆ ಮಕ್ಕಳ ಕತೆಗಳ ಒಂದು ಒಳ್ಳೆಯ-ಪುಸ್ತಕ ಓದಿ ಮುಗಿಸಿದೆ. ಅದರ ಅನುಭವ ಹಂಚಿಕೊಳ್ಳುವುದು ಈ ಟಿಪ್ಪಣಿಯ ಉದ್ದೇಶ. ಕತೆಗಾರರೂ ಪ್ರಬಂಧಕಾರರೂ ಆದ ಚಿ.ಹ.ರಘುನಾಥ್ ಬರೆದ ಪುಸ್ತಕವಿದು. ತಮ್ಮ ಅಪ್ಪನಿಂದ ಕತೆಗಳನ್ನು ಕೇಳಿ ಬೆಳೆದ ಅವರು, ತಮ್ಮ ಮಕ್ಕಳಿಗಾಗಿ ತಾವು ಹಾಗೆ ಕತೆ ಹೇಳಲು ಆಗುತ್ತಿಲ್ಲವಲ್ಲ ಎಂಬ ಕಳವಳ ಮತ್ತು ಆಸ್ಥೆಯಲ್ಲಿ ಈ ಕತೆಗಳನ್ನು ಕಟ್ಟಿದ್ದಾರೆ. ಇವನ್ನು ಮಕ್ಕಳಿಂದ ಓದಿಸಿ ಅವರ ಪ್ರತಿಕ್ರಿಯೆ ಪಡೆದು ತಿದ್ದುಪಡಿ ಮಾಡಿದ್ದಾರೆ. ಅವಕ್ಕೆ ಅರ್ಪಿಸಿಯೂ ಇದ್ದಾರೆ.

ಮೊದಲಿಗೆ ಎದ್ದು ಕಾಣುವುದು ಇಲ್ಲಿನ ಸಹಜತೆ ಮತ್ತು ಸರಳತೆ. ಕನ್ನಡ ಬಲ್ಲ 10-12 ವರ್ಷದ ಮಗು ಓದಿ ಸಂತೋಷಪಡುವಂತೆ ಇಲ್ಲಿನ ಕತೆಗಳು ಹುಟ್ಟಿವೆ. ಇದಕ್ಕೆ ಪೂರಕವಾಗಿ ಪುಟ್ಟಪುಟ್ಟ ವಾಕ್ಯಗಳಿವೆ. ಇಲ್ಲಿನ ಭಾಷೆ ಕೂಡ ಮಕ್ಕಳು ನೀರು ಕುಡಿದಂತೆ ಸರಾಗವಾಗಿವೆ. ಅನಗತ್ಯವಾಗಿ ಶಿಷ್ಟವಾದ ಶುದ್ಧವಾದ ಕನ್ನಡ ಇಲ್ಲಿಲ್ಲ. ಸಾಮಾನ್ಯವಾಗಿ ಮಕ್ಕಳಿಗಾಗಿ ದೊಡ್ಡವರು ಬರೆಯುವ ಬರೆಹಗಳಲ್ಲಿ ಭಾಷೆಯನ್ನು ಕೃತಕವಾಗಿ ಎಳೆತನಕ್ಕೆ ತರಲಾಗಿರುತ್ತದೆ. ಅವುಗಳ ಪ್ರಾಸಗಳು ಕೃತಕವಾಗಿದ್ದು ಸಂವಹನ ಕಷ್ಟವನ್ನು ಕೊಡುತ್ತವೆ. ಆದರೆ ಇಲ್ಲಿ ಪಟ್ಟಣಗಳಲ್ಲಿ ಬೆಳೆದ ಹತ್ತುವರ್ಷದ ಮಗುವೊಂದು ವರ್ತಮಾನದ ಅನೇಕ ಮಾಧ್ಯಮಗಳಿಗೆ ತೆರೆದುಕೊಂಡು ಆಡುವ, ಥ್ಯಾಂಕ್ಸ್ ಬಸ್ಸು ಸಾರಿ ಮಿಸ್ಸು ಇತ್ಯಾದಿಗಳು ಬಿರುಕಿಲ್ಲದೆ ಬೆರೆತುಕೊಂಡಿರುವ ಕನ್ನಡವಿದೆ.

ಮಗುವೊಂದು ತನ್ನ ಸುತ್ತಲಿನ ಪರಿಸರದ ವಿದ್ಯಮಾನಗಳಿಗೆ ಹೇಗೆ ಕಲ್ಪನಾಶಕ್ತಿಯಿಂದಲೇ ಪ್ರತಿಕ್ರಿಯಿಸುತ್ತ ಹೋಗುತ್ತದೆ ಎನ್ನುವುದನ್ನು ಇಲ್ಲಿನ ಪುಟ್ಟಲಕ್ಷ್ಮಿ ಪಾತ್ರ ಚೆನ್ನಾಗಿ ಪ್ರತಿನಿಧಿಸುತ್ತದೆ. ಇಲ್ಲಿ ಮಕ್ಕಳ ಕಲ್ಪನಾಶಕ್ತಿಯ ಭಾಗವಾಗಿ ಬಂದಿರುವ ಫ್ಯಾಂಟಸಿ ಪರಿಣಾಮಕಾರಿಯಾಗಿದೆ. ಈ ಫ್ಯಾಂಟಸಿಯಲ್ಲಿ ಮಂಚದ ಕಾಲು ತನ್ನ ಆತ್ಮಕತೆ ಹೇಳುತ್ತದೆ. ಜಾಮಿಟ್ರಿ ಬಾಕ್ಸಿನಲ್ಲಿದ್ದ ಪ್ರಾಣಿಬೊಂಬೆಗಳು ಜೀವ ತಳೆಯುತ್ತವೆ. ರೋಡು ಮಾತಾಡುತ್ತದೆ. ಪಾಣಿ, ತರಕಾರಿಗಳು ಮನುಷ್ಯರ ಹಾಗೆ ಮಗುವಿನ ಜತೆ ಮಾತಾಡುತ್ತವೆ. ಮಕ್ಕಳ ಕತೆಗಳಲ್ಲಿ ಫ್ಯಾಂಟಸಿ ಸಾಮಾನ್ಯವಾದುದು. ಆದರೆ ಈ ಫ್ಯಾಂಟಸಿ ಪುಟ್ಟಲಕ್ಷ್ಮಿಯ ಮುಗ್ಧತೆಯನ್ನೇ ಉಳಿಸಿಕೊಂಡಿವೆ. ಜೀವಗೊಂಡು ಮಾತಾಡುವ ವಸ್ತುಗಳ ಜತೆ ಮಗು ಸ್ನೇಹ ಮಾಡುತ್ತದೆ. ಅವುಗಳಿಂದ ಕಲಿಯುತ್ತ ಹೋಗುತ್ತದೆ. ಇಲ್ಲಿನ ಕತೆಗಳಲ್ಲಿ ಚಂದ್ರ ತಾರೆಗಳು ಹೇಗೆ ಹುಟ್ಟಿದವು ಎಂಬ ಕತೆಯ ಕಲ್ಪನಾಶಕ್ತಿ ಬಹಳ ಚೆನ್ನಾಗಿದೆ. ಕನ್ನಡ ಜನಪದ ಕತೆಗಳಲ್ಲಿರುವ ಸಮೃದ್ಧವಾದ ಇಂತಹ ಫ್ಯಾಂಟಸಿಯನ್ನು ನಮ್ಮ ಲೇಖಕರು ಮಕ್ಕಳಿಗೆ ಮರುಕಟ್ಟುವ ಮೂಲಕ ಒದಗಿಸುವ ಅಗತ್ಯವಿದೆಯೆಂದು ಅನಿಸುತ್ತದೆ.

ಈಚೆಗೆ ಮಧ್ಯಮವರ್ಗದವರಲ್ಲಿ ಎಚ್ಚರಗೊಂಡಿರುವ ಪರಿಸರ ಪ್ರಜ್ಞೆಯು ಗಿಡಮರ ಕಡಿಯದಂತೆ ಕಾಪಾಡಬೇಕು ಎಂಬುದಕ್ಕೆ ಸೀಮಿತವಾಗಿದೆ. ಅದು ಮನುಷ್ಯರ ಜತೆ ನಮ್ಮ ಸಂಬಂಧ ಹೇಗಿರಬೇಕು ಎಂಬ ಅರಿವನ್ನು ಬಿಟ್ಟುಕೊಂಡು ತುಸು ಅ-ಮಾನುಷವೂ ಆಗಿದೆ. ಆದರೆ ಇಲ್ಲಿ ಪುಟ್ಟಲಕ್ಷ್ಮಿಯ ಮೂಲಕ ಪ್ರಕಟವಾಗುವ ಪರಿಸರಪ್ರಜ್ಞೆಯು ಮಾನವರನ್ನು ಒಳಗೊಂಡಿರುವ ನಿಸರ್ಗದ ಜತೆ ಸಂಬಂಧವನ್ನು ಬೆಸೆಯುತ್ತದೆ. ಪರಿಸರ ಎಂದರೆ ಗಿಡಮರ ಪ್ರಾಣಿಪಕ್ಷಿ ಬೆಟ್ಟನದಿಗಳ ಪ್ರೀತಿ ಎಂಬ ಸರಳೀಕೃತ ವ್ಯಾಖ್ಯಾನಕ್ಕೆ ಇಳಿದಿಲ್ಲ. ಇಲ್ಲಿ ಪ್ರಕೃತಿಯು ಸಂಬಂಧದಷ್ಟೆ ಪುಟ್ಟಲಕ್ಷ್ಮಿಯ ಮನುಷ್ಯ ಸಂಬಂಧಗಳು ಕುಟುಂಬದ ಜತೆಗಿನ ಬೀದಿಯೊಳಗಿನ ತರಗತಿ ಗೆಳೆಯರ ಸಂಬಂಧಗಳು ಮಾನವೀಯವಾಗಿ ಕೂಡಿವೆ. ಮಗುವಿನ ಜತೆಗೆ ನಿಸರ್ಗದ ಮತ್ತು ಸಮಾಜದ ಸಂಬಂಧವನ್ನು ಬೆಸೆಯುವ ಬಗೆ ಪ್ರಿಯವಾಗುತ್ತದೆ. ಮಕ್ಕಳಿಗೆ ಪರಿಸರ ಪ್ರಜ್ಞೆಯನ್ನು ನೀತಿಪಾಠದ ಹಾಗೆ ತುರುಕುತ್ತ ನಮ್ಮ ಪಠ್ಯಪುಸ್ತಕಗಳನ್ನು ಈಚೆಗೆ ಭಾರ ಮಾಡಲಾಗುತ್ತಿದೆ. ಚಿಕ್ಕಮಗುವೊಂದರ ಸಹಜ ಅನುಭವ ಮುಗ್ಧತೆ ಸೂಕ್ಷ್ಮತೆ ಆತಂಕ ತಲ್ಲಣಗಳ ಮೂಲಕ ಪರಿಸರವನ್ನು ನೋಡುವ, ಹಾಗೆ ನೋಡುತ್ತ ಅದರ ಆಲೋಚನೆಯಲ್ಲಿ ಆಗುವ ಪಲ್ಲಟಗಳನ್ನು ತರುವ ಇಲ್ಲಿನ ಪರಿ ಇಷ್ಟವಾ

ಇದು ನಗರದ ಮಗುವಿನ ಅನುಭವದ ಮೂಲಕ ದ
ಕಥನವಾಗಿದೆ. ಕನ್ನಡ ಓದುವ ಗ್ರಾಮೀಣ ಪರಿ
ಬೆಳೆದ ಮಗುವಿಗೆ ಇದು ಯಾವ ಅನುಭವ ಕೊ
ಎನ್ನುವುದು ಕುತೂಹಲ ಹುಟ್ಟಿಸುತ್ತದೆ.

ಸಾಮಾನ್ಯವಾಗಿ ಮಕ್ಕಳ ಕತೆಗಳಲ್ಲಿ ಹುಡ
ಕೇಂದ್ರಪಾತ್ರವಾಗಿ ಇರುತ್ತಾನೆ. ಆದರೆ ಈ ಕ
ಹೆಣ್ಣುಮಗುವಿನ ಪಾತ್ರದ ಮೂಲಕ ಹುಟ್ಟಿವೆ. ಇ
ಇಲ್ಲಿನ ಕಥನಕೊಂದು ವಿಶಿಷ್ಟ ಆರ್ದ್ರತೆ ಬಂದು
ಒಂದು ಕತೆಯಲ್ಲಿ ಪಕ್ಕದ ಬೀದಿಯ ಒಂದು
ಹುಟ್ಟಿರುವ ಮೊಮ್ಮಗುವನ್ನು ನೋಡಲು ಪು
ತನ್ನ ಅಜ್ಜಿ ರತ್ನಮ್ಮಜ್ಜಿಯ ಜತೆಗೆ ಹೋಗುವ ಸನ್ನಿವೇ
ಇಲ್ಲಿ ನೋಡಲು ಹೋಗುವ ಮೂರು ತಲೆ
ಜೀವಗಳೂ ಹೆಣ್ಣುಗಳಾಗಿವೆ ಎಂಬುದು
ಉದ್ದೇಶಪೂರ್ವಕವಾದ ಕಟ್ಟೋಣ ಅನಿಸುತ್ತದೆ.
ಅದು ಕೃತಕವಾಗಿಲ್ಲ ಮತ್ತು ಅಗತ್ಯವೂ ಆಗಿದೆ. ಹೆಣ್ಣ
ಮೂಲಕ ಕಾಣುವ ಲೋಕಕ್ಕೆ ಇರುವ ಎಲ್ಲ ಸೌಂದರ್ಯ
ಇಲ್ಲಿ ಅವತರಿಸಿವೆ.

ಈ ಕತೆಗಳನ್ನು ಓದಿ ಮುಗಿಸಿದಾಗ ಜೀವ
ಪುಟ್ಟಲಕ್ಷ್ಮಿಯ ಪಾತ್ರವು ಮನಸ್ಸಿನಲ್ಲಿ ಉಳಿದುಬಿ
ಈ ಹೆಸರು ಅವಳ ವಯಸ್ಸು ಮುಗ್ಧತೆ ಚೂಟಿತ

ಪೂರ್ವಗ್ರಹಗಳ ಪಾದಕ್ಕೆ ಮಾಧ್ಯಮ ಎರಗಬಹುದೇ


ಯಾವುದೇ ವ್ಯಕ್ತಿಯ ಖಾಸಗಿ ಬದುಕು ಗೌರವಿಸುವ ಮತ್ತು ಅದರಿಂದ ಅಂತರ ಕಾಯ್ದುಕೊಳ್ಳುವ ಸಂಯಮ ನಮ್ಮಲ್ಲಿ ತೆಳುವಾಗುತ್ತಿದೆಯೇ? ಇತ್ತೀಚೆಗಿನ ಕೆಲ ವಿದ್ಯಮಾನಗಳಿಗೆ ಸಿಕ್ಕ ಪ್ರಚಾರ ಮತ್ತು ಅದರಿಂದ ವ್ಯಕ್ತವಾಗಲಾರಂಭಿಸಿರುವ ಪ್ರತಿಕ್ರಿಯೆಗಳನ್ನು ಗಮನಿಸಿದರೆ ಈ ಮೇಲಿನ ಪ್ರಶ್ನೆ ಎದುರುಗೊಳ್ಳುತ್ತದೆ.

ವಯಸ್ಸು ಅರವತ್ತು ವರ್ಷ ಮೀರಿದ ವ್ಯಕ್ತಿಯೊಬ್ಬರು ಇಪ್ಪತ್ತೆಂಟರ ಆಸುಪಾಸಿನ ಯುವತಿಯನ್ನು ಮದುವೆಯಾಗಲು ಮುಂದಾದದ್ದು ಮಾಧ್ಯಮಗಳ ಪಾಲಿಗೆ ಅಸಹನೀಯ ವಿದ್ಯಮಾನವಾಗಿ ಏಕೆ ಗೋಚರಿಸಿತು? ಒಂದುವೇಳೆ ಈ ಮದುವೆ ಪರಸ್ಪರರ ಒಪ್ಪಿಗೆಯ ಮೇರೆಗೆ ನೆರವೇರದೆ ಹೋಗಿದ್ದ ಪಕ್ಷದಲ್ಲಿ ಯುವತಿಗೆ ನ್ಯಾಯ ಒದಗಿಸುವ ನೆಪವನ್ನಾದರೂ ಮುಂದಿಟ್ಟುಕೊಂಡು ಅವರಿಬ್ಬರ ಖಾಸಗಿ ಬದುಕಿನಲ್ಲಿ ಹಸ್ತಕ್ಷೇಪ ಮಾಡುವ ಅಧಿಕಾರವನ್ನು ಮಾಧ್ಯಮಗಳು ಅದ್ಹೇಗೊ ದಕ್ಕಿಸಿಕೊಂಡುಬಿಡುತ್ತಿದ್ದವು. ಆದರೆ ಈ ಪ್ರಕರಣದಲ್ಲಿ ಯುವತಿ ತಾವಿಬ್ಬರು ಪರಸ್ಪರ ಪ್ರೀತಿಸಿ ಮದುವೆಯಾಗಿದ್ದೇವೆ ಎಂದು ಸಾರಿದರೂ, ಅವರಿಬ್ಬರನ್ನು ಅವರ ಪಾಡಿಗೆ ಬಿಡುವ ಸೌಜನ್ಯ ತೋರುವ ಗೋಜಿಗೆ ದೃಶ್ಯ ಮಾಧ್ಯಮ ಹೋಗಲೇ ಇಲ್ಲ. ಈ ವಿಚಾರದಲ್ಲಿ ಮುದ್ರಣ ಮಾಧ್ಯಮ ಕೂಡ ಹಿಂದೆ ಬೀಳಲು ಹಿಂಜರಿದದ್ದು ಗಮನಾರ್ಹ.

ಕಾನೂನು ಸಮ್ಮತಿಸುವ ಯಾವುದೇ ವಯಸ್ಸಿನಲ್ಲಿ ಹೆಣ್ಣು ಹಾಗು ಗಂಡು ಮದುವೆಯಾದರೆ ಅದನ್ನು ಮಾಧ್ಯಮವೂ ಒಳಗೊಂಡಂತೆ ಉಳಿದವರೆಲ್ಲರೂ ಏಕೆ ಗೇಲಿಯ ವಿಷಯವಾಗಿ ಪರಿಗಣಿಸಬೇಕು? ಕಣ್ಣೆದುರೇ ಜರುಗುವ ಬಾಲ್ಯ ವಿವಾಹಗಳಿಗೆ ಹಾಗು ಗಂಡು-ಹೆಣ್ಣು ಪರಸ್ಪರ ಒಪ್ಪದೇ ಆಗುವ ವಿವಾಹಗಳಿಗೂ ತನ್ನದೇ ಆದ ನೂರೆಂಟು ಕಾರಣಗಳನ್ನು ಮುಂದಿಟ್ಟುಕೊಂಡು ಸಮ್ಮತಿಯ ಮುದ್ರೆ ಒತ್ತುವ ಸಮಾಜಕ್ಕೆ, ಸಾಕಷ್ಟು ವಯಸ್ಸಿನ ಅಂತರವಿದ್ದಾಗ್ಯೂ ಪರಸ್ಪರ ಪ್ರೀತಿಸಿ ಕೆಲವರು ಒಂದಾಗಿ ಬಾಳುವ ನಿರ್ಣಯ ಕೈಗೊಂಡರೆ ಅದನ್ನು ಗೌರವಿಸಬೇಕೆಂದು ಏಕೆ ಅನಿಸುವುದಿಲ್ಲ?

ಕೆಲ ತಿಂಗಳುಗಳ ಹಿಂದೆ ಅನ್ಯಜಾತಿಯ ಯುವಕನನ್ನು ತಮ್ಮ ಮಗಳು ಪ್ರೀತಿಸುತ್ತಿದ್ದಾಳೆಂದು ತಿಳಿದು ಮರ್ಯಾದೆಗೆ ಅಂಜಿ ಪೋಷಕರಿಬ್ಬರು ಆತ್ಮಹತ್ಯೆಗೆ ಶರಣಾದ ಸಂದರ್ಭದಲ್ಲೂ ಕೆಲ ಮಾಧ್ಯಮಗಳು ಪೋಷಕರ ದುಡುಕು ನಿರ್ಧಾರ ವಿಮರ್ಶಿಸುವ ಬದಲಾಗಿ ಜಾತಿಮೀರಿ ಪ್ರೀತಿಸಿದ ಯುವತಿಯನ್ನೇ ಎಲ್ಲದಕ್ಕೂ ಹೊಣೆಯಾಗಿಸಿದ್ದು ಏನನ್ನು ಸೂಚಿಸುತ್ತದೆ? ಸಮಾಜದಲ್ಲಿ ಬೇರೂರಿರುವ ಮನುಷ್ಯ ಘನತೆಗೆ ಬೆನ್ನು ತೋರುವ ಮನಸ್ಥಿತಿಯನ್ನೇ ಸಾಮಾಜಿಕ ಮೌಲ್ಯವಾಗಿ ಬಿಂಬಿಸಿ, ತಾವು ಆ ಮೌಲ್ಯದ ಉಳಿವಿಗಾಗಿ ದನಿ ಎತ್ತುತ್ತಿದ್ದೇವೆ ಎನ್ನುವ ಧಾಟಿಯನ್ನು ದೃಶ್ಯ ಮಾಧ್ಯಮ ಆವಾಹಿಸಿಕೊಳ್ಳುವುದು ಟಿಆರ್‌ಪಿಗಾಗಿಯೋ ಅಥವಾ ತಮಗಿರುವ ಅದಮ್ಯ ಸಾಮಾಜಿಕ ಕಳಕಳಿ(?)ಗಾಗಿಯೋ ಎಂಬುದನ್ನು ತಿಳಿಯುವುದು ಕಷ್ಟವೇನಲ್ಲ. ಸಮಾಜದ ಪೂರ್ವಗ್ರಹಗಳಿಗೆ ಪೂರಕವಾದ ನಿಲುವು ತಳೆಯುವುದು ಹೆಚ್ಚು ಲಾಭದಾಯಕವೆನ್ನುವ ಭಾವನೆ ದೃಶ್ಯ ಮಾಧ್ಯಮ ವಲಯದಲ್ಲಿ ಬೇರೂರಿದೆಯೇ? ಇದರ ದುಷ್ಪರಿಣಾಮಗಳ ಅರಿವಿಲ್ಲವೇ?


'ಅಪೂರ್ವ' ಪ್ರೇಮ ಕಥೆ ಎಂದೇ ಪರಿಗಣಿಸಲ್ಪಟ್ಟ ಇತ್ತೀಚೆಗಿನ ಪ್ರಕರಣ ಪರಿಚಿತ ವಲಯದಲ್ಲಿನ ಕೆಲವರ ಬದುಕಿನ ಮೇಲೆ ಬೀರಲಾರಂಭಿಸಿರುವ ವ್ಯತಿರಿಕ್ತ ಪರಿಣಾಮ ಇಲ್ಲಿ ಉಲ್ಲೇಖನಾರ್ಹ.




ಬದುಕಿನುದ್ದಕ್ಕೂ ಸಮಾಜಮುಖಿಯಾಗಿಯೇ ಇರುವ ಪರಿಚಿತರೊಬ್ಬರು ತಮ್ಮ ಐವತ್ನಾಲ್ಕನೇ ವಯಸ್ಸಿನವರೆಗೂ ಮದುವೆಯಾಗದೆ ಅವಿವಾಹಿತರಾಗಿಯೇ ಉಳಿದಿದ್ದರು. ಕಳೆದ ವರ್ಷ ಇದ್ದಕ್ಕಿದ್ದಂತೆಯೇ ಇಪ್ಪತ್ತೆಂಟರ ವಯೋಮಾನದ ಯುವತಿಯನ್ನು ಪ್ರೀತಿಸಿ ಮದುವೆಯಾದರು. ಮದುವೆಯ ವಿಚಾರ ಹೊರ ಜಗತ್ತಿಗೆ ತಿಳಿದ ಪ್ರಾರಂಭದ ದಿನಗಳಲ್ಲಿ ಅವರಿಬ್ಬರು ಎಲ್ಲರ ಪಾಲಿಗೂ ಗೇಲಿಗೆ ಸರಕಾಗಿದ್ದರು. ಆನಂತರ ಈ ವಿಚಾರ ತಣ್ಣಗಾಗಿತ್ತು. ಅವರು ಕೂಡ ತಮ್ಮನ್ನು ಸುತ್ತುವರೆದ ಅಸಹನೆಯ ವರ್ತುಲ

ಬಿಡುಗಡೆ ಹೊಂದುವ ಪ್ರಯತ್ನದಲ್ಲಿದ್ದರು. ಆದರೆ ಇ
'ಅಪೂರ್ವ' ಪ್ರೇಮವೆಂದು ವ್ಯಂಗ್ಯವಾಗಿ ಬಿಂಬ
ಪ್ರಕರಣಕ್ಕೆ ಸಿಕ್ಕ ನಕಾರಾತ್ಮಕ ಪ್ರಚಾರದ ದೆಸೆಯಿ
ಇವರು ಕೂಡ ಮಾನಸಿಕವಾಗಿ ಸಾಕಷ್ಟು
ಅನುಭವಿಸಬೇಕಾದ ಪರಿಸ್ಥಿತಿ ಎದುರಾಗಿದೆ.
ಹೋಗಿದ್ದ ಇವರಿಬ್ಬರ ಮದುವೆಯ ವಿಚಾರವೂ ಮ
ಮುನ್ನೆಲೆಗೆ ಬಂದು ಎಲ್ಲರ ವಕ್ರದೃಷ್ಟಿಗೂ ತುತ್ತಾ

ನಮ್ಮ ಸಮಾಜದಲ್ಲಿ ವರನಿಗಿಂತ ವಧುವಿನ ವ
ಕಡಿಮೆ ಇರಬೇಕೆಂಬ ನಿಲುವು ಬಲವಾಗಿದೆ. ಮೊ
ಕನಿಷ್ಠವೆಂದರೂ ಮೂರು ವರ್ಷಕ್ಕೆ ಸೀಮಿತಗೆ





...ಕವಾಗಿವೆ. ಇದಕ್ಕೆ ಪೂರಕವಾಗಿ ಕಠಿಣವಾದ ...ಗಳಿಲ್ಲದ ಪುಟ್ಟಪುಟ್ಟ ವಾಕ್ಯಗಳಲ್ಲಿ ಕತೆಗಳು ಹುಟ್ಟಿ ...ಯುತ್ತವೆ. ಕರ್ನಾಟಕದ ಮಕ್ಕಳ ಭಾವಕೋಶದಲ್ಲಿ ...ಗ ಮನೆಮಾತಲ್ಲಿರುವ ಸಂಖ್ಯೆ (ಒಂದು ಎರಡು) ... (ಹಸಿರು ಹಳದಿ ಬಿಳಿ) ಮತ್ತು ಕೆಲವು ...ಂಧವಾಚಕಗಳನ್ನು (ಚಿಕ್ಕಮ್ಮ ದೊಡ್ಡಪ್ಪ) ಕಳೆದುಹೋಗಿವೆ. ...ತಹ ಹೊತ್ತಲ್ಲಿ ಅಪ್ಪ-ಅಮ್ಮ-ಅಜ್ಜಿಯರ ಜತೆ ...ಸಂಬಂಧಗಳು ಇನ್ನೂ ಕಳಚಿಕೊಂಡಿರದ ಒಂದು ...ಸುವಿನ ಮೂಲಕ ಲೋಕವನ್ನು ಕಾಣಿಸುವ ಕತೆಗಳ ...ಸ್ತಕವೊಂದು ಬಂದಿದೆ. ಈ ಕತೆಗಳನ್ನು ಕಾಣುವಾಗ, ...ಳ ಸಾಹಿತ್ಯ ಪ್ರಕಾರವನ್ನು ನಿರ್ಲಕ್ಷ್ಯ ಮಾಡಿ ಕರುಣೆಯಿಂದ ...ೀಡುತ್ತ ಅಥವಾ ಅದನ್ನು ಬರೆಯುವುದು ಶಿಕ್ಷಕ ...ಂತಿಗಳ ಕೆಲಸ ಎಂದು ಬಿಟ್ಟುಕೊಟ್ಟಿರುವ ನಮ್ಮ ...ಖಕರು ಮಕ್ಕಳಿಗೆ ಅನ್ಯಾಯ ಮಾಡಿದರು. ತಮಗೂ ...ನ್ಯಾಯ ಮಾಡಿಕೊಂಡರು ಅನಿಸುತ್ತದೆ. ಮಹಾಕಾವ್ಯ ...ದ ಕುವೆಂಪು, ಕಾದಂಬರಿಕಾರ ಕಾರಂತ ಮಕ್ಕಳಿಗಾಗಿ ...ಯುವುದನ್ನು ಚಿಕ್ಕಕೆಲಸ ಎಂದು ಭಾವಿಸಲಿಲ್ಲ. ಆದರೆ ...ಸತಲೆಮಾರಿನ ಲೇಖಕರಲ್ಲಿ ಮಕ್ಕಳಿಗೆ ಬರೆಯುವುದು ...ಕೆ ಬೇಡವೆನಿಸಿದೆ. ಮಕ್ಕಳಿಗಾಗಿ ಬರೆಯುವುದು ...ಲಭವಲ್ಲ. ನಾವು ಕಳೆದುಕೊಂಡ ಬಾಲ್ಯಕ್ಕೆ ...ರಳಬೇಕಾಗುತ್ತದೆ. ಅದರಲ್ಲಿ ನಮ್ಮ ಮಕ್ಕಳ ಮೊಮ್ಮಕ್ಕಳ ...ಲ್ಯವನ್ನು ಕಸಿಗೊಳಿಸಬೇಕಾಗುತ್ತದೆ. ಈ ಕೆಲಸವನ್ನು ...ಡದ ಲೇಖಕರಲ್ಲಿ ಕೆಲವರು ಮಾಡುತ್ತಿದ್ದಾರೆ. ಅವರುಗಳಲ್ಲಿ ...ನಾಥ ಕೂಡ ಒಬ್ಬರು. ಈ ಪುಸ್ತಕ ಆಪ್ತವಾಗಿದೆ ...ತೋಹಾರಿಯಾಗಿದೆ. ಪುಸ್ತಕ ಓದಿದ ಬಳಿಕ ...ಮ್ಮೊಳ್ಳೊಂದು ಪುಟ್ಟಲಕ್ಷ್ಮಿ ಎಂಬ ಮುದ್ದಾದ ಚೂಟಿಯಾದ ...ಗು ಅಗಲದೆ ನೆಲೆಸುವ ಪಾತ್ರವಾಗುತ್ತದೆ. ಮಕ್ಕಳನ್ನು ...ರ್ಟೂನ್ ನೋಡಲು ಟಿವಿ ಮುಂದೆ ಕೂರಿಸುವ, ಅವಕ್ಕೆ ...ಯ್‌ಗನ್, ಟಾಯ್ ಟ್ಯಾಂಕ್‌ಗಳನ್ನು ಆಟಿಕೆಯಾಗಿ ...ಡಿಸುವ ಬದಲು ಇಂತಹ ಪುಸ್ತಕಗಳನ್ನು ಅವರ ...ಮುಂದಿಡುವ ಅಗತ್ಯವಿದೆ.

● ರಹಮತ್ ತರೀಕೆರೆ

...ಯಸ್ಸಿನ ಅಂತರ, ಬದಲಾದ ಸಾಮಾಜಿಕ ಸಂರಚನೆಯ ...ಣಾಮವಾಗಿ ಈಗೀಗ ವಧು-ವರ ಇಬ್ಬರೂ ಸಮಾನ ...ಯಸ್ಕರಾಗಿದ್ದರೂ ಸಮಾಜದ ಸಮ್ಮತಿ ದೊರೆಯುತ್ತಿದೆ. ...ದೇ ಒಂದುವೇಳೆ ಮದುವೆಯಾಗುವ ಹುಡುಗನಿಗಿಂತ ...ಡುಗಿಗೆ ಹೆಚ್ಚು ವಯಸ್ಸಾಗಿದ್ದರೆ ಅದು ಸಮಾಜದ ...ಲಿಗೆ ಸುಲಭವಾಗಿ ಜೀರ್ಣಿಸಿಕೊಳ್ಳಲಾಗದ ಸಂಗತಿಯಾಗಿ ...ೀರುತ್ತದೆ. ಹಾಗಾಗಿಯೇ ಇಂದಿಗೂ ಜನಪ್ರಿಯ ...ಂಪತಿಗಳಾದ ಅಂಜಲಿ-ಸಚಿನ್ ತೆಂಡೂಲ್ಕರ್, ...ಶ್ವರ್ಯ-ಅಭಿಷೇಕ್ ಬಚ್ಚನ್ ಇನ್ನು ಮುಂತಾದವರ ...ರಿತು ನಮ್ಮ ಗಮನ ವಿಶೇಷವಾಗಿ ಹರಿಯುತ್ತದೆ.


ಅಷ್ಟಕ್ಕೂ ವರನಿಗಿಂತ ವಧು ವಯಸ್ಸಿನಲ್ಲಿ ...ಕ್ಕವಳಾಗಿರಬೇಕೆಂಬ ಅಂಶ ಮದುವೆ ಸಂದರ್ಭದಲ್ಲಿ ...ಮುಖ ಅರ್ಹತೆಯಾಗಿ ಬಿಂಬಿತಗೊಳ್ಳುವ ಹಿನ್ನೆಲೆಯಲ್ಲಿ ...ರಬಹುದಾದ ಮನಸ್ಥಿತಿಯಾದರೂ ಯಾವುದು? ...ಯಸ್ಸಿನಲ್ಲಿ ತನಗಿಂತ ಎರಡು-ಮೂರು ವರ್ಷ ...ೊಡ್ಡವಳಾದ ಯುವತಿಯನ್ನು ಪ್ರೀತಿಸಿದ ಕಾರಣಕ್ಕೆ ತನ್ನ ...ಮ ವಿವಾಹಕ್ಕೆ ಮನೆಯವರ ಅನುಮತಿ ದಕ್ಕಿಸಿಕೊಳ್ಳಲು ...ತ ಸ್ನೇಹಿತನಿಗೆ ಅವರ ಪೋಷಕರು ಹೇಳಿದ ಕಿವಿಮಾತು ...ಮ್ಮ ಸಮಾಜದಲ್ಲಿ ಬೇರೂರಿರುವ ಪುರುಷ ಪ್ರಧಾನ ...ನಸ್ಥಿತಿಗೂ ಕನ್ನಡಿ ಹಿಡಿಯಬಹುದೇನೊ?

"ನೀನು ಅವಳನ್ನು ಮದುವೆ ಆದ್ರೆ ಜೀವನವಿಡೀ ...ವಳ ಗುಲಾಮನಾಗಿಯೇ ಬದುಕಬೇಕಾಗುತ್ತೆ" ಎನ್ನುವ ...ಚ್ಚರಿಕೆ ರೂಪದ ಆಕ್ಷೇಪವನ್ನು ಸ್ನೇಹಿತನ ತಂದೆ ...ೊರಗೆಡಹಿದ್ದರು. ತನಗೆ ಹೆಂಡತಿಯ ಗುಲಾಮನಾಗಿರಲು ...ಯಾವುದೇ ಅಭ್ಯಂತರವಿಲ್ಲವೆಂದ ಅವನ ಮಾತು ಕೇಳಿ ...ಸಿಟ್ಟು ಸಿಡಿಮಿಡಿಗೊಂಡಿದ್ದ ಅವರು, ಇನ್ನು ಏನೇನೋ ...ಳಿ ತಮ್ಮ ಮಗನ ಮನವೊಲಿಸುವ ವ್ಯರ್ಥ ಕಸರತ್ತು ...ಡೆಸಿದ್ದರು. ಹುಡುಗ ಹುಡುಗಿಗಿಂತ ಹಿರಿಯನಾಗಿದ್ದರೆ ...ವಳನ್ನು ಹದ್ದುಬಸ್ತಿನಲ್ಲಿ ಇಟ್ಟುಕೊಳ್ಳಬಹುದೆನ್ನುವ ಮನಸ್ಥಿತಿ ...ದಕ್ಕೆಲ್ಲ ಕಾರಣವಲ್ಲವೇ?

ಎರಡು ಕುಟುಂಬಗಳ ಪರಸ್ಪರ ಸಮ್ಮತಿಯ ಮೇಲೆ ...ಡೆಯುವ ಸಾಂಪ್ರದಾಯಿಕ ಮದುವೆಗಳು ನಾನಾ ...ರಣಗಳಿಗಾಗಿ ಮುರಿದುಬಿದ್ದರೂ ಅದನ್ನು ನಮ್ಮ ಸಮಾಜ ...ಶೇಷ ವಿದ್ಯಮಾನವಾಗಿ ಗಮನಿಸಲು ಬಯಸದು. ಜಾತಿ, ...ರ್ಮ, ವಯಸ್ಸು ಮತ್ತು ಅಂತಸ್ತಿನ ತಡೆಗೋಡೆಗಳನ್ನು ...ಡೆದು ಬಾಳಸಂಗಾತಿಗಳಾದವರು ಮುಂದೆ ಬೇರೆಯಾದರೆ, ...ದು ಹೀಗೆ ಮುರಿದು ಕಟ್ಟುವ ಕ್ರಿಯೆಯಲ್ಲಿ ...ೊಡಗಿಕೊಳ್ಳುವವರ ಪಾಲಿಗೆ ದೊಡ್ಡ ಪಾಠವಾಗಲೆಂದು ...ಮಾಜ ಬಯಸುತ್ತದೆ. ಹಾಗೆ ಬಯಸುವ ಪೂರ್ವಗ್ರಹ ...ೀಡಿತ ಸಮಾಜದ ಮನಸ್ಥಿತಿಯನ್ನೇ ಎತ್ತಿ ಓದಿಯುವ ...ಾಣಿಕವೇ 'ಉತ್ತಮ ಸಮಾಜ' ರೂಪಿಸಲು ಹೊರಡುವ ...ಪ್ರೆ ಮಾಧ್ಯಮಕ್ಕೆ ಆತ್ಮವಿಮರ್ಶೆ ಮಾಡಿಕೊಳ್ಳಬೇಕೆಂದು ...ನಿಸುವುದಾದರೂ ಯಾವಾಗ!

● ಎಚ್.ಕೆ. ಶರತ್, ಹಾಸನ

ಮುಸ್ಲಿಮ್ ಮಹಿಳೆಯರಿಗೆ ನ್ಯಾಯ ಸಿಗುತ್ತಿಲ್ಲ



ಇಂಡಿಯಾ ದೇಶವು ಜಾತ್ಯತೀತವಾದ, ಪ್ರಜಾಪ್ರಭುತ್ವದ ಆಡಳಿತವಿರುವ ದೇಶವಾಗಿದೆ. ಈ ದೇಶಕ್ಕೆ ಬಾಬಾ ಸಾಹೇಬ್ ಅಂಬೇಡ್ಕರ್ ಅವರು ಅತ್ಯುತ್ತಮ ಸಂವಿಧಾನ ರಚಿಸಿಕೊಟ್ಟಿದ್ದಾರೆ. ನಮ್ಮ ಸಂವಿಧಾನಕ್ಕೆ ಜಾಗತಿಕ ಮನ್ನಣೆ ಇದೆ. ಈ ದೇಶದ ಹೆಣ್ಣುಗಂಡುಗಳಲ್ಲಿ ಸಂವಿಧಾನಕ್ಕನುಗುಣವಾಗಿ ಯಾವುದೇ ರೀತಿಯ ತಾರತಮ್ಯವೂ ಇಲ್ಲ. ಜಾತಿಧರ್ಮಗಳಲ್ಲಿ, ಮನುಷ್ಯರ ಬಣ್ಣ ಮತ್ತು ರೂಪಗಳಲ್ಲಿಯೂ ಯಾವುದೇ ತಾರತಮ್ಯವಿಲ್ಲ. ಈ ಸಂವಿಧಾನದ ಅಡಿಯಲ್ಲಿ ಸರ್ವರೂ ಸಮಾನರಾಗಿದ್ದು ಸರ್ವರಿಗೂ ಸಮಾನ ಸೌಲಭ್ಯಗಳೂ, ಸಮಾನ ಅವಕಾಶಗಳೂ ಇವೆ.

ಎಲ್ಲರಿಗೂ ಏಕಪ್ರಕಾರವಾಗಿ ಸಮಾನ ಸೌಲಭ್ಯಗಳೂ, ಸಮಾನ ಅವಕಾಶಗಳೂ ಇದ್ದರೂ ಕೆಲವೊಮ್ಮೆ ಜಾತಿ, ಧರ್ಮಗಳ ಹೆಸರಿನಲ್ಲಿ ಈ ಸಮಾನತೆಯಿಂದ ಮಹಿಳೆಯರನ್ನು ಹೊರಗಿಡಲಾಗಿದೆ. ಈ ತಾರತಮ್ಯದಿಂದಾಗಿ ಸಮಾನತೆಯನ್ನು ಸಾರುವ ಈ ಸಂವಿಧಾನದ ಅಡಿಯಲ್ಲಿ ಮುಸ್ಲಿಂ ಮಹಿಳೆಯರು ಪುರುಷರಿಂದ ದೌರ್ಜನ್ಯ ಮತ್ತು ಶೋಷಣೆಗೆ ಒಳಗಾಗುತ್ತಿದ್ದಾರೆ.

ನಮ್ಮ ದೇಶದ ಸಂವಿಧಾನದಂತೆ ಮುಸ್ಲಿಮೇತರ ಮಹಿಳೆಯರಿಗೆ ಗಂಡನು ವಿಚ್ಛೇದನ ನೀಡುವುದು ಸುಲಭವಲ್ಲ. ಜೀವನಾಂಶ ನೀಡದಿದ್ದರೆ ಆಕೆ ನ್ಯಾಯಾಲಯದಲ್ಲಿ ಪ್ರಶ್ನಿಸಬಹುದಾದಂತಹ ವೈವಾಹಿಕ ಭದ್ರತೆ ಇದೆ. ಮುಸ್ಲಿಂ ಮಹಿಳೆಯರ ಪರಿಸ್ಥಿತಿ ಇದಕ್ಕೆ ತೀರಾ ಭಿನ್ನವಾದುದಾಗಿದೆ.

ಮುಸ್ಲಿಮರಲ್ಲಿ ವಿವಾಹ ವಿಚ್ಛೇದನವೆಂಬುದು ಪುರುಷನ ಏಕಸ್ವಾಮ್ಯ ವ್ಯವಹಾರವಾಗಿದೆ. ಅವನು ಯಾವಾಗ ಬೇಕಾದರೂ ಬಾಯಿಮಾತಿನಲ್ಲಿ ಹೆಂಡತಿಯ ಹೆಸರನ್ನುಚ್ಚರಿಸಿ ಮೂರು ಬಾರಿ ತಲಾಖ್ ಎಂದರೆ ಆ ಬಂಧನ ಕಡಿದು ಹೋಗುತ್ತದೆ. ಇಬ್ಬರೊ ಮೂವರೊ ಮಕ್ಕಳೊಡನೆ ಆತನು ಆಕೆಯನ್ನು ಮನೆಯಿಂದ ಹೊರದೂಡುತ್ತಾನೆ. ಕೆಲವೊಮ್ಮೆ ಆತನು ಮಕ್ಕಳನ್ನು ಬಲಾತ್ಕಾರವಾಗಿ ತನ್ನ ಬಳಿ ಇರಿಸಿಕೊಂಡು ತಾಯಿಮಕ್ಕಳ ನಡುವೆ ಅಡ್ಡಗೋಡೆಯಾಗುತ್ತಾನೆ. ಹೀಗೆ ವಿಚ್ಛೇದನ ನೀಡುವ ಮೊದಲು ಆತನು ಧರ್ಮಗುರುಗಳ ಅಥವಾ ಕುಟುಂಬದ ಹಿರಿಯರ ಸಲಹೆ ಪಡೆಯಬೇಕಾಗಿಲ್ಲ. ಜೀವನಾಂಶ ಇಲ್ಲವೇ ಇಲ್ಲ. ಜೀವನಾಂಶಕ್ಕಾಗಿ ಆಕೆ ನ್ಯಾಯಾಲಯಕ್ಕೆ ಹೋಗುವ ಅಧಿಕಾರವೂ ಇಲ್ಲ. ಇದರ ಪರಿಣಾಮವೆಂದರೆ ಬಡವರಾದ, ಅವಿದ್ಯಾವಂತರಾದ, ಯಾವುದೇ ವೃತ್ತಿ ಜೀವನದ ಅನುಭವವೂ ಇಲ್ಲದ ವಿಚ್ಛೇದಿತ ಮಹಿಳೆಯರು ಬದುಕಲು ಬೇರೆ ಹಾದಿ ಇಲ್ಲದೆ ದೇಹ ಮಾರುವ ದಂಧೆಗಿಳಿಯುತ್ತಾರೆ. ಮುಂಬೈಯ ವೇಶ್ಯಾವಾಟಿಕೆಯಲ್ಲಿ 75% ಮಹಿಳೆಯರು ಗಂಡನಿಂದ ತಲಾಖ್ ಪಡೆದ ಮುಸ್ಲಿಂ ಮಹಿಳೆಯರಾಗಿದ್ದಾರೆನ್ನಲಾಗಿದೆ. ಹಾಗಾದರೆ ಸಂವಿಧಾನ ನೀಡಿದ ಸರ್ವರಿಗೂ ಸಮಾನತೆ, ಸಮಾನ ಹಕ್ಕುಗಳು ಎಂಬ ವಾಕ್ಯಗಳು ಈ ಮಹಿಳೆಯರಿಗೆ ಅನ್ವಯಿಸುವುದಿಲ್ಲವೇ? ಈ ಮಹಿಳೆಯರನ್ನು ನಮ್ಮ ಸಂವಿಧಾನದಿಂದ ಹೊರಗಿಡಲು ಕಾರಣವೇನು? ಜಾತಿಧರ್ಮಗಳ ಹೆಸರಿನಲ್ಲಿ, ಲಿಂಗದ ಆಧಾರದಲ್ಲಿ ಅಥವಾ ಬಣ್ಣದ ಆಧಾರದಲ್ಲಿ ತಾರತಮ್ಯವಿಲ್ಲದೆ ಸ್ತ್ರೀಪುರುಷರಿಗೆ ಸಮಾನ ಹಕ್ಕುಗಳಿರುವುದಾದರೆ ವಿಚ್ಛೇದನದ ಕಾರಣದಿಂದ ಈ ಮಹಿಳೆಯರ ಮೇಲೆ ದೌರ್ಜನ್ಯ ನಡೆಸಲು ಅವಕಾಶವಾದುದು ಹೇಗೆ?

ಶಾಬಾನುವಿಗೆ ಜೀವನಾಂಶ ನೀಡುವುದು ಧರ್ಮ ವಿರೋಧವೆಂದು ಮತಾಂಧತೆಯಲ್ಲಿ ಮುಳುಗಿದ ಮುಸ್ಲಿಮರು ದೇಶಾದ್ಯಂತದ ಮುಸ್ಲಿಮರಿಂದ ಪ್ರತಿಭಟನೆ ಮಾಡಿಸಿ ಸುಪ್ರೀಂಕೋರ್ಟಿನ ತೀರ್ಪನ್ನೇ ರದ್ದುಪಡಿಸಿದರು. ಆದರೆ ಖುರ್‌ಆನಿನ 2ನೇ ಅಧ್ಯಾಯದ 240ನೇ ವಾಕ್ಯ ತಲಾಖ್ ನೀಡಿದ ಮಹಿಳೆಗೆ ಆಕೆಯ ಮುಂದಿನ ಬದುಕಿಗೆ ತೊಂದರೆಯಾಗದಂತೆ ಆಕೆ ಇನ್ನೊಂದು ವಿವಾಹವಾಗುವವರೆಗೆ ಒಂದೇ ಮೊತ್ತದಲ್ಲಿ ಜೀವನಾಂಶ ನೀಡಬೇಕೆಂಬ ವಾಕ್ಯವಿದ್ದರೂ ರಾಜೀವ್ ಗಾಂಧಿ ಸರ್ಕಾರ ಜಾರಿಗೆ ತಂದ ನಿಯಮದಲ್ಲಿ (ವಿಚ್ಛೇದಿತ ಮುಸ್ಲಿಂ ಮಹಿಳೆಯರ ಹಕ್ಕು ರಕ್ಷಣಾ ಮಸೂದೆ) ಈ ವಾಕ್ಯವನ್ನು ಸೇರಿಸಲೇ ಇಲ್ಲ! ಆ ಮಸೂದೆಯಿಂದ ಈ ವಾಕ್ಯ ಮಾಯವಾದುದು ಹೇಗೆ? ಖುರ್‌ಆನಿನಲ್ಲಿರುವ ವಾಕ್ಯ ಧಾರ್ಮಿಕ ನಿಯಮವಲ್ಲವೆಂದು ಹೇಳಿ ಮಹಿಳೆಯರನ್ನು ವಂಚಿಸುವುದೇ ಈ ಜನರ ಗುರಿಯಾಗಿದೆಯೇ?

ಜೀವನಾಂಶವೆಂಬುದು ಧಾರ್ಮಿಕ ನಿಯಮವೂ ಅಲ್ಲ ಅದನ್ನು ನೀಡುವುದು ಧರ್ಮ ವಿರೋಧವೂ ಅಲ್ಲ. ನನ್ನ ತಂದೆ ಮುಸ್ಲಿಂ ವ್ಯಕ್ತಿ ನಿಯಮದಲ್ಲಿ ಲಾ ಪದವಿಯಲ್ಲಿ ಸ್ವರ್ಣ ಪದಕ ಪಡೆದವರಾಗಿದ್ದರು. 1940 ಮತ್ತು 50ರ ದಶಕದಲ್ಲಿ ಅವರು ಕಾಸರಗೋಡಿನಲ್ಲಿ ನ್ಯಾಯವಾದಿಯಾಗಿದ್ದ ಸಂದರ್ಭದಲ್ಲಿ ಎಷ್ಟೋ ಜನ ಬಡ, ವಿಚ್ಛೇದಿತ ಮುಸ್ಲಿಂ ಮಹಿಳೆಯರಿಗೆ ನ್ಯಾಯಾಲಯದಲ್ಲಿ ಮೊಕದ್ದಮೆ ಹೂಡಿಸಿ ಜೀವನಾಂಶ ದೊರಕಿಸಿ ಕೊಟ್ಟಿದ್ದರು. 70ರ ದಶಕದಲ್ಲಿ ಉತ್ತರ ಭಾರತದಲ್ಲಿ ತಾಹಿರಾಬಿ ಎಂಬ ಮಹಿಳೆ ಜೀವನಾಂಶಕ್ಕಾಗಿ ನ್ಯಾಯಾಲಯದಲ್ಲಿ ಹೋರಾಡಿ ಜೀವನಾಂಶ ಪಡೆದ ಬಳಿಕ ಬೇರೆಯವರೂ ಜೀವನಾಂಶ ಪಡೆಯ ತೊಡಗಿದ್ದರು. ಆದರೆ 1985ರ ಶಾ ಬಾನುವಿನ ಮೊಕದ್ದಮೆಯ ಬಳಿಕ ಜೀವನಾಂಶ ರದ್ದತಿಯಿಂದ ವಿಚ್ಛೇದಿತ ಮುಸ್ಲಿಂ ಮಹಿಳೆಯರು ಜೀವನಾಂಶವಿಲ್ಲದೆ ಮತ್ತೊಮ್ಮೆ ಬಡತನದಲ್ಲಿ ಬಿದ್ದರು. 40, 50ರ ದಶಕದಲ್ಲಿ ಮತ್ತು 1985ರ ವರೆಗೆ ಜೀವನಾಂಶ ಕೊಡಬಹುದಾಗಿದ್ದ ಧರ್ಮ 1985ರ ಬಳಿಕ ಅದನ್ನು ರದ್ದುಪಡಿಸಿದ್ದು ಹೇಗೆ?

1985 ರಲ್ಲಿ 'ಮುಸ್ಲಿಂ ವ್ಯಕ್ತಿ ನಿಯಮ'ದಲ್ಲಿ ಸರ್ಕಾರದ ಹಸ್ತಕ್ಷೇಪವೆಂಬ ಕೂಗೆಬ್ಬಿಸಿ ಅದನ್ನು ರದ್ದುಪಡಿಸಿದರು. 1950ರಲ್ಲಿ ಬ್ರಿಟಿಷರು ನಿಯಮಿಸಿದ ವ್ಯಕ್ತಿನಿಯಮ ಇದಾಗಿತ್ತು. ಈ ನಿಯಮದ ಪ್ರಕಾರ ಮುಸ್ಲಿಂ ಮಹಿಳೆಯರಿಗೆ ವಿಚ್ಛೇದನಕ್ಕೆ ಅವಕಾಶವಿರಲಿಲ್ಲ. ಗಂಡನ ದೌರ್ಜನ್ಯದಿಂದ ವಿಚ್ಛೇದನ ಬೇಕೆಂದರೂ ಮಹಿಳೆಯರಿಗೆ ವಿಚ್ಛೇದನ ದೊರೆಯುತ್ತಿರಲಿಲ್ಲ. ಆಕೆ ಬೇರೆ ಧರ್ಮಕ್ಕೆ ಮತಾಂತರಗೊಂಡರೆ ಮಾತ್ರ ವಿಚ್ಛೇದನ ದೊರೆಯಬಹುದಾಗಿತ್ತು. ಈ ಮತಾಂತರವನ್ನು ತಪ್ಪಿಸಿಕೊಳ್ಳಲು 1937ರಲ್ಲಿ ಬಂದ



ಹೊಸ ಮಸೂದೆಯಂತೆ ಮುಸ್ಲಿಂ ಮಹಿಳೆಯರಿಗೆ ವಿಚ್ಛೇದನಕ್ಕೆ ಅವಕಾಶವುಂಟಾಯಿತು.

ಅವಕಾಶವುಂಟಾಯಿತಷ್ಟೆ. ಆದರೆ ಇಂದಿಗೂ ಓರ್ವ ಮಹಿಳೆಗೆ ವಿಚ್ಛೇದನ ಬೇಕೆಂದರೆ ಆಕೆ ಕೆಲವು ವರ್ಷಗಳವರೆಗೆ ನ್ಯಾಯಾಲಯದಲ್ಲಿ ಹೋರಾಡಬೇಕಾಗಿತ್ತು. 'ತುಲಾ' ಮಾಡುವ ಪದ್ಧತಿ ಇದೆ ಎಂದು ಹೇಳಲಾಗುತ್ತಿದೆ. ತನಗೆ ಮೆಹರ್ ಆಗಲಿ ಇತರ ಯಾವ ಸೌಲಭ್ಯವೂ ಬೇಡವೆಂದು ಆಕೆ ಹೇಳಿದರೆ ವಿಚ್ಛೇದನಕ್ಕೆ ಪ್ರಯತ್ನಿಸಬಹುದಷ್ಟೆ. 'ನಾನು ಆಕೆಗೆ ತಲಾಖ್ ಕೊಡುವುದಿಲ್ಲ' ಎಂದು ಗಂಡನೊಬ್ಬನು ಹಟ ಹಿಡಿದರೆ ಅವಳಿಗೆ ಯಾವ ನಿಯಮದಿಂದಲೂ ವಿಚ್ಛೇದನ ದೊರೆಯದು. ಮಹಿಳೆಯೊಬ್ಬಳು ಈ ರೀತಿ ನ್ಯಾಯಾಲಯದಲ್ಲಿ ಹೋರಾಡಿಯೂ ವಿಚ್ಛೇದನ ದೊರೆಯಲಿಲ್ಲ. ನನ್ನ ತಂದೆಯೇ ನ್ಯಾಯವಾದಿಯಾಗಿ ವಾದಿಸಿದ್ದರು. ಕೊನೆಗೆ ತಂದೆ ಅವಳನ್ನು ನಮ್ಮ ಮನೆಗೆ ಕರೆಸಿ ನ್ಯಾಯಾಧೀಶರೊಡನೆ ಏನು ಹೇಳಬೇಕೆಂದು ಹೇಳಿಕೊಟ್ಟರು. "ನೀವು ನನ್ನನ್ನು ಆ ಗಂಡನೊಡನೆ ಬದುಕಲು ಒತ್ತಾಯಿಸಿದರೆ ನಾನು ಆತ್ಮಹತ್ಯೆ ಮಾಡಿಕೊಳ್ಳುವೆ" ಎಂದು ಆಕೆ ನ್ಯಾಯಾಧೀಶರೊಡನೆ ಹೇಳಿದಳು. ಆ ಬಳಿಕ ಆ ನ್ಯಾಯಾಧೀಶರು ಆಕೆಯ ತಲಾಖ್‌ಗೆ ಅನುಮತಿ ನೀಡಿದರು! ಇದು ನಡೆದದ್ದು 1960 ರಲ್ಲಿ. ಈಗಲೂ ಮಹಿಳೆಯೊಬ್ಬಳ ವಿಚ್ಛೇದನ ಪಡೆಯುವುದು ಬಹಳ ಕಷ್ಟವೇ ಆಗಿದೆ.

ಈಗಲೂ ನಾಗರಿಕ ನಿಯಮದಲ್ಲಿ ಸರ್ಕಾರದ ಹಸ್ತಕ್ಷೇಪವೆಂದು, ವಿಚ್ಛೇದಿತ ಮಹಿಳೆಗೆ ಜೀವನಾಂಶ ನೀಡುವುದು ಧರ್ಮ ವಿರೋಧವೆಂದು ಜನಸಾಮಾನ್ಯರನ್ನು



ನಂಬಿಸಲಾಗಿದೆ. ಆದರೆ ಇಂಡಿಯಾದ ಕ್ರಿಮಿನಲ್ ಪ್ರೊಸೀಜರ್ ಕೋಡಿನಲ್ಲಿ ಮುಸ್ಲಿಂ ಧಾರ್ಮಿಕ ನಿಯಮ ಶರಿಯತ್ ನಿಯಮ ಯಾವುದೂ ಒಳಗೊಂಡಿಲ್ಲ. ಕಳ್ಳನ ಕೈ ಕಡಿಯುವುದಾಗಲಿ ವ್ಯಭಿಚಾರ ಮಾಡಿದವರನ್ನು ಕಲ್ಲಿನಿಂದ ಹೊಡೆದು ಕೊಲ್ಲುವುದಾಗಲಿ, ಹೆಂಡ ಕುಡಿಯುವವರನ್ನು ಶಿಕ್ಷಿಸುವುದಾಗಲಿ ಯಾವುದೂ ಈ ಕ್ರಿಮಿನಲ್ ಪ್ರೊಸೀಜರ್ ಕೋಡಿನಲ್ಲಿ ಒಳಗೊಂಡಿಲ್ಲ. ಆದರೆ ಕ್ರಿಮಿನಲ್ ಪ್ರೊಸೀಜರ್ ಕೋಡಿನ 125ನೇ ವಿಧಿಯಿಂದ ಮುಸ್ಲಿಮರನ್ನು ಹೊರಗಿಡಬೇಕೆಂದು ಮುಸ್ಲಿಂ ಪುರುಷರು ಹೋರಾಡಿದ ಕಾರಣಕ್ಕಾಗಿ ಈ ವಿಧಿಯಿಂದ ಮುಸ್ಲಿಮರನ್ನು ಹೊರಗಿಡಲಾಯಿತು. ಬಡ ಮಹಿಳೆಯೊಬ್ಬಳಿಗೆ ಜೀವನಾಂಶ ನೀಡಿದರೆ ಧರ್ಮ ಮುಳುಗಿಹೋಗುತ್ತದೆಯೇ?

ಈ ಸುಲಭದ ವಿವಾಹ ವಿಚ್ಛೇದನ (ಬಾಯಿಮಾತಿನ, ಯಾವುದೇ ದಾಖಲೆಯೂ ಇಲ್ಲದ ತಲಾಖ್ ಪದ್ಧತಿ)ವನ್ನು ರದ್ದು ಪಡಿಸಬೇಕೆಂಬುದು ಶಾಯರಾ ಬಾನುವಿನ ಬೇಡಿಕೆಯಾಗಿದೆ. ತಲಾಖ್ ಪದ್ಧತಿ ರದ್ದುಗೊಳಿಸಿದರೆ ಪುರುಷರು ಆತ್ಮಹತ್ಯೆ ಮಾಡಿಕೊಳ್ಳಬೇಕಾಗುತ್ತದೆ ಎಂಬುದು ಕೆಲವು ಪುರುಷರ ವಾದವಾಗಿದೆ. ಆದರೆ ತಲಾಖ್ ನೀಡಲು ಸಾಧ್ಯವಾಗದ ಕಾರಣಕ್ಕಾಗಿ ಪುರುಷರು ಆತ್ಮಹತ್ಯೆ ಮಾಡಿಕೊಂಡ ಉದಾಹರಣೆ ನಾನು ಕಂಡೂ ಇಲ್ಲ, ಕೇಳಿಯೂ ಇಲ್ಲ. ಆದರೆ ಗಂಡ ತಲಾಖ್ ನೀಡಿದ್ದಕ್ಕಾಗಿ ಆತ್ಮಹತ್ಯೆ ಮಾಡಿಕೊಂಡ ಮಹಿಳೆಯರಿದ್ದಾರೆ; ಮಾನಸಿಕ ಸ್ಥಿಮಿತ ಕಳೆದುಕೊಂಡವರೂ ಇದ್ದಾರೆ. ವಿಚ್ಛೇದಿತ ಮಹಿಳೆಯ ಬಳಿಯಲ್ಲಿ ಹೆಣ್ಣು ಮಕ್ಕಳಿದ್ದು ಆ ಹೆಣ್ಣು ಮಕ್ಕಳ ಮದುವೆ ಪ್ರಸ್ತಾಪದ ಸಂದರ್ಭದಲ್ಲಿ ತನಿಖೆ ಪ್ರಾರಂಭವಾಗುತ್ತದೆ. ಹುಡುಗಿಯ ತಾಯಿಗೆ ತಲಾಖ್ ನೀಡಿದ್ದು ಯಾಕೆ? ಅವಳ ನಡತೆ ಚೆನ್ನಾಗಿಲ್ಲವೇನೊ, ಅಂತಹವಳ ಮಗಳು ನಮ್ಮ ಹುಡುಗನಿಗೆ ಬೇಡ ಎಂದು ಆ ವಿವಾಹವೇ ಮುರಿದು ಹೋಗುತ್ತಿದೆ. ಇದು ಇತ್ತೀಚೆಗೆ ನನಗೆ ತಿಳಿದ ಒಂದು ಕುಟುಂಬದಲ್ಲಿ ನಡೆದ ಕತೆ. ಮಕ್ಕಳು ಚಿಕ್ಕವರಾಗಿರುವಾಗಲೇ ಆ ತಂದೆ ಹೆಂಡತಿ ಮಕ್ಕಳನ್ನು ಬಿಟ್ಟು ಕೇರಳಕ್ಕೆ ಹೋಗಿ ಬೇರೊಬ್ಬಳನ್ನು ಮದುವೆಯಾಗಿದ್ದಾನೆ.

ಮುಸ್ಲಿಂ ಸಮಾಜದಲ್ಲಿ ಮಹಿಳೆಯರ ಮೇಲೆ ನಡೆಯುತ್ತಿರುವ ಇಂತಹ ಅನ್ಯಾಯಗಳು ನಿಲ್ಲಬೇಕಾದರೆ ಈ ಸಮಾಜದ ನಿಯಮಗಳಲ್ಲಿ ಕೆಲವು ಬದಲಾವಣೆಗಳಾದರೂ ಆಗಲೇಬೇಕು. ಈ ವಿಷಯದಲ್ಲಿ ಮುಸ್ಲಿಂ ಪುರುಷರೂ ಚಿಂತನೆ ನಡೆಸಬೇಕು ಎಂಬುದು ನನ್ನ ... ವಿನಂತಿ. ಇಂಡಿಯಾದ ... ಮಹಿಳೆಯರೂ ಈ ವಿಷಯದಲ್ಲಿ ಈ ಮಹಿಳೆಯರೊಡನೆ ಕೈ ಜೋಡಿಸಬೇಕು.

● ಸಾರಾ ಅಬೂಬಕ್ಕರ್

ಅಭಿವೃದ್ಧಿಯೋ ಅಭಿವೃದ್ಧಿ ಹಾಗೂ ಅರ್ನಬ್ ಗೋಸ್ವಾಮಿ ಮತ್ತು ನರೇಂದ್ರ ಮೋದಿ ಚಟ...




ಈ ವಾರ ಗಮನ ಸೆಳೆದ ಎರಡು ಸುದ್ದಿಗಳ ಬಗ್ಗೆ ಇಲ್ಲಿ ಚರ್ಚಿಸಲಾಗಿದೆ. (ಗಮನ ಸೆಳೆದಿರುವ ಮೂರನೆಯ ಸುದ್ದಿ - ಖಾಸಗಿ ವ್ಯಕ್ತಿಯೊಬ್ಬನನ್ನು 'ಮಹಾರಾಜ'ನೆಂದು ಕರೆಯಲು ಯಾವ ಹಿಂಜರಿಕೆ ಅಥವಾ ನಾಚಿಕೆಯಿಲ್ಲದ ಮಾಧ್ಯಮಗಳು, ಖಾಸಗಿ ಕಾರ್ಯಕ್ರಮವೊಂದನ್ನು ದೇಶದ ಪ್ರಮುಖ ಸುದ್ದಿಯನ್ನಾಗಿಸಿದ್ದು). ಒಂದು, ಅರ್ನಾಬ್ ಗೋಸ್ವಾಮಿ ನಡೆಸಿದ ಮೋದಿಯ ಸಂದರ್ಶನ ಅಥವಾ ಅದನ್ನೇ ಮೋದಿ ನಡೆಸಿದ ಅರ್ನಾಬ್ ಗೋಸ್ವಾಮಿಯ ಸಂದರ್ಶನ ಎಂತಲೂ ಕರೆಯಬಹುದು. ಎರಡನೆಯ ಸುದ್ದಿ ಮಾನವ ಅಭಿವೃದ್ಧಿ ಸೂಚ್ಯಂಕದಲ್ಲಿ ಭಾರತದ ಸ್ಥಾನ ಮತ್ತಷ್ಟು ಕುಸಿದಿದೆ ಎಂಬುದು. ಇವೆರಡು ಸುದ್ದಿಗಳೂ ಪರಸ್ಪರ ವಿರುದ್ಧ ಅಭಿಪ್ರಾಯಗಳನ್ನು ನಮ್ಮ ಮುಂದಿಟ್ಟಿವೆ. ಈಗಾಗಲೇ ಅಂತರ್ಜಾಲದಲ್ಲಿ ಸಕ್ರಿಯವಾಗಿರುವವರು ಇದರ ಕುರಿತು ಓದಿದ್ದಾರೆ; ಚರ್ಚಿಸಿಯೂ ಇದ್ದಾರೆ. ಈ ಲೇಖನ ಪ್ರಕಟವಾಗುವ ಹೊತ್ತಿಗೆ ಅಂತರ್ಜಾಲದಲ್ಲಿ ಹೊಸ ಸುದ್ದಿ ಪೋಸ್ಟ್ ಆಗುತ್ತದಾದ್ದರಿಂದ, ಸಾಮಾನ್ಯ ಜನರನ್ನು ಗಮನದಲ್ಲಿಟ್ಟುಕೊಂಡು, ಇವುಗಳ ಬಗ್ಗೆ ಇಲ್ಲಿ ಮತ್ತೊಮ್ಮೆ ಚರ್ಚಿಸಲಾಗಿದೆ.

ಸದ್ಯದಲ್ಲೇ ಉತ್ತರ ಪ್ರದೇಶ ಚುನಾವಣೆ ನಡೆಯಲಿದೆ. ಕಳೆದ ಲೋಕಸಭಾ ಚುನಾವಣೆಗೆ ಮುಂಚೆ ಅಮಿತ್ ಷಾ ಮತ್ತು ಆತನ ಬಳಗ ಯೋಜಿಸಿ ಜಾರಿಗೊಳಿಸಿದ ಮುಜಫ್ಫರ್‌ನಗರ ಗಲಭೆ ಹಾಗೂ ಇನ್ನಿತರ ಕೋಮು ಕಾರ್ಯಾಚರಣೆಗಳು, ಚುನಾವಣೆಯಲ್ಲಿ ವಿಪರೀತ ಫಲ ಕೊಟ್ಟಿದ್ದವು. ಉತ್ತರ ಪ್ರದೇಶ ರಾಜಕಾರಣದಲ್ಲಿ 3ನೇ ಸ್ಥಾನಕ್ಕೆ ಬರಲು ತಿಣುಕುತ್ತಿದ್ದ ಬಿಜೆಪಿಯು 'ಅಭೂತಪೂರ್ವ' ವಿಜಯವನ್ನು ದಾಖಲಿಸಿತ್ತು. ಹಾಗೆ ನೋಡಿದರೆ, ಗುಜರಾತ್‌ಗಿಂತ ಒಂದು ಕೈ ಹೆಚ್ಚೇ ಎನ್ನಬಹುದಾದಂತಹ ವಿಜಯವನ್ನು ಬಿಜೆಪಿಯು ಪಡೆದುಕೊಂಡಿತ್ತು. ಉತ್ತರ ಪ್ರದೇಶವೆನ್ನುವುದು ಇಂದಿಗೂ ಬಿಮಾರು (ಬಿಹಾರ್, ಮಧ್ಯಪ್ರದೇಶ, ರಾಜಸ್ಥಾನ ಮತ್ತು ಉತ್ತರ ಪ್ರದೇಶಗಳನ್ನು ಸೇರಿಸಿ ಹೀಗೆ ಕರೆಯಲಾಗುತ್ತದೆ. ಹಿಂದಿಯಲ್ಲಿ ಬಿಮಾರ್ ಎಂದರೆ ರೋಗಿ)ನ ಭಾಗವೇ ಆಗಿದೆ. ಅವು ದಕ್ಷಿಣ ಮತ್ತು ಪಶ್ಚಿಮ ಭಾರತದ ರಾಜ್ಯಗಳಷ್ಟು ಅಭಿವೃದ್ಧಿ ಸಾಧಿಸಿಲ್ಲ, ಜೊತೆಗೆ ಇಡೀ ದೇಶದಲ್ಲೇ ಅತ್ಯಂತ ಹೆಚ್ಚು ಜನಸಂಖ್ಯೆ ಮತ್ತು ಲೋಕಸಭಾ ಕ್ಷೇತ್ರಗಳನ್ನು ಹೊಂದಿರುವ ರಾಜ್ಯ ಅದಾಗಿದೆ. ಆ ರಾಜ್ಯದಲ್ಲಿ ಮುಂದಿನ ವಿಧಾನಸಭಾ ಚುನಾವಣೆಯಲ್ಲಿ ವಿಶೇಷ ಗೆಲುವು ಸಾಧಿಸುವುದು ಬೇರೆಲ್ಲ ಪಕ್ಷಗಳಿಗಿಂತ ಬಿಜೆಪಿಗೆ ಅತ್ಯಗತ್ಯ.

ಹೀಗಾಗಿ ಇನ್ನೊಂದು ಸುತ್ತಿನ ಕೋಮು ಕಾರ್ಯಾಚರಣೆಗೆ ಅಲ್ಲಿ 'ವಿವಿಧ' ಕೋಮುವಾದಿ ಪಕ್ಷಗಳು ಸಜ್ಜಾಗುತ್ತಿವೆ. ಎಲ್ಲರಿಗಿಂತ ಹೆಚ್ಚು ಮತ್ತು ಅತ್ಯಂತ ಅಪಾಯಕಾರಿ ಬಿಜೆಪಿಯೂ ಅದನ್ನೇ ಮಾಡುತ್ತಿದೆ. ಆದರೆ, ದೇಶದ ಮತ್ತು ಪರದೇಶಗಳ ಮೇಲ್ಮಧ್ಯಮ ವರ್ಗಕ್ಕೆ ಹಾಗೂ ಹಣ ಹೂಡುವವರಿಗೆ ಸದಾಕಾಲ ಕೋಮುಜ್ವಾಲೆ ಹತ್ತಿ ಉರಿಯುವುದರಿಂದ ಆರ್ಥಿಕ ನಷ್ಟವೂ ಆಗುತ್ತದೆ. ಹಾಗಾಗಿ ಇವೆರಡನ್ನೂ - ಕೋಮು ಕಾರ್ಯಾಚರಣೆ ಮತ್ತು ಶ್ರೀಮಂತರಿಗೆ ಲಾಭ ಮಾಡಿಕೊಡುವ 'ಅಭಿವೃದ್ಧಿ' - ಬ್ಯಾಲೆನ್ಸ್ ಮಾಡುವ ಅಗತ್ಯವೂ ಅವರಿಗಿದೆ. ಅಂತಹದೊಂದು ಬ್ಯಾಲೆನ್ಸಿಂಗ್‌ನ ಭಾಗವಾಗಿ ಮೊನ್ನೆ ಟೈಮ್ಸ್‌ನೌ ಚಾನೆಲ್‌ನಲ್ಲಿ 'ಭಾರತದ ಪ್ರಧಾನ ಮಂತ್ರಿಯೊಬ್ಬರು ಖಾಸಗಿ ಚಾನೆಲ್‌ವೊಂದಕ್ಕೆ ನೀಡಿದ ಪ್ರಪ್ರಥಮ ಸಂದರ್ಶನ' ಪ್ರಸಾರವಾಯಿತು.

ಪ್ರಧಾನ ಮಂತ್ರಿ ಮೋದಿ ಈ ಸಂದರ್ಭದಲ್ಲಿ ಏನು ಹೇಳಬಯಸಿದ್ದರೋ, ಅದನ್ನು ಹೇಳಲು ಅವಕಾಶವಾಗುವಂತೆ ಸಂದರ್ಶನವನ್ನು ರೂಪಿಸಲಾಗಿತ್ತು, ಅದರಲ್ಲಿಯೇ ರಿಸರ್ವ್ ಬ್ಯಾಂಕ್ ಗವರ್ನರ್ ರಘುರಾಮ್ ರಾಜನ್ ವಿಚಾರದಲ್ಲಿ ಸುಬ್ರಹ್ಮಣ್ಯಂ ಸ್ವಾಮಿ ನಡೆಸಿದ ಕೀಳುಮಟ್ಟದ ದಾಳಿಯ ಕುರಿತು ಪ್ರಧಾನ ಮಂತ್ರಿಯ 'ಸೂಕ್ತ ಸ್ಪಷ್ಟೀಕರಣ'ವನ್ನೂ ನೀಡಲಾಯಿತು. ಅದರ ಜೊತೆಗೆ ದೇಶದ 'ಅಭಿವೃದ್ಧಿ'ಯ ಕುರಿತು, ಅದರಲ್ಲೂ ದೇಶದ ಬಡವರ ಅಭಿವೃದ್ಧಿಯ ಕುರಿತೂ ತನ್ನ ಸವಕಲು ಮಾತುಗಳನ್ನು ಪುನರಾವರ್ತಿಸಲು ಮೋದಿಗೆ ಸಾಕಷ್ಟು ಅವಕಾಶ ಮಾಡಿಕೊಡಲಾಯಿತು. ಇಡೀ ಪ್ರಪಂಚವು ನಮ್ಮನ್ನು ಬಿಟ್ಟು ಸಾಕಷ್ಟು ಮುಂದಕ್ಕೆ ಹೋಗಿಬಿಟ್ಟಿದೆ. ಈಗ ಪ್ರಪಂಚದ ವೇಗಕ್ಕೆ ಸರಿಗಟ್ಟಲು ನಾವು ಪ್ರಯತ್ನ ಹಾಕಿದ್ದೇವೆ ಮತ್ತು ಅದರಲ್ಲಿ ಸಾಕಷ್ಟು ಯಶಸ್ವಿಯೂ ಆಗುತ್ತಿದ್ದೇವೆ ಎಂಬುದನ್ನು ಮೋದಿ ಬೇರೆ ಬೇರೆ ವಾಕ್ಯಗಳ ಮೂಲಕ ಪುನರಾವರ್ತಿಸಿದರು. ಅಭಿವೃದ್ಧಿ ಸಾಧಿಸುವುದು ಮತ್ತು ಅದು ಎಲ್ಲಾ ಜನರಿಗೂ ತಲುಪುವಂತೆ ಮಾಡುವುದೇ ತನ್ನ ಪರಮ ಧ್ಯೇಯವೆಂಬಂತೆ ಅವರು ಬಿಂಬಿಸಿಕೊಂಡರು.

ಮೋದಿ ಮತ್ತು ಅರ್ನಾಬ್‌ರ ದುರದೃಷ್ಟವೋ ಏನೋ, ಅದರ ಮಾರನೆಯ ದಿನ ಜಿನೀವಾದಲ್ಲಿ ಕೇಂದ್ರ ಕಚೇರಿ ಹೊಂದಿರುವ ವಿಶ್ವ ಆರ್ಥಿಕ ವೇದಿಕೆ (World Economic Forum (WEF))ಯು ತನ್ನ ವಾರ್ಷಿಕ ವರದಿಯಲ್ಲಿ ಅದಕ್ಕೆ ವಿರುದ್ಧವಾದ ಸಂಗತಿಯನ್ನು ಪ್ರಚುರಪಡಿಸಿತು. ಅದರ ಪ್ರಕಾರ 130 ದೇಶಗಳ ಪೈಕಿ 'ಮಾನವ ಅಭಿವೃದ್ಧಿ ಸೂಚ್ಯಂಕ'ದಲ್ಲಿ ಭಾರತದ ಸ್ಥಾನ 105ನೆಯದ್ದಾಗಿದೆ. ಮೋದಿ ಅಧಿಕಾರಕ್ಕೆ ಬರುವ ಮುಂಚೆ, ಈ ಹಿಂದಿನ ಸರ್ಕಾರದ ಅವಧಿಯಲ್ಲಿ ಅದು 78ನೇ ಸ್ಥಾನದಲ್ಲಿತ್ತು. 78ನೇ ಸ್ಥಾನವು ಸಮಾಧಾನಪಟ್ಟುಕೊಳ್ಳಬಹುದಾದ ಸ್ಥಾನವೇನೂ ಅಲ್ಲ, ಈ ಹಿಂದೆ ಅಧಿಕಾರ ನಡೆಸಿದ ಕಾಂಗ್ರೆಸ್ ಪಕ್ಷವು ಅದಕ್ಕೆ ಪ್ರಧಾನವಾದ ಜವಾಬ್ದಾರಿಯನ್ನು ಹೊತ್ತುಕೊಳ್ಳಬೇಕು. ಕಾಂಗ್ರೆಸ್ ಪಕ್ಷ ತನ್ನ ಹೊಣೆಗಾರಿಕೆಯಿಂದ ನುಣುಚಿಕೊಳ್ಳಲಾಗುವುದಿಲ್ಲ. ಆದರೆ, ತಾನು ಅಧಿಕಾರ ವಹಿಸಿಕೊಂಡ 2 ವರ್ಷಗಳ ನಂತರವೂ ಹೊಸದಾಗಿ ಅಧಿಕಾರಕ್ಕೆ ಬಂದವರು, ಹಿಂದಿನವರನ್ನೇ ದೂರಲಾಗುವುದಿಲ್ಲ. ಒಂದು ವೇಳೆ ಒಟ್ಟು ಸನ್ನಿವೇಶವನ್ನು ಏಕಾಏಕಿ ಬದಲಿಸಿಬಿಡುವುದು ಸಾಧ್ಯವಿಲ್ಲವಾದರೂ, ಅಲ್ಪ ಪ್ರಮಾಣದ ಬೆಳವಣಿಗೆಯನ್ನಾದರೂ ಸಾಧಿಸಬೇಕಿತ್ತಲ್ಲವೇ? ಒಂದುವೇಳೆ ಬೆಳವಣಿಗೆ ಸಾಧ್ಯವಾಗದೇ ಹೋದಲ್ಲಿ ಇರುವ ಸ್ಥಿತಿ ಇನ್ನೂ ಕಳಪೆಯಾಗಬಾರದಲ್ಲವೇ? ಇದಕ್ಕೆ ಮೋದಿಯಲ್ಲದೇ ಬೇರಿನ್ಯಾರೂ ಜವಾಬ್ದಾರರಲ್ಲ.



ಮೇಲಾಗಿ ವಿಶ್ವ ಆರ್ಥಿಕ ವೇದಿಕೆಯು ಸ್ವತಃ ಬಿಜೆಪಿ ಸರ್ಕಾರವು ವಿಶೇಷವಾಗಿ ಅಪ್ಪಿಕೊಂಡಿರುವ ಮತ್ತು ಅದರೊಂದಿಗೆ ವಿಶೇಷ ಸಂಬಂಧವನ್ನು ಮುಂದುವರೆಸ ಬಯಸಿರುವ 'ಬಲಪಂಥೀಯ' ವೇದಿಕೆಯಾಗಿದೆ. ಹಾಗಾಗಿ ಇದು ತಮ್ಮ ವಿರುದ್ಧ ಇರುವ ಎಡಪಂಥೀಯರ ಕುತಂತ್ರವೆಂದು ಅದು ತಳ್ಳಿ ಹಾಕುವುದೂ ಸಾಧ್ಯವಿಲ್ಲ.

ಸದರಿ ಸೂಚ್ಯಂಕದ ಪ್ರಕಾರ ಈ ಸದ್ಯ ಭಾರತವು ಅಸೂಯೆಯಿಂದ ನೋಡುತ್ತಿರುವ ಚೀನಾವು 71ನೇ ಸ್ಥಾನದಲ್ಲಿದೆ. ಈ ಸೂಚ್ಯಂಕವನ್ನು ನಿರ್ಧರಿಸುವುದು ದೇಶದೊಳಗಿನ ಮಾನವ ಸಂಪನ್ಮೂಲವನ್ನು ಯಾವ ದೇಶವು ಆರ್ಥಿಕ ಬೆಳವಣಿಗೆಗಾಗಿ ಪೋಷಿಸಿ, ಅಭಿವೃದ್ಧಿಪಡಿಸಿ ನಿಯೋಜಿಸಿಕೊಳ್ಳುತ್ತದೆ ಎಂಬ ಅಂಶಗಳಾಗಿವೆ. ಅಂದರೆ ದೇಶದ ಪ್ರತಿಯೊಬ್ಬ ಪ್ರಜೆಯ ಬೆಳವಣಿಗೆಗೆ ಬೇಕಾದ ಪೂರಕ ಸನ್ನಿವೇಶ (ಶಿಕ್ಷಣ, ಕೌಶಲ್ಯ, ಆಹಾರ, ವಸತಿ, ಉದ್ಯೋಗಾವಕಾಶ ಇತ್ಯಾದಿಗಳು)ವನ್ನು ಯಾವ ರೀತಿ ನಿರ್ಮಾಣ ಮಾಡಲಾಗುತ್ತದೆ ಮತ್ತು ಅದರ ಮೂಲಕ ಆರ್ಥಿಕ ಬೆಳವಣಿಗೆಯನ್ನು ಸಾಧಿಸುತ್ತದೆ ಎಂಬುದೇ ಈ ಸೂಚ್ಯಂಕಕ್ಕೆ ಇರುವ ಮಾನದಂಡ.

ಬಾಬಾಸಾಹೇಬ್ ಅಂಬೇಡ್ಕರರ 125ನೇ ಜನ್ಮದಿನ ಆಚರಣೆಯ ಸಂದರ್ಭದಲ್ಲಿ ಇದಕ್ಕೆ ವಿಶೇಷವಾದ ಮಹತ್ವವೂ ಇದೆ. ಅಂಬೇಡ್ಕರರು ಪ್ರತಿಪಾದಿಸಿದ ಅಭಿವೃದ್ಧಿಯ ಮಾದರಿಯನ್ನು ಅಳವಡಿಸಿಕೊಳ್ಳುವುದಾದಲ್ಲಿ ಮಾನವ ಅಭಿವೃದ್ಧಿ ಸೂಚ್ಯಂಕವು ಸಾಕಷ್ಟು ಉತ್ತಮ ಸ್ಥಿತಿಯಲ್ಲಿರುತ್ತಿತ್ತು. ಒಟ್ಟಾರೆ ದೇಶದಲ್ಲಿ ಎಷ್ಟು ಜನ ಉದ್ದಿಮೆದಾರರು ಲಕ್ಷ ಕೋಟಿಗಳಿಗಿಂತಲೂ ಹೆಚ್ಚು ಸಂಪತ್ತು ಹೊಂದಿದ್ದಾರೆಂಬುದೋ, ಜಗತ್ತಿನ ಮೊದಲ 100 ಶ್ರೀಮಂತರಲ್ಲಿ ಭಾರತದವರು ಎಷ್ಟು ಎಂಬುದೋ ಮುಖ್ಯವಲ್ಲ, ಇಡೀ ದೇಶದ ಜನರಲ್ಲಿ ಎಲ್ಲರ ನಡುವೆ ಆದಾಯ ಹೇಗೆ ಹಂಚಿಕೆಯಾಗುತ್ತಿದೆ, ಪ್ರತಿಯೊಬ್ಬರಿಗೂ ಶಿಕ್ಷಣ, ಆರೋಗ್ಯ ಆಹಾರ, ಬಟ್ಟೆ, ವಸತಿ, ಉದ್ಯೋಗಾವಕಾಶಗಳು ಹೇಗೆ ಲಭ್ಯವಾಗುತ್ತಿವೆಯೆಂಬುದು ಮುಖ್ಯ ಎಂಬುದೇ ಆ ಅಭಿವೃದ್ಧಿಯ ತಿರುಳು. ವಿಶ್ವ ಆರ್ಥಿಕ ವೇದಿಕೆಯ ಅಭಿವೃದ್ಧಿಯ ಮಾದರಿ ಈ ರೀತಿಯದ್ದಲ್ಲ, ಆದರೂ, ತನ್ನದೇ ಲಾಭಕ್ಕೂ ಸಹ ಹೆಚ್ಚೆಚ್ಚು ಜನರು ಶಿಕ್ಷಣ, ಕೌಶಲ್ಯವನ್ನು ಪಡೆದುಕೊಂಡಲ್ಲಿ ತನಗಾಗಿ ದುಡಿಯಲು ಗುಣಮಟ್ಟದ ಕೂಲಿಗಳು ಸಿಗುತ್ತಾರೆಂಬುದು ಬಂಡವಾಳಶಾಹಿಯ ಲೆಕ್ಕಾಚಾರ. ಅದೇ ಲೆಕ್ಕಾಚಾರವನ್ನು ವಿಶ್ವ ಆರ್ಥಿಕ ವೇದಿಕೆಯೂ ಹೊಂದಿರುತ್ತದೆ. ಆ ಮಾನದಂಡಗಳ ಪ್ರಕಾರವೂ ಭಾರತದ ಬೆಳವಣಿಗೆ ಕುಸಿದಿದೆ.


ಈ ಲೆಕ್ಕಾಚಾರದ ಪ್ರಕಾರ ಫಿನ್ಲೆಂಡ್, ನಾರ್ವೆ ಮತ್ತು ಸ್ವಿಡ್ಜರ್ಲೆಂಡ್ ಮೊದಲ ಮೂರು ಸ್ಥಾನಗಳಲ್ಲಿವೆ. ನಂತರದ ಸ್ಥಾನಗಳಲ್ಲಿ ಜಪಾನ್, ಸ್ವೀಡನ್, ನ್ಯೂಜಿಲೆಂಡ್, ಡೆನ್ಮಾರ್ಕ್, ನೆದರ್‌ಲ್ಯಾಂಡ್, ಕೆನಡಾ ಮತ್ತು ಬೆಲ್ಜಿಯಂಗಳಿವೆ. ಬಹುತೇಕ ಎಲ್ಲವೂ ಪುಟ್ಟ ರಾಷ್ಟ್ರಗಳೇ ಆಗಿವೆ. ನೋಡಿ, ಅಮೆರಿಕಾ ಕೂಡಾ ಮೊದಲ 10 ಸ್ಥಾನದಲ್ಲಿಲ್ಲ ಎಂದು ಹೇಳುವಂತಿಲ್ಲ, ದೊಡ್ಡ ರಾಷ್ಟ್ರಗಳಲ್ಲೊಂದಾದ ರಷ್ಯಾವು 28ನೇ ಸ್ಥಾನದಲ್ಲಿದೆ. ಭಾರತದ ಜೊತೆಯಲ್ಲಿ ಬ್ರಿಕ್ಸ್ ದೇಶಗಳ ಭಾಗವಾಗಿರುವ ಇತರೆಲ್ಲಾ ದೇಶಗಳೂ ಭಾರತಕ್ಕಿಂತ ಉತ್ತಮ ಸ್ಥಾನಗಳಲ್ಲಿವೆ. ಚೀನಾ 71ನೇ ಸ್ಥಾನದಲ್ಲಿ, ಬ್ರೆಜಿಲ್ 83ನೇ ಸ್ಥಾನದಲ್ಲಿ ಮತ್ತು ದಕ್ಷಿಣ ಆಫ್ರಿಕಾ 88ನೇ ಸ್ಥಾನದಲ್ಲಿವೆ. ನೇಪಾಳ, ಮ್ಯಾನ್ಮಾರ್, ಹೈಟಿ, ಮಲವಿ ಮತ್ತು ಬುರುಂಡಿಗಳೂ ಸಹ ಭಾರತಕ್ಕಿಂತ ಉತ್ತಮ ಸ್ಥಾನದಲ್ಲಿವೆ. ತಾನು ಪಾಕಿಸ್ತಾನಕ್ಕಿಂತ (118ನೇ ಸ್ಥಾನ) ಉತ್ತಮ ಸ್ಥಾನದಲ್ಲಿದ್ದೇನೆಂದು ಭಾರತ ಹೇಳಿಕೊಳ್ಳಬಹುದಷ್ಟೇ. ಹೇಗೂ ಮೂಲಭೂತವಾದ, ಅರಾಜಕತೆ, ಧಾರ್ಮಿಕ ಪ್ರತಿಗಾಮಿ ಶಕ್ತಿಗಳ ... ಆಡಳಿತವನ್ನು ಒಪ್ಪಿಸುವುದು ಇತ್ಯಾದಿಗಳ ವಿಚಾ... ಮೋದಿ ಸರ್ಕಾರವು ಪಾಕಿಸ್ತಾನದ ಜೊತೆಗೆ ಸ್ಪರ್ಧೆಯ... ಈ ಸ್ಪರ್ಧೆಯಲ್ಲಿ ವೇಗವಾಗಿ ಚಲಿಸುತ್ತಾ ಮೋದಿ ಸ... ಒಂದು ವರ್ಷದಲ್ಲೇ 100ನೇ ಸ್ಥಾನಕ್ಕಿಳಿದಿತ್ತು, ಈ ... ಅದು ಇನ್ನೂ ಕೆಳಕ್ಕೆ ಇಳಿದಿದೆ.

ಇದೇ ರೀತಿಯಲ್ಲಿ ನಮ್ಮನ್ನು ಆತಂಕಕ್ಕೀಡುಮಾ... ಮತ್ತೊಂದು ಸಂಗತಿಯೂ ಹೊರಬಿದ್ದಿದೆ. ವಿಶ್ವಸಂ... ಅಂಗಸಂಸ್ಥೆಯಾಗಿರುವ ಆಹಾರ ಮತ್ತು ಕೃಷಿ ಸಂಸ್ಥೆ... 'ವಿಶ್ವದಲ್ಲಿ ಆಹಾರ ಅಭದ್ರತೆ 2015' ಎಂಬ ವರದಿ... ಒಂದು ಅಂಶವನ್ನು ಹೇಳಿದೆ. ಅದರ ಪ್ರಕಾರ 1990-9... ಭಾರತದಲ್ಲಿ 21.01 ಕೋಟಿ ಜನರು ಹಸಿವಿ... ಬಳಲುತ್ತಿದ್ದರೆ, ಚೀನಾದಲ್ಲಿ 28.9 ಕೋಟಿ ಜ... ಹಸಿವಿನಲ್ಲಿದ್ದರು. ಆದರೆ, 2014-15ರ ಹೊತ್ತಿಗೆ ಚೀ... ಅದನ್ನು 13.38 ಕೋಟಿಗೆ ಇಳಿಸಲು ಶಕ್ತವಾ... ಭಾರತದಲ್ಲೂ ಈಗಲೂ 19.46 ಕೋಟಿ ಜ... ಹಸಿವಿನಲ್ಲಿದ್ದಾರೆ. ಈ ಪರಿಸ್ಥಿತಿಗೆ ಮೋದಿ ಸರ್ಕಾರ ... ಕಾರಣವಲ್ಲ. ಈ 25 ವರ್ಷಗಳಲ್ಲಿ 15 ವರ್ಷ ... ನಡೆಸಿರುವ ಕಾಂಗ್ರೆಸ್, 7 ವರ್ಷ ಆಳ್ವಿಕೆ ನಡೆಸಿ... ಬಿಜೆಪಿ ನೇತೃತ್ವದ ಎನ್‌ಡಿಎ ಮತ್ತು 3 ವರ್ಷ ... ನಡೆಸಿದ ಎಡಪಕ್ಷಗಳ ಬೆಂಬಲಿತ ಸಂಯುಕ್ತರಂಗ ಎ... ಹೊಣೆ ಹೊರಬೇಕು. ಆತಂಕ ಏನೆಂದರೆ, ಬಡವರ ವಿರು... ಯಾಗಿರುವ ಮೋದಿ ಮತ್ತು ಅವರ ಪಟಾಲಂ ಪರಿಸ್ಥಿತಿ... ಮತ್ತಷ್ಟು ಹಾಳುಗೆಡವುವದರಲ್ಲಿ ಸಂಶಯವೇ ಇಲ್ಲ...

'ಜಾಗತಿಕ ಮಾನವ ಬಂಡವಾಳ ಸೂಚ್ಯಂಕ'ವ... ಕರೆಯಲಾಗುವ ಸೂಚ್ಯಂಕ ಮಾತ್ರವೇ ಮೋದಿ ಸರ್ಕಾ... ಸಾಧನೆಯ ಮಾನದಂಡವಲ್ಲ, ಭ್ರಷ್ಟಾಚಾರ ಮತ್ತು ... ವಿರಿಕೆಯ ನಿಗ್ರಹವೂ ಒಳಗೊಂಡಂತೆ ಇನ್ನೂ ಹ... ವಿಚಾರಗಳಲ್ಲಿ ಮೋದಿ ಸರ್ಕಾರವು ಯಾವ ಪ್ರಗತಿಯ... ಸಾಧಿಸಿಲ್ಲ; ಬದಲಿಗೆ ಕೆಲವು ಅಂಶಗಳಲ್ಲಿ ಹಿಂದಿ... ಕುಸಿದಿದೆ. ಹೀಗಿದ್ದೂ, ಟೈಮ್ಸ್‌ನೌನ ಸಂದ... ಕಾರ್ಯಕ್ರಮದಲ್ಲಿ ಸುಮಾರು ಅರ್ಧದಷ್ಟು ಸಮ... 'ಅಭಿವೃದ್ಧಿ, ಅಭಿವೃದ್ಧಿ, ಅಭಿವೃದ್ಧಿ'ಯ ಪಠಣವೇ ನಡೆಯ... ಇದು ಕೇವಲ ಒಂದು ಸಂದರ್ಶನದ ಹೂರಣ ಮಾತ್ರ... ದೇಶದುದ್ದಕ್ಕೂ, ಬೀದಿಯ ಹೋರ್ಡಿಂಗುಗಳಲ್ಲಿ, ... ನಿಲ್ದಾಣದಲ್ಲಿ, ಟಿವಿ ಹಾಗೂ ಪತ್ರಿಕಾ ಜಾಹೀರಾತುಗ... ಸಿನಿಮಾ ಮಂದಿರಗಳಲ್ಲಿ ಸಿನಿಮಾಗೆ ಮು... ಪ್ರದರ್ಶಿತಗೊಳ್ಳುವ ಕಿರುಚಿತ್ರಗಳಲ್ಲಿ ಎಲ್ಲೆಲ್ಲೂ ಮೋ... ಸರ್ಕಾರದ ಸಾಧನೆಯನ್ನು ಹಾಡಿ ಹೊಗಳಲಾಗುತ್ತಿದೆ. ಬಹು... ಹಿಂದಿನ ಯಾವುದೇ ಸರ್ಕಾರವೂ ಜಾಹೀರಾತಿಗೆ ... ಮಾಡದೇ ಇರುವಷ್ಟು ಪ್ರಮಾಣದಲ್ಲಿ ಈ ಸರ್ಕಾ... ಜನರ ಹಣ ಸುರಿಯುತ್ತಿದೆ. ಹಸೀ ಸುಳ್ಳನ್ನು ಮತ್ತೆ ... ಹೇಳಲಾಗುತ್ತಿದೆ. ಸತ್ಯವು ಕಣ್ಣೆದುರಿಗೆ ರಾಚಿ ಬಡಿಯುತ್ತಿದ್ದ... ವಿಶ್ವದ ವಿವಿಧ ಏಜೆನ್ಸಿಗಳು ತಮ್ಮ ಸ್ಪಷ್ಟ ವರ... ಮುಖಾಂತರ ಸತ್ಯವನ್ನು ವಿವರಿಸಿ ಹೇಳುತ್ತಿದ್ದರೂ, ಮೋ... 'ಭಕ್ತರು' ಮಾತ್ರ 'ಅಭಿವೃದ್ಧಿಯೋ ಅಭಿವೃದ್ಧಿ' ಎ... ನಾವು ನಂಬಬೇಕೆಂದು ಬಯಸುತ್ತಾರೆ.

ಗುಜರಾತ್ ಮಾದರಿ ಎಂದರೆ ಇದೇ ಆಗಿದೆ.

ಇತಿಹಾಸದ ಅಜ್ಞಾನ ಪ್ರಧಾನಿ ಕುರ್ಚಿಗೇ ಅವಮಾನ



ಶಾಖೆಗೆ ಹೋಗಿ 'ನಮಸ್ತೆ ಸದಾ ವತ್ಸಲೆ' ಎಂದು ಹಾಡಿ, ಮನುಸ್ಮೃತಿಯನ್ನು ಹೊಗಳಿ, ಅನ್ಯಮತೀಯರನ್ನು ತೆಗಳಿ, ಗೋಪ್ರೇಮವನ್ನು ಸಾರ್ವಜನಿಕವಾಗಿ ಪ್ರದರ್ಶನ ಮಾಡುವುದೇ ದೇಶಭಕ್ತಿ ಅಂದುಕೊಳ್ಳುವವರ ಭಾರತೀಯ ಇತಿಹಾಸದ ಜ್ಞಾನ ಅವರ ನಾಯಕರು ಬಿತ್ತುವ ಕೇಸರಿ ಇತಿಹಾಸಕ್ಕಷ್ಟೆ ಸೀಮಿತ ಎಂಬುದು ಮತ್ತೆ ಮತ್ತೆ ಸಾಬೀತಾಗುತ್ತಿದೆ. ಆದರೂ 'ಎಂಟಯರ್ ಪೊಲಿಟಿಕಲ್ ಸೈನ್ಸ್'ನಲ್ಲಿ ಎಂ.ಎ ಮಾಡಿರುವವನೆನ್ನಲಾದ ವ್ಯಕ್ತಿಯೊಬ್ಬನಲ್ಲಿ ಸಹಜವಾಗಿಯೆ ಇತಿಹಾಸದ ಬಗ್ಗೆ ಸಾಮಾನ್ಯರಿಗಿಂತ ಹೆಚ್ಚು ತಿಳುವಳಿಕೆಯನ್ನು ನಿರೀಕ್ಷಿಸಲಾಗುತ್ತದೆ. ಭಾರತದ ಪ್ರಧಾನಿಯಾಗಿ ಮೋದಿ ಮಾಡಿರುವ ಹೆಚ್ಚಿನ ಭಾಷಣಗಳು ಸ್ಟೈಲಿ, ಡೈಲಾಗ್ ಮತ್ತು ಸೊಂಟದ ಕೆಳಗಿನ ಮಾತುಗಳಿಗಾಗಿ ಹೆಸರು ಮಾಡಿವೆ ಹೊರತು ವಸ್ತುವಿಗಾಗಿ ಅಲ್ಲ. ಮುಖ್ಯಮಂತ್ರಿಯಾಗಿರುವುದಕ್ಕೂ ಪ್ರಧಾನಿಯಾಗಿರುವುದಕ್ಕೂ ವ್ಯತ್ಯಾಸಗಳಿವೆ ಎಂಬುದನ್ನು ಆತ ಅರಿತಿರುವಂತೆ ಕಾಣುತ್ತಿಲ್ಲ. ದೇಶದ ಪ್ರಧಾನಮಂತ್ರಿ ಸ್ಥಾನದಲ್ಲಿರುವವರ ಬಾಯಲ್ಲಿ ಬರುವ ಪ್ರತಿಯೊಂದು ಪದವನ್ನೂ ಬಲು ಎಚ್ಚರಿಕೆಯಿಂದ ಗಮನಿಸಲಾಗುತ್ತದೆ. ಅದರಲ್ಲೂ ಪರದೇಶಗಳಲ್ಲಿ ಮಾತನಾಡುವಾಗ ಇನ್ನಿಲ್ಲದ ಜಾಗರೂಕತೆ ವಹಿಸಬೇಕಾಗುತ್ತದೆ. ತಪ್ಪುತಪ್ಪಾಗಿ ಮಾತನಾಡಿದರೆ ಅದರಿಂದ ವೈಯಕ್ತಿಕ ಮಟ್ಟಕ್ಕಿಂತ ಹೆಚ್ಚು ಅವಮಾನ ಆಗುವುದು ಪ್ರಧಾನಿ ಕುರ್ಚಿಗೆ. ಅಂತಿಮವಾಗಿ ಇಡೀ ದೇಶದ ಮತದಾರರಿಗೆ. ಮೋದಿ ಭಕ್ತರೇನೊ ಕಣ್ಣು, ಕಿವಿ, ಬಾಯಿ ಮುಚ್ಚಿಕೊಂಡು ಕೂತಿರಬಹುದಾದರೂ ಮಾಧ್ಯಮಗಳ ಮೂಲಕ ಬಿತ್ತರವಾಗುವ ಸುದ್ದಿಯನ್ನು ಮತದಾರನಂತೂ ಗಮನಿಸಿಯೆ ಗಮನಿಸುತ್ತಾನೆ.

ಸಾಮಾನ್ಯವಾಗಿ ಪ್ರಧಾನಮಂತ್ರಿಗಳ ಸಲಹೆಗಾರರ ಗುಣಮಟ್ಟಕ್ಕೆ ತುಂಬಾ ಮಹತ್ವ ನೀಡಲಾಗುತ್ತದೆ. ಆದರೆ ಪ್ರಧಾನಿ ಮೋದಿಯ ಕೆಲವೊಂದು ಭಾಷಣಗಳನ್ನು ನೋಡಿದರೆ ಆತನ ಸಲಹೆಗಾರರ ಗುಣಮಟ್ಟದ ಬಗ್ಗೆ ಬಹಳಷ್ಟು ಅನುಮಾನಗಳು ಮೂಡುತ್ತವೆ. ಮೋದಿ ಬಾಯಿಂದಾಗಿರುವ ಕೆಲವೊಂದು ಉತಪ್ಪ 'ಪ್ರಮಾದ'ಗಳು ಇಲ್ಲಿವೆ:

ಕೋಣಾರ್ಕ ದೇವಾಲಯ

ಭಾರತದ ಪ್ರಾಚ್ಯವಸ್ತು ಇಲಾಖೆಯ ಪ್ರಕಾರ ಕೋಣಾರ್ಕ ದೇವಾಲಯದ ನಿರ್ಮಾಣ ಆಗಿರುವುದು 13ನೆ ಶತಮಾನದಲ್ಲಿ, ಸುಮಾರು 700 ವರ್ಷಗಳ ಹಿಂದೆ. ಅಲ್ಲಿರುವ ಕೆತ್ತನೆಗಳಲ್ಲಿ ಹೆಚ್ಚಿನವು ಮೈಥುನ ಶಿಲ್ಪಗಳು. ಅವುಗಳ ನಡುವೆ ಸ್ಕರ್ಟ್ ಥರದ ಬಟ್ಟೆ ಧರಿಸಿರುವ, ಹಮ್ಮಡಿ ಪಾದರಕ್ಷೆಗಳನ್ನು ಮೆಟ್ಟಿರುವ ಕೆಲವು ಮೂರ್ತಿಗಳನ್ನು ಕಾಣಬಹುದು.

ಆದರೆ ಇತ್ತೀಚಿನ ಅಮೆರಿಕ ಭೇಟಿಯ ವೇಳೆ ಮೋದಿ ಹೇಳಿದ್ದೇನು? ಭಾರತದಿಂದ ಅಮೆರಿಕಕ್ಕೆ ಕಳ್ಳಸಾಗಾಣಿಕೆ ಯಾಗಿದ್ದ ಕೆಲವೊಂದು ಕಲಾಕೃತಿಗಳನ್ನು ಜೂನ್ 6ರಂದು ವಾಷಿಂಗ್ಟನ್‌ನಲ್ಲಿ ನಡೆದ ಸಮಾರಂಭವೊಂದರಲ್ಲಿ ವಿಧ್ಯುಕ್ತವಾಗಿ ಭಾರತಕ್ಕೆ ಮರಳಿಸಿದ ಸಂದರ್ಭದಲ್ಲಿ ಪ್ರಾಚೀನ ಭಾರತದ ಸಂಸ್ಕೃತಿ ಮತ್ತು ಕಲಾನೈಪುಣ್ಯಗಳ ಬಗ್ಗೆ ಮಾತನಾಡಿದ ಪ್ರಧಾನಿ ಮೋದಿ "ಸ್ಕರ್ಟ್ ತೊಟ್ಟು ಕೈಲಿ ಪರ್ಸ್ ಹಿಡಿಯುವ ಇಂದಿನ ಆಧುನಿಕ ಫ್ಯಾಷನಬಲ್ ಯುವತಿಯರ ವಿಗ್ರಹಗಳನ್ನು ನಮ್ಮ ಕಲಾವಿದರು 2000 ವರ್ಷಗಳಷ್ಟು ಹಿಂದೆ ಕೋಣಾರ್ಕದ ಸೂರ್ಯ ದೇವಾಲಯದಲ್ಲಿ ಕಡೆದಿದ್ದಾರೆ. ಇದರರ್ಥ ಆ ಕಾಲದಲ್ಲಿಯೂ ಇಂತಹ ವಸ್ತುಗಳಿದ್ದವು" ಎಂದು ಬಲು ಗಾಂಭೀರ್ಯದಿಂದ ಹೇಳಿದ! ಗಮನಿಸಬೇಕಾದ ಅಂಶವೆಂದರೆ ಕೋಣಾರ್ಕಕ್ಕೆ 2000 ವರ್ಷಗಳ ಇತಿಹಾಸವಿದೆ ಎಂದಾತ ಹೇಳಿರುವುದು ಇದೇ ಮೊದಲ ಬಾರಿ ಅಲ್ಲ. 2004ರಲ್ಲಿ ಫ್ಯಾಷನ್ ತಂತ್ರಜ್ಞಾನ ಶಿಕ್ಷಣಸಂಸ್ಥೆಯ ನೂತನ ಗಾಂಧಿನಗರ ಕ್ಯಾಂಪಸ್‌ಅನ್ನು ಉದ್ಘಾಟಿಸುವ ಸಂದರ್ಭದಲ್ಲೂ "ಕೋಣಾರ್ಕದ ಗೋಡೆಗಳಲ್ಲಿ ಕೆತ್ತಲಾಗಿರುವ ಮೂರ್ತಿಗಳ ಮೈಲಿ ಸ್ಕರ್ಟ್ ಇದೆ, ಕೈಲಿ ಪರ್ಸ್ ಇದೆ. ಇದು, ಫ್ಯಾಷನ್ ತಂತ್ರಜ್ಞಾನ ಅನಾದಿ ಕಾಲದಿಂದಲೂ ನಮ್ಮಲ್ಲಿ ಪರಂಪರಾಗತವಾಗಿ ಬಂದಿರುವುದನ್ನು ಸಾಬೀತುಪಡಿಸುತ್ತದೆ" ಎಂದಿದ್ದ!

ಮಹಾತ್ಮ ಗಾಂಧಿ

ಐತಿಹಾಸಿಕ ಘಟನೆಗಳ ಕುರಿತು ಮೋದಿ ಈ ರೀತಿಯ ಅಸಂಬದ್ಧ ಹೇಳಿಕೆಗಳನ್ನು ನೀಡುತ್ತಿರುವುದು ಇದೇ ಮೊದಲಲ್ಲ. 2013ರಲ್ಲೊಮ್ಮೆ ಶಾಲಾಮಕ್ಕಳಿಗೂ ಗೊತ್ತಿರುವ ಗಾಂಧಿ ಹೆಸರನ್ನೆ ತಪ್ಪಾಗಿ ಹೇಳಿದ್ದ. ಚುನಾವಣಾ ಪ್ರಚಾರದ ಕಾಲವದು. ಅಂದು ರಾಜಸ್ತಾನದಲ್ಲಿ ಸಭೆಯೊಂದನ್ನು ಉದ್ದೇಶಿಸಿ ಮಾಡಿದ್ದ ಭಾಷಣದಲ್ಲಿ "ತಮ್ಮ ಜೀವಿತದ ಕೊನೆ ಭಾಗದಲ್ಲಿ ಗಾಂಧಿಗೆ ಒಂದು ಆಸೆ ಇತ್ತು, ಆದರೆ ಅದು ಈಡೇರಿರಲಿಲ್ಲ. ಆ ಆಸೆಯನ್ನು ನೀವು ಈಡೇರಿಸುವಿರಾ? ಮೋಹನ್‌ಲಾಲ್ ಕರಮ್‌ಚಂದ್ ಗಾಂಧಿ...." ಎಂದು ಮುಂದುವರಿಸಿದ್ದ. ಮೋಹನದಾಸರನ್ನು 'ಮೋಹನಲಾಲ' ಮಾಡಿದ್ದ! ಒಂದು ಮುಖ್ಯ ವಿಷಯವನ್ನು ಇಲ್ಲಿ ಪ್ರಸ್ತಾಪಿಸಲೇಬೇಕು. ಅದೇನೆಂದರೆ ಸ್ವಾತಂತ್ರ್ಯ ಹೋರಾಟಕ್ಕೆ ಎಳ್ಳಷ್ಟಾದರೂ ಕೊಡುಗೆ ನೀಡದ, ವಾಸ್ತವವಾಗಿ ಹೋರಾಟಗಾರರನ್ನು ಜರಿದ ಸಂಘ ಪರಿವಾರದ ತಥಾಕಥಿತ 'ದೇಶಭಕ್ತ' ಮಂದಿ ಈಗ ಇದ್ದಕ್ಕಿದ್ದಂತೆ ಗಾಂಧಿ, ಅಂಬೇಡ್ಕರ್, ಭಗತ್ ಸಿಂಗ್ ಭಜನೆ ಮಾಡುತ್ತಿರುವುದು ಅವಕಾಶವಾದದ ಪರಮಾವಧಿಯಾಗಿದೆ.



ಶ್ಯಾಮ್ ಪ್ರಸಾದ್ ಮುಖರ್ಜಿ

ಮತ್ತೊಂದು ಸಂದರ್ಭದಲ್ಲಿ ರಾಜಸ್ಥಾನದ ಖೇಡಾದಲ್ಲಿ ಮಾತನಾಡಿದ ಮೋದಿ "ಶ್ಯಾಮ್ ಪ್ರಸಾದ್ ಮುಖರ್ಜಿ ಓರ್ವ ಕ್ರಾಂತಿಕಾರಿಯಾಗಿದ್ದರು. ಅವರು 1930ರಲ್ಲಿ ಸಾವನ್ನಪ್ಪಿದರು. ಭಾರತಕ್ಕೆ ಸ್ವಾತಂತ್ರ್ಯ ಸಿಕ್ಕ ನಂತರ ತನ್ನ ಚಿತಾಭಸ್ಮವನ್ನು ಭಾರತಕ್ಕೆ ಕೊಂಡೊಯ್ಯಬೇಕೆಂಬುದು ಅವರ ಕೊನೆಗಾಲದ ಬಯಕೆಯಾಗಿತ್ತು, ಕಾಂಗ್ರೆಸ್ ಸರಕಾರ ಆ ಕೆಲಸ ಮಾಡಲಿಲ್ಲ, ಚಿತಾಭಸ್ಮವನ್ನು 2003ರಲ್ಲಿ ನಾನು ಭಾರತಕ್ಕೆ ತಂದೆ" ಎಂದು ಕೊಚ್ಚಿಕೊಂಡಿದ್ದ. ವಾಸ್ತವದಲ್ಲಿ ಇದು ಶ್ಯಾಮ್‌ಜಿ ಕೃಷ್ಣ ವರ್ಮ ಎಂಬ ಕ್ರಾಂತಿಕಾರಿಯೊಬ್ಬನ ಕತೆ. ಆದರೆ ಈತನ ಬದಲು ಜನಸಂಘದ ಸಂಸ್ಥಾಪಕ ಶ್ಯಾಮ್ ಪ್ರಸಾದ್ ಮುಖರ್ಜಿಯ ಹೆಸರು ಹೇಳಿದ ಮೋದಿ ಆ ಮೇಲೆ ಕ್ಷಮೆ ಕೋರಬೇಕಾಗಿ ಬಂದಿತ್ತು!

ಚಂದ್ರಗುಪ್ತ ಮೌರ್ಯ, ಪೋರಸ, ತಕ್ಷಶಿಲೆ

ನಿಮಗೆಲ್ಲ 2013ರಲ್ಲಿ ಪಾಟ್ನಾದಲ್ಲಿ ನಡೆದ 'ಹೂಂಕಾರ ರ್‍ಯಾಲಿ'ಯ ನೆನಪಿರಬಹುದು. ಮೋದಿಯ ಅಂದಿನ ಭಾಷಣದಲ್ಲಿಯೂ ಹಲವಾರು ದೋಷಗಳಿದ್ದವು. ಮೊದಲನೆಯದಾಗಿ "ಗುಪ್ತ ಸಾಮ್ರಾಜ್ಯದ ಬಗ್ಗೆ ಯೋಚಿಸುವಾಗ ಚಂದ್ರಗುಪ್ತ ಮೌರ್ಯ ನೆನಪಾಗುತ್ತಾನೆ" ಎಂಬ ಹೇಳಿಕೆ. ಮೋದಿ ಇಲ್ಲಿ ಚಂದ್ರಗುಪ್ತ ವಿಕ್ರಮಾದಿತ್ಯ ಎನ್ನುವ ಬದಲು ಚಂದ್ರಗುಪ್ತ ಮೌರ್ಯ ಎಂದಿದ್ದಾನೆ! ಚರಿತ್ರೆ ಓದಿರುವವರೆಲ್ಲರೂ ತಿಳಿದಿರುವಂತೆ ಚಂದ್ರಗುಪ್ತ ಮೌರ್ಯ ಗುಪ್ತ ವಂಶಜನಲ್ಲ, ಆತ ಮೌರ್ಯ ಸಾಮ್ರಾಜ್ಯದ ಸಂಸ್ಥಾಪಕ. ಭಾರತದ ಹಲವು ಭಾಗಗಳನ್ನು ತನ್ನ ಸಾಮ್ರಾಜ್ಯಕ್ಕೆ ಸೇರ್ಪಡೆ ಮಾಡಿಕೊಂಡು ಅವೆಲ್ಲವನ್ನೂ ಒಂದೇ ಪ್ರಭುತ್ವದಡಿ ತಂದ ಕೀರ್ತಿ ಚಕ್ರವರ್ತಿ ಚಂದ್ರಗುಪ್ತ ಮೌರ್ಯನಿಗೆ ಸಲ್ಲುತ್ತದೆ. ಮೋದಿ ತನ್ನ ಭಾಷಣದಲ್ಲಿ ಮಾಡಿದ ಎರಡನೆ ತಪ್ಪು ಪೋರಸನ ಕುರಿತಾಗಿದೆ. ಕ್ರಿ.ಪೂ. 326ರಲ್ಲಿ ಅಲೆಕ್ಸಾಂಡರ್ ವಿರುದ್ಧ ಗಂಗಾತೀರದಲ್ಲಿ ನಡೆದ ಯುದ್ಧದಲ್ಲಿ ಪೋರಸ್ ಸೋಲನ್ನಪ್ಪಿದ ಎಂದ. ವಾಸ್ತವವಾಗಿ ಪೌರವ ರಾಜ್ಯದ ಅರಸನಾಗಿದ್ದ ಪೋರಸ್ ಸೋತಿರುವುದು ಈಗಿನ ಪಾಕಿಸ್ತಾನದ ಪಂಜಾಬ್ ಪ್ರಾಂತ್ಯದಲ್ಲಿರುವ ಹೈದಸ್ಪೆಸ್ ನದಿಯ ದಡದಲ್ಲಿ (ಈಗಿನ ಹೆಸರು ಜೇಲಂ)!

ಪ್ರಾಚೀನ ಅಧ್ಯಯನ ಕೇಂದ್ರವಾದ ತಕ್ಷಶಿಲೆ (ಈಗ ಪಾಕಿಸ್ತಾನದಲ್ಲಿದೆ) ಬಿಹಾರದಲ್ಲಿದೆ ಎಂದು ಹೇಳುವ ಮೂಲಕ ಮೋದಿ ಮೂರನೆ ಬಾರಿ ತಪ್ಪು ಮಾಹಿತಿ ನೀಡಿದ್ದ. ಕಾರಣವೇನೆಂದರೆ ಬಿಹಾರದಲ್ಲಿರುವುದು ತಕ್ಷಶಿಲೆ ಅಲ್ಲ, ವಿಕ್ರಮಶಿಲೆ!

ಸರ್ದಾರ್ ಪಟೇಲರ ಮಹಿಳಾ ಮೀಸಲಾತಿ ಪ್ರಸ್ತಾಪ

2013ರಲ್ಲಿ ಅಹಮದಾಬಾದಿನಲ್ಲಿ ಸರ್ದಾರ್ ವಲ್ಲಭಭಾಯಿ ಪಟೇಲ್ ಮ್ಯೂಸಿಯಂಅನ್ನು ಉದ್ಘಾಟಿಸುತ್ತ ಮೋದಿ ಹೇಳಿದ್ದೇನೆಂದರೆ "ಸರ್ದಾರ್ ಪಟೇಲರು ಮಹಿಳೆಯರಿಗೆ ಮೀಸಲಾತಿ ನೀಡುವ ಪ್ರಸ್ತಾಪವನ್ನು 1919ರಲ್ಲಿ ಮಾಡಿದ್ದರು" ಎಂದು. ಆದರೆ ಕಾಂಗ್ರೆಸ್ ಮುಖಂಡ ದೀನ್‌ಷಾ ಪಟೇಲ್ ಇಲ್ಲಾಗಿರುವ ತಪ್ಪನ್ನು ಎತ್ತಿತೋರಿಸಿ ಅದು 1919 ಅಲ್ಲ 1926 ಆಗಬೇಕು ಎಂದಾಗ ಮೋದಿಭಕ್ತರ ಮೋರೆ ಕಪ್ಪಿಟ್ಟಿರಬಹುದು.

ಇದನ್ನೆಲ್ಲಾ ನೋಡುತ್ತಿದ್ದರೆ ಕೆಲವೊಂದು 'ಪ್ರಮಾದ'ಗಳನ್ನು ಕೆಲವೊಮ್ಮೆ ಉದ್ದೇಶಪೂರ್ವಕವಾಗಿ ಮಾಡುತ್ತಿರುವಂತಿದೆ. ಯಾಕೆಂದರೆ ಹಿಂದಿನದೆಲ್ಲವೂ ಸಾವಿರಾರು ವರ್ಷಗಳಷ್ಟು ಪುರಾತನವೆಂಬ ಹುಸಿನುಡಿಗಳನ್ನು ಸಾವಿರಾರು ಸರ್ತಿ ಪುನರುಚ್ಚರಿಸುವ ಮೂಲಕ ಇತಿಹಾಸವನ್ನು ತಿರುಚಲೆತ್ನಿಸುವುದು ಸಂಘ ಪರಿವಾರದ ಹಲವು ದುರುದ್ದೇಶಪೂರಿತ ಚಾಳಿಗಳಲ್ಲೊಂದು! ಅಥವಾ ಇಂತಹ ಕೆಲವು 'ಪ್ರಮಾದ'ಗಳ ಹಿಂದೆ ಚುನಾವಣಾ ಕಾಲದಲ್ಲಿ ವೋಟಿಗಾಗಿ ಜನರಲ್ಲೊಂದು ಹುಸಿ ಹೆಮ್ಮೆಯ ಭಾವನೆಯನ್ನು ಉಂಟುಮಾಡುವ ಉದ್ದೇಶವೂ ಇರಬಹುದು. ಅದೇನೇ ಇರಲಿ, ಒಂದಂತೂ ಖಚಿತ. ಅದೇನೆಂದರೆ ಪ್ರಧಾನಮಂತ್ರಿಯೋರ್ವನ ಬಾಯಿಂದ ಬರತಕ್ಕದ್ದಲ್ಲದ ಇಂತಹ ಮಾತುಗಳಿಂದಾಗಿ ದೇಶದ ಘನತೆ, ಗೌರವ, ಮಾನ, ಮರ್ಯಾದೆಯನ್ನು ಬೀದಿಪಾಲು ಮಾಡಿದಂತಾಗಿದೆ. ●

ಗುಲ್ಬರ್ಗ್ ಸೊಸೈಟಿ ಹತ್ಯಾಕಾಂಡ...

12⇐

ಉಚ್ಚ ನ್ಯಾಯಾಲಯಕ್ಕೆ ಗುಜರಾತ್‌ನ ನ್ಯಾಯ ವ್ಯವಸ್ಥೆಯ ಮೇಲೆ ನಂಬಿಕೆಯಿರಲಿಲ್ಲ ಎಂಬುದು ಇದರಿಂದ ಸ್ಪಷ್ಟವಾಗುತ್ತದೆ. 2008ರಲ್ಲಿ ಉಚ್ಚ ನ್ಯಾಯಾಲಯವು ಒಂದು ವಿಶೇಷ ತನಿಖಾ ತಂಡ(ಸಿಟ್)ವನ್ನು ರಚಿಸಿತು. ಇದಕ್ಕೆ ಗುಲ್ಬರ್ಗ್ ಸೊಸೈಟಿ ಮತ್ತು ಎಂಟು ಇತರ ಪ್ರಕರಣಗಳ ತನಿಖೆಯ ಹೊಣೆಯನ್ನು ವಹಿಸಿತು. ಆದರೆ 'ಸಿಟ್' ಉನ್ನತ ಸ್ಥಾನದಲ್ಲಿದ್ದ ರಾಜಕೀಯ ನಾಯಕರಿಗೆ ಮತ್ತು ಮಂತ್ರಿಗಳಿಗೆ ಕ್ಲೀನ್‌ಚಿಟ್ ನೀಡಿತು. ಇದರ ಬಳಿಕ ಉಚ್ಚ ನ್ಯಾಯಾಲಯವು ಗಲಭೆಯಲ್ಲಿ ಗುಜರಾತ್‌ನ ಆಗಿನ ಮುಖ್ಯಮಂತ್ರಿ ನರೇಂದ್ರ ಮೋದಿ ಮತ್ತು ಇತರ ಉನ್ನತ ವ್ಯಕ್ತಿಗಳ ಪಾತ್ರ ಬಗ್ಗೆ ತನಿಖೆಗಾಗಿ ರಾಜು ರಾಮಚಂದ್ರನ್‌ರನ್ನು ನ್ಯಾಯಾಲಯದ ಮಿತ್ರ(ಅಮಿಕಸ್ ಕ್ಯೂರಿ)ನಾಗಿ ನೇಮಿಸಿತು. ರಾಮಚಂದ್ರರವರು 'ಸಿಟ್'ನ ಶೋಧನೆಯ ಕುರಿತಂತೆ ಅಸಮಾಧಾನ ವ್ಯಕ್ತಪಡಿಸುತ್ತಾ, ಆಗಿನ ಮುಖ್ಯಮಂತ್ರಿಯ ವಿರುದ್ಧ ಮೊಕದ್ದಮೆ ದಾಖಲಿಸಲು ಸಾಕಷ್ಟು ಆಧಾರಗಳಿವೆ ಎಂದು ಹೇಳಿದ್ದರು. ಇದರ ಬಳಿಕವೂ ದೊಡ್ಡ ಸಂಖ್ಯೆಯಲ್ಲಿ ಆರೋಪಿಗಳನ್ನು ಖುಲಾಸೆಗೊಳಿಸಿದುದರಿಂದ ಗಲಭೆ ಸಂತ್ರಸ್ತರಿಗೆ 'ಸಿಟ್' ಮೇಲೆ ನಂಬಿಕೆ ಕುಂದಿತು.

ಕೋಮುಗಲಭೆಯ ದೋಷಿಗಳಿಗೆ ಶಿಕ್ಷೆ ದೊರಕದಿರುವುದು ಇದೇ ಮೊದಲ ಬಾರಿಯೇನಲ್ಲ, ಸ್ವಾತಂತ್ರ್ಯಾ ನಂತರದಿಂದ ಈವರೆಗೆ ದೇಶದಲ್ಲಿ ಹಲವಾರು ಸಣ್ಣ-ದೊಡ್ಡ ಗಲಭೆಗಳಾಗಿವೆ ಮತ್ತು ಅದರ ತನಿಖೆಗಾಗಿ ಕಾಲಕಾಲಕ್ಕೆ 31 ನ್ಯಾಯಾಂಗ ಆಯೋಗಗಳನ್ನು ನೇಮಿಸಲಾಗಿತ್ತು, ಇವುಗಳಲ್ಲಿ ಶ್ರೀಕಷ್ಣ ಆಯೋಗವೂ ಒಂದು. ಆ ಆಯೋಗವು ತನ್ನ ವರದಿಯಲ್ಲಿ ಗಲಭೆಯಲ್ಲಿ ಶಿವಸೇನೆ ಮತ್ತು ಅದರ ನಾಯಕ ಬಾಳಾ ಠಾಕ್ರೆಯ ಪಾತ್ರವನ್ನು ಗುರುತಿಸಿತ್ತು. ಶ್ರೀಕಷ್ಣ ಆಯೋಗದ ವರದಿ ಹೇಳುವುದೇನೆಂದರೆ "ಜನವರಿ 8ರಂದು, 1993ರ ಬಳಿಕ ಶಿವಸೇನೆ ಮತ್ತು ಶಿವಸೇನೆಯ ಕಾರ್ಯಕರ್ತರು ತಮ್ಮ ನಾಯಕರ ನಿರ್ದೇಶನದ ಮೇರೆಗೆ ಮುಸ್ಲಿಮರು ಮತ್ತು ಅವರ ಸಂಪತ್ತನ್ನು ಗುರಿಪಡಿಸಿದ್ದರು." ಗಲಭೆಯ ಮುಂಚೂಣಿಯಲ್ಲಿ ಶಿವಸೇನಾದ ಶಾಖೆಯ ಪ್ರಮುಖರು ಸೇರಿದಂತೆ ಅದರ ಮುಖ್ಯಸ್ಥ ಬಾಳಾ ಠಾಕ್ರೆಯೂ ಪಾಲ್ಗೊಂಡಿದ್ದರು. ವರದಿಯಲ್ಲಿ ಠಾಕ್ರೆಯನ್ನು ದಕ್ಷ ಮುಖ್ಯಸ್ಥ ಎಂದು ಹೇಳಲಾಗಿತ್ತು, ಏಕೆಂದರೆ ಆತನ ನೇತೃತ್ವದಲ್ಲಿ ಆತನ ನಿಷ್ಠಾವಂತ ಶಿವಸೈನಿಕರು ಮುಸ್ಲಿಮರ ಮೇಲೆ ಸಂಘಟಿತ ದಾಳಿ ನಡೆಸಿದ್ದರು.

ಇದರ ಬಳಿಕವೂ ಶಿವಸೇನೆ ಮತ್ತು ಅದರ ನಾಯಕರ ವಿರುದ್ಧ ಯಾವುದೇ ಅಪರಾಧ ಪ್ರಕರಣ ದಾಖಲಿಸಲಾಗಲಿಲ್ಲ, ವರದಿಯಲ್ಲಿ ಬಿಜೆಪಿಯು ಮಹಾ ಆರತಿ, ಮೆರವಣಿಗೆ ಮತ್ತು ರ್‍ಯಾಲಿಗಳನ್ನು ಆಯೋಜಿಸಿ ಇನ್ನಷ್ಟು ದ್ವೇಷ ಹರಡುವ ಭಾಷಣ ಮಾಡಿ ಕೋಮುಹಿಂಸೆಯ ಧಗೆಯನ್ನು ಪ್ರಚೋದಿಸಿದ ದೋಷಿ ಎಂದು ಹೇಳಿತ್ತು. ವಿಡಂಬನೆ ಎಂದರೆ ಯಾವಾಗ ಸ್ವಯಂ ಸರಕಾರದ ಮೂಲಕ ನೇಮಿಸಲಾದ ನ್ಯಾಯಾಂಗ ತನಿಖಾ ಆಯೋಗ ಈ ರೀತಿಯಾಗಿ ಬಹಳ ಸ್ಪಷ್ಟ ತೀರ್ಮಾನಕ್ಕೆ ಬಂದರೆ, ಆವಾಗ ಆ ವರದಿಗಳನ್ನು ಕಸದಬುಟ್ಟಿಗೆ ಎಸೆಯಲಾಗುತ್ತದೆ. ಮತ್ತೊಂದೆಡೆ ಗುಜರಾತ್‌ನಲ್ಲಿ ರೈಲಿಗೆ ಬೆಂಕಿ ಹಚ್ಚಿದ ಘಟನೆ ಕುರಿತು ತಕ್ಷಣದಲ್ಲಿ ಯಾವುದೇ ತನಿಖೆಯಿಲ್ಲದೆಯೂ ಈ ಘಟನೆಗೆ ಮುಸ್ಲಿಮರು ಹೊಣೆಗಾರರು ಎಂದು ಆಗಿನ ಮುಖ್ಯಮಂತ್ರಿ ಸ್ಪಷ್ಟ ಶಬ್ದಗಳಲ್ಲಿ ಘೋಷಿಸಿದ್ದರು. ಇದರ ನೆಪವೊಡ್ಡಿ ಇಡೀ ಪ್ರದೇಶದಲ್ಲಿ ಮುಸ್ಲಿಮರ ವಿರುದ್ಧ ಭೀಭತ್ಸ ಹಿಂಸೆ ನಡೆಸಲಾಯಿತು. ಗುಲ್ಬರ್ಗ್ ಸೊಸೈಟಿ ಘಟನೆಯಲ್ಲಿ 69 ಮಂದಿಯ ಹತ್ಯೆಗೆ ಸಂಬಂಧಿಸಿ ಕೇವಲ 11 ಆರೋಪಿಗಳಿಗೆ ಹತ್ಯಾ ಆರೋಪದಲ್ಲಿ ಶಿಕ್ಷೆಯನ್ನು ನೀಡಲಾಯಿತು. ಇತರರನ್ನು ಕಡಿಮೆ ಗಂಭೀರ ಆರೋಪದಲ್ಲಿ ತಪ್ಪಿತಸ್ಥರೆಂದು ನಿರ್ಣಯಿಸಲಾಯಿತು.

ಸ್ವಾತಂತ್ರ್ಯಾನಂತರದ ಬಳಿಕ ನಡೆದ ಕೋಮುಹಿಂಸೆಯಲ್ಲಿ ಸರಿಸುಮಾರು 40,000 ಮಂದಿ ಜನರು ತಮ್ಮ ಜೀವವನ್ನು ಕಳೆದುಕೊಂಡಿದ್ದಾರೆ. ಈ ಘಟನೆಗಳಲ್ಲಿ ಸಂತ್ರಸ್ತರಿಗೆ ನ್ಯಾಯ ದೊರಕಿಲ್ಲ ಎಂಬುದು ಈ ಎಲ್ಲವುಗಳಿಂದ ಸ್ಪಷ್ಟವಾಗುತ್ತದೆ.

ಈ ಪರಿಸ್ಥಿತಿಯನ್ನು ಬದಲಾಯಿಸಲು ಮತ್ತು ರಾಜ್ಯದಲ್ಲಿ ನಾಗರಿಕರ ನಂಬಿಕೆಯನ್ನು ಮರುಸ್ಥಾಪಿಸಲು ಕೆಲವು ಹೆಜ್ಜೆಗಳನ್ನು ಇಡಬೇಕಾಗಿದೆ.

1. ಪೊಲೀಸರು ಎಫ್‌ಐಆರ್ ದಾಖಲಿಸಲು ತಡಮಾಡಬಾರದು ಮತ್ತು ಫಿರ್ಯಾದಿದಾರರ ದೂರನ್ನು ನಿಷ್ಪಕ್ಷಪಾತವಾಗಿ ತನಿಖೆ ನಡೆಸಿ ಸಾಕ್ಷ್ಯಾಧಾರಗಳನ್ನು ಕಲೆಹಾಕಬೇಕು.

2. ಪೊಲೀಸ್ ಮತ್ತು ನ್ಯಾಯವ್ಯವಸ್ಥೆಯನ್ನು ರಾಜಕೀಯ ಪಕ್ಷಗಳ ಒತ್ತಡದಿಂದ ಮುಕ್ತಗೊಳಿಸಬೇಕು.

3. ಗಲಭೆ ಸಂತ್ರಸ್ತರು ಭಯಭೀತಗೊಂಡಿರುತ್ತಾರೆ ಮತ್ತು ಅವರ ಮನಸ್ಸಿನಲ್ಲಿ ಅಸುರಕ್ಷತೆಯ ಭಾವನೆ ಮನೆ ಮಾಡಿರುತ್ತದೆ ಎಂಬ ವಾಸ್ತವವನ್ನು ಗಮನದಲ್ಲಿಟ್ಟುಕೊಂಡು, ಸಂತ್ರಸ್ತರು ಮತ್ತು ಸಾಕ್ಷಿದಾರರು ನಿರ್ಭೀತಿಯಿಂದ ನ್ಯಾಯಾಲಯಗಳಲ್ಲಿ ತಮ್ಮ ಹೇಳಿಕೆಯನ್ನು ದಾಖಲಿಸುವಂತಹ ವಾತಾವರಣವನ್ನು ನಿರ್ಮಾಣ ಮಾಡಬೇಕು.


4. ಕೋಮುಗಲಭೆಗೆ ಸಂಬಂಧಿಸಿದ ಪ್ರಕರಣಗಳ ಇತ್ಯರ್ಥದ ಸಮಯದ ಮಿತಿಯನ್ನು ನಿರ್ಧರಿಸಬೇಕು.

5. ಉದ್ದೇಶಿತ ಹಿಂಸೆಗೆ ಕಡಿವಾಣ ಹಾಕಲು ಹೊಸ ಕಾನೂನು ರಚಿಸಬೇಕು.

ನಾಗರಿಕರಿಗೆ ನ್ಯಾಯಾಂಗ ವ್ಯವಸ್ಥೆಯಲ್ಲಿ ನಂಬಿಕೆ ಮೂಡಿದಾಗ ಮತ್ತು ಸಂತ್ರಸ್ತರಿಗೆ ತ್ವರಿತ ಹಾಗೂ ನಿಷ್ಪಕ್ಷಪಾತ ನ್ಯಾಯ ದೊರೆತಾಗಲೇ ಪ್ರಜಾಪ್ರಭುತ್ವ ಮತ್ತು ಕಾನೂನಿನ ನಿಯಮಗಳು ಸ್ಥಿರವಾಗಿರುತ್ತವೆ.

ಸೌಜನ್ಯ: ಹಸ್ತಕ್ಷೇಪ್.ಕಾಮ್
ಹಿಂದಿ ಮೂಲ: ನೇಹಾ ದಾಭಾಡೆ
ಕನ್ನಡಕ್ಕೆ: ರಿಝಿಯಾವುಲ್ ಹುಸ್. ಎಚ್

ದ್ವೇಷದ ಬೆಳೆ, ಸ್ವಸ್ಥ ಸಮಾಜದ ವಿನಾಶಕಾರಿ ಕಳ



25 ವರ್ಷಗಳ ಹಿಂದೆ ಬಾಬ್ರಿ ಮಸೀದಿ ಧ್ವಂಸದ ಹಿನ್ನೆಲೆಯಲ್ಲಿ ಇಡೀ ದೇಶವೇ ಹೊತ್ತಿ ಉರಿದಿತ್ತು. ಇದೊಂದು ಉದ್ದೇಶಪೂರ್ವಕವಾಗಿ ಹಬ್ಬಿಸಲಾದ ವ್ಯವಸ್ಥಿತ ಸಂಚಾಗಿದ್ದ ಕಾರಣ ಎಲ್ಲೆಂದರಲ್ಲಿ ಹಿಂಸಾಚಾರಗಳು ನಡೆದವು. ಆರಂಭದಿಂದಲೂ ಆರಕ್ಕೇರದೇ ಮೂರಕ್ಕಿಳಿಯದೇ ಒದ್ದಾಡುತ್ತಿದ್ದ ಬಲಪಂಥೀಯ ರಾಜಕಾರಣಿಗಳಿಗೆ ಅವರ ನಿರೀಕ್ಷೆಯಂತೆ ಇದು ಶಿಹಿಗಳಿಗೆಯಾಗಿ ಅವರ ಉಜ್ವಲ ಭವಿಷ್ಯಕ್ಕೆ ನಾಂದಿಯೆನಿಸಿತಾದರೂ ದೇಶದಲ್ಲಿ ಲೆಕ್ಕವಿಲ್ಲದಷ್ಟು ಕಹಿನೆನಪುಗಳನ್ನು ಇದು ದಾಖಲಿಸಿ ಹೋಗಿದ್ದನ್ನು ಈ ನಾಡು ಎಂದೂ ಮರೆಯದು. ವಿಚಿತ್ರವೆಂದರೆ ಕಾರ್ಮೋಡದ ನಡುವಿನ ಬೆಳ್ಳಿಗೆರೆಯಂತೆ ಎರಡು ಕೋಮುಗಳ ನಡುವಿನ ದ್ವೇಷ ತಾರಕಕ್ಕೇರಿ ನಡೆದ ಈ ಘಟನೆಯಲ್ಲಿಯೇ ಕೆಲ ಅವಿಸ್ಮರಣೀಯ ಸಂಗತಿಗಳೂ ಅಲ್ಲಲ್ಲಿ ಜರುಗಿ ಸುದ್ದಿಯಾದವು. ಮುಸ್ಲಿಮ್ ಬಾಹುಳ್ಯದ ಪ್ರದೇಶದಲ್ಲಿ ಸಿಕ್ಕಿಬಿದ್ದ ಹಿಂದೂಗಳನ್ನು ಜೀವವನ್ನು ಒತ್ತೆಯಿಟ್ಟು ಅನೇಕ ಮುಸಲ್ಮಾನ ಸಮುದಾಯಗಳು ರಕ್ಷಿಸಿದ್ದರೆ ಮುಸಲ್ಮಾನ ಯುವತಿಯರನ್ನು ಕೋಮುವಿದ್ವೇಷದ ಕಾವು ತಣ್ಣಗಾಗುವ ತನಕ ಮನೆಯಲ್ಲಿ ಜೋಪಾನವಾಗಿ ರಕ್ಷಿಸಿದ ಹಿಂದೂ ಕುಟುಂಬಗಳೂ ಸಾಕಷ್ಟಿದ್ದವು. ಗಮನಿಸಿ, ಇದು ಯಾರೂ ಕೂಡ ಮಾಡಬಹುದಾದ ಸಾಮಾನ್ಯವೆನಿಸಿದ ಕಾರ್ಯವಲ್ಲ. ದ್ವೇಷ ಹಾಗು ಮಾರಣಹೋಮವನ್ನೇ ತಲೆಗೆ ತುಂಬಿಕೊಂಡಂತಹ ಪುಂಡರ ವಿರೋಧ ಹಾಗು ದಾಳಿಗಳ ಭಯದ ಹಿನ್ನೆಲೆಯಲ್ಲಿ ಅಪಾಯವನ್ನು ಮೈಮೇಲೆಳೆದುಕೊಂಡು ಯಾವ ಪ್ರತಿಫಲಾಪೇಕ್ಷೆಗಳಿಲ್ಲದೇ ಮಾಡಿದಂತಹ ಕಾರ್ಯಗಳವು.

ಶತಮಾನಗಳ ಕಾಲ ನಮ್ಮನ್ನಾಳಿ ದೋಚಿದರೆಂದು ಭಾವಿಸಲಾಗುವ ಇಂಗ್ಲಿಷರು ನಮ್ಮ ವೈರಿಗಳಲ್ಲ. ಆಗಾಗ ಜನಾಂಗೀಯವಾಗಿ ಭಾರತೀಯರನ್ನು ಅವಮಾನಿಸುತ್ತಿರುವ ಆಸ್ಟ್ರೇಲಿಯನ್ನರೂ ನಮ್ಮ ವೈರಿಗಳಲ್ಲ. ನಮ್ಮ ಪ್ರಧಾನಿಯನ್ನೇ ಕೊಂದ ಶ್ರೀಲಂಕನ್ನರೂ ನಮ್ಮ ವೈರಿಗಳಲ್ಲ. ಚೀನಾವನ್ನು ತರಲೆ ದೇಶ ಎನ್ನುವರೇ ವಿನಹ ದೊಡ್ಡ ಶತ್ರು ರಾಷ್ಟ್ರ ಎನ್ನುವವರು ಕಡಿಮೆ. ಆದರೆ ನೆರೆಯ ಪಾಕಿಸ್ತಾನ ಮಾತ್ರ ನಮ್ಮ ಅಪ್ಪಟ ಶತ್ರು ರಾಷ್ಟ್ರವೆಂಬ ಭಾವ ಅನೇಕರಲ್ಲಿದೆ. ಇಷ್ಟೆಲ್ಲ ಬಲವಾದ ಪೂರ್ವಾಗ್ರಹವಿದ್ದರೂ ದಶಕದ ಹಿಂದೆ ಹೃದಯ ಶಸ್ತ್ರಚಿಕಿತ್ಸೆಗೆಂದು ಬೆಂಗಳೂರಿನ ನಾರಾಯಣ ಹೃದಯಾಲಯಕ್ಕೆ ಬಂದ ಎರಡು ವರ್ಷ ವಯಸ್ಸಿನ ನೂರ್ ಫಾತಿಮಾ ಎಂಬ ಪಾಕಿಸ್ತಾನಿ ಬಾಲಕಿಯ ನೋವಿಗೆ ಇಲ್ಲಿಯ ಜನ ಸ್ಪಂದಿಸಿದ ರೀತಿ ನೋಡಿದರೆ ಎಂಥಾ ಬದ್ಧ ದ್ವೇಷಕ್ಕೂ ಮಿತಿಗಳಿವೆ ಎಂಬ ಸ್ಪಷ್ಟತೆ ಎಲ್ಲರಲ್ಲೂ ಎದ್ದು ಕಾಣುತ್ತಿತ್ತು. ಅಂದರೆ ಪಾಕ್ ನಮ್ಮ ವೈರಿರಾಷ್ಟ್ರವಿದ್ದಿರಬಹುದು ಆದರೆ ಇಲ್ಲಿಗೆ ಬಂದ ಫಾತಿಮ ಪಾಕಿಸ್ತಾನಿ ಎನ್ನುವುದಕ್ಕಿಂತ ನಮ್ಮದೇ ಒಬ್ಬ ಮಗಳಿದ್ದಂತಲ್ಲವೇ ಎಂದು ಜನ ಆವಳ ನೋವಿಗೆ ಸ್ಪಂದಿಸಿದ್ದರು.

ಇವೆಲ್ಲಾ ಯಾಕೆ ನೆನಪಿಗೆ ಬಂತೆಂದರೆ ಇತ್ತೀಚೆಗೆ ಕುಂದಾಪುರದ ತ್ರಾಸಿ ಎಂಬಲ್ಲಿ ನಡೆದ ಶಾಲಾವಾಹನ ಅಪಘಾತದಲ್ಲಿ ಎಂಟು ಜನ ಹಸುಳೆಗಳು ದಾರುಣವಾಗಿ ಮೃತಪಟ್ಟಿದ್ದವು. ಕೆಲ ಕುಟುಂಬವಂತೂ ಎರಡೆರಡು ಮಕ್ಕಳನ್ನು ಕಳೆದುಕೊಂಡ ಆಘಾತದಲ್ಲಿದ್ದರೆ ಅನೇಕರು ಗಾಯಾಳುಗಳಾಗಿದ್ದರು. ಇಂತಹ ದಾರುಣ ಸನ್ನಿವೇಶದಲ್ಲೂ ಇದೇ ಕರಾವಳಿ ಪರಿಸರದ ಶಂಕರ ಪ್ರಸಾದ್ ಎನ್ನುವ ಹೊಲಸು ಮನುಷ್ಯನೊಬ್ಬ ತನ್ನ ಫೇಸ್‌ಬುಕ್‌ನಲ್ಲಿ "ಪ್ರೋಯಿನಿ ಮಾತ ಪೊರ್ಬುಲು ಅತ್ತ್. ಬುಡ್ಲೇ? ನಂಕ್ ದಾನೇ" (ಸತ್ತವರೆಲ್ಲರೂ ಕ್ರಿಶ್ಚಿಯನ್ನರಲ್ಲವೇ? ಬಿಡಿ? ನಮಗೇನಂತೇ?) ಎಂಬ ಸ್ಟೇಟಸ್ ಹಾಕಿ ಸಂಭ್ರಮಿಸಿದ್ದರೆ ಮತ್ತೆ ಕೆಲವರು ಕೊಚ್ಚೆಯಲ್ಲಿ ಮೀನುಹಿಡಿಯುವ ಕುಸಾಹಸಕ್ಕಿಳಿದು ಯಾವುದೋ ಕಾಲದಲ್ಲಿ ಎಲ್ಲೋ ನಡೆದ ರಕ್ತದಾನದ ಫೋಟೋವನ್ನು ಅಪ್ ಲೋಡ್ ಮಾಡಿ ಇದು ಹಸುಳೆಗಳಿಗಾಗಿ ದೇಶಭಕ್ತರುಗಳ ಮನಮಿಡಿದು ರಕ್ತದಾನ ಮಾಡುತ್ತಿರುವುದು ಎಂದು ಸುದ್ದಿ ಹಬ್ಬಿಸಿದ್ದವು. ಇನ್ನು ಕೆಲವರಂತೂ ತುರ್ತಾಗಿ ಯಾವುದೋ ಗ್ರೂಪಿನ ರಕ್ತ ಬೇಕಾಗಿದೆ ಎಂದು ಯಾವುದೋ ಸುಳ್ಳು ನಂಬರ್‌ಗಳನ್ನು ಕೊಟ್ಟು ಈ ಕಂದಮ್ಮಗಳ ಸಾವುಗಳನ್ನು 'ಏಪ್ರಿಲ್ ಫೂಲ್' ನಂತಹ ಮೋಜಿನ ಆಟಕ್ಕಾಗಿ ಬಳಸಿಕೊಂಡವು. ಇವುಗಳಂತಹ ದರಿದ್ರ ನೀಚತನ ಇನ್ನೊಂದುಂಟೇ?

ಅನಂತಮೂರ್ತಿಯವರ ನಿಲುವುಗಳು ಎಲ್ಲರಿಗೂ ಇಷ್ಟವಾಗಲೇ ಬೇಕೆಂದೇನಿಲ್ಲ, ಹಾಗಂತ ಅವರ ಅಥವ ಅಂತವರ ಸಾವನ್ನು ಪಟಾಕಿ ಹೊಡೆದು ಸಂಭ್ರಮಿಸುವ ಮನಸ್ಥಿತಿಯ ಜನರೂ ನಮ್ಮ ನಡುವೆ ವ್ಯಾಪಿಸುತ್ತಿದ್ದಾರೆಂಬುದು ಇತ್ತೀಚೆಗೆ ಸಾಬೀತಾಗಿತ್ತು. ಪ್ರಭಾ ಬೆಳವಂಗಲರಿಂದ ಹಿಡಿದು ಬರ್ಖಾ ದತ್‌ರವರೆಗೆ ದಿ ಗ್ರೇಟ್ ಸಂಸ್ಕೃತಿ ರಕ್ಷಕರುಗಳಿಂದ ಹೆಣ್ಣನ್ನು ಅವಮಾನಿಸುವ ಕೆಟ್ಟಾ ಕೊಳಕು ಭಾಷೆಯಲ್ಲಿ ಬೆದರಿಸಿಕೊಂಡಂತಹ ಹೋರಾಟಗಾರ್ತಿಯರು ಈ ನಾಡಿನಲ್ಲಿ ಸಾಕಷ್ಟಿದ್ದಾರೆ. ತಲೆಯಲ್ಲಿ ಬರೀ ಹೊಲಸನ್ನೇ ತುಂಬಿಸಿ ಛೂ ಬಿಡಲ್ಪಟ್ಟ ಇಂತವರ ನಡೆಗಳಿಗೂ ಇವರ ನಾಯಕರುಗಳು ವೇದಿಕೆಗಳಲ್ಲಿ ಭರ್ಜರಿಯಾಗಿ ಊದುವ ಆದರ್ಶಗಳಿಗೂ ಒಂದಕ್ಕೊಂದು ತಾಳೆಯಾಗುವುದೇ ಇಲ್ಲ.

ಶಂಕರ ಪ್ರಸಾದ್‌ನಂತಹ ದ್ವೇಷವನ್ನೇ ಹೊತ್ತು ಮೆರೆವ ಹೊಲಸು ಸಂತಾನ ದಿನೇದಿನೇ ಕಳವಳಕಾರಿಯಾಗಿ ಎಲ್ಲೆಂದರಲ್ಲಿ ಬೆಳೆಯುತ್ತಿರುವುದು ಸ್ವಸ್ಥ ಸಮಾಜದ ತಳಪಾಯವನ್ನೇ ಅಲುಗಿಸುವಂತಿದೆ. ಯುವ ಜನಾಂಗದಲ್ಲಿ ದ್ವೇಷವನ್ನು ಬಿತ್ತಿ ತಮ್ಮ ಸ್ವಾರ್ಥಕ್ಕಾಗಿ ಬಳಸಿಕೊಳ್ಳುವ ಗೋಮುಖ ವ್ಯಾಘ್ರರ ನಾಜೂಕಿನ ಪಡೆ ಇಂಥವರ ಹಿಂದೆ ನಿಂತು ಪ್ರೋತ್ಸಾಹಿಸುತ್ತಿರುವುದು ಬಹಿರಂಗ ಸತ್ಯ. ಜನ ಎಚ್ಚೆತ್ತುಕೊಳ್ಳದಿದ್ದರೆ ನಾಳೆ ನಿಮ್ಮ ಮಗನೇ ಸತ್ತವನು ಅಪ್ಪನಾದರೇನಂತೆ ನಮ್ಮ ಸಿದ್ಧಾಂತ ಒಪ್ಪದವ ಇದ್ದರೇನು ಬಿಟ್ಟರೇನು.. ಥೂ.. ಎಂದು ನಿಮ್ಮ ಮುಖಕ್ಕೇ ಉಗಿಯುವ ದಿನ ಬರಬಹುದು. ಇಲ್ಲಾ ನಿಮ್ಮ ಸಾವನ್ನೇ ಸಂಭ್ರಮಿಸಿ ಸಿಹಿ ಹಂಚಿ ಮೆರೆಯಬಹುದು?

- ಆರ್‌ಎಸ್‌ಪಿ, ಮಂಗಳೂರು

ಋಷಿ-ಮುನಿಗಳ ಅಂತರ್ಜ್ಞಾನವೆಲ್ಲಾ ಕಾಲ್ಪನಿಕ

ಪುರಾಣಕಾಲದಿಂದಲೂ ಸಂಸ್ಕೃತ ಯಾವುದೇ ಜನಾಂಗದ ಮಾತೃಭಾಷೆ ಅಥವಾ ಆಡುಭಾಷೆ ಆಗಿರಲೇ ಇಲ್ಲ. ಆದರೂ ಮೂರು ಸಾವಿರ ವರ್ಷಗಳ ಹಿಂದೆ ಸಂಸ್ಕೃತ ಭಾಷೆಯಲ್ಲಿ ವಾಲ್ಮೀಕಿ ಮತ್ತು ವೇದವ್ಯಾಸ ರಾಮಾಯಣ ಮತ್ತು ಮಹಾಭಾರತ ಬರೆದರೆಂದು ಹೇಳುತ್ತಾರೆ. ಹಾಗಾದರೆ 3000 ವರ್ಷ ಹಳೆಯ ಒಂದಾದರೂ ಸಂಸ್ಕೃತ ಬರಹ ಇರುವ ತಾಳೆಯೋಲೆ, ತಾಮ್ರಪತ್ರ, ಅಥವಾ ಕಲ್ಲಿನ ಶಾಸನ ಯಾರಿಗಾದರೂ ಈವರೆಗೆ ಲಭ್ಯವಾಗಿದೆಯೇ? ಕುರುಕ್ಷೇತ್ರ ಯುದ್ಧದ ಮಧ್ಯದಲ್ಲಿ 88 ವರ್ಷದ ಮುದುಕ ಅರ್ಜುನನಿಗೆ 90 ವರ್ಷ ವಯಸ್ಸಿನ ವೃದ್ಧ ಕೃಷ್ಣನು ಸಂಸ್ಕೃತ ಭಾಷೆಯಲ್ಲಿ ಕಾವ್ಯ ರೂಪದಲ್ಲಿ ಭಗವದ್ಗೀತೆ ಬೋಧಿಸಿದನೆಂಬುದು ಎಲ್ಲರ ಡಿಫಾಲ್ಟ್ ನಂಬಿಕೆ. ಕೃಷ್ಣ ಹೇಳಿದ್ದನ್ನು ಯಾವುದೋ ಲಿಪಿಯಲ್ಲಿ ಅಕ್ಷರಶಃ ಬರೆದುಕೊಳ್ಳಲು ಸ್ಟೆನೋಗ್ರಾಫರ್ ವೇದವ್ಯಾಸ ಅಲ್ಲಿ ಹಾಜರಿದ್ದನೆ? ವ್ಯಾಸ ಯುದ್ಧ ಭೂಮಿಯಲ್ಲಿ ಹಾಜರಿರದಿದ್ದರೂ ಅವನಿಗೆ ಕೃಷ್ಣ ಬೋಧಿಸಿದ್ದೆಲ್ಲಾ ಒಂದಕ್ಷರ ಬಿಡದೇ ಹೇಗೆ ತಿಳಿಯಿತು? ಅಂತರ್ಜ್ಞಾನದಿಂದಲೋ? ಋಷಿಮುನಿಗಳಿಗೆಲ್ಲಾ ಅಂತರ್ಜ್ಞಾನ ಇರುತ್ತದೆ ಎಂಬ ಕುರುಡು ನಂಬಿಕೆ ಅರ್ಥಾತ್ ಡಿಫಾಲ್ಟ್ ನಂಬಿಕೆ ಎಲ್ಲರಲ್ಲೂ ಇದೆ. ಹಾಗಾದರೆ 85 ವರ್ಷ ದಾಟಿರುವ ಕರಾವಳಿಯ ಈಗಿನ ಕಾವಿಧಾರಿಗಳಿಗೆ ಮತ್ತು ಮಠಾಧೀಶರಿಗೆ ಇಳಿ ವಯಸ್ಸಿನಲ್ಲಿಯೂ ಅಂತರ್ಜ್ಞಾನ ಬಿಡಿ ಸಾಧಾರಣ ಜ್ಞಾನವೂ ಯಾಕೆ ಇನ್ನೂ ಹುಟ್ಟಿಲ್ಲ? ಆಗಿನ ಋಷಿಗಳು ಒಂದೆಡೆ ಕುಳಿತು ತಪಸ್ಸು ಮಾಡಿದ ಕೂಡಲೇ ಅವರ ಮೆದುಳಲ್ಲಿ ಅಂತರ್ಜ್ಞಾನ ಎಂಬ ಆಪ್ (APP) ಇನ್‌ಸ್ಟಾಲ್ ಆಗಿಬಿಡುತ್ತಿತ್ತಂತೆ. ಆ ಆಪ್ ಮುಖಾಂತರ ಋಷಿಗಳು ಹಿಂದೆ ಆಗಿದ್ದೆಲ್ಲಾ ಹಾಗೂ ಮುಂದೆ ಆಗುವುದೆಲ್ಲದರ ಪೂರ್ಣ ಜ್ಞಾನವನ್ನು ತಮ್ಮ ಮೆದುಳಲ್ಲಿ ಡೌನ್‌ಲೋಡ್ ಮಾಡಿಕೊಳ್ಳುತ್ತಿದ್ದರಂತೆ. ಹಾಗಾಗಿ ಸಂಸ್ಕೃತ ಭಾಷೆಗೆ ಲಿಪಿ ಇಲ್ಲದಿದ್ದರೂ ಋಷಿ-ಮುನಿಗಳು ಹಿಂದೆ ಆಗಿ ಹೋಗಿದ್ದನ್ನೆಲ್ಲಾ ತಮ್ಮ ಮೆದುಳಿನಲ್ಲಿ ಡೌನ್‌ಲೋಡ್ ಮಾಡಿಕೊಂಡು ತಮ್ಮ ಕೋಡ್ ಲ್ಯಾಂಗ್ವೇಜ್ ಅರ್ಥಾತ್ ಗುಪ್ತ ಭಾಷೆಯಾದ ಸಂಸ್ಕೃತದಲ್ಲಿ ನೆನಪಿಟ್ಟುಕೊಂಡು ಅದನ್ನು ಮೌಖಿಕವಾಗಿಯೇ ಮುಂದಿನ ವೈದಿಕರ ಪೀಳಿಗೆಗೆ ಮಾತ್ರ ದಾಟಿಸುತ್ತಿದ್ದರಂತೆ. ಇದನ್ನು ಮನಶಾಸ್ತ್ರಜ್ಞರು ಒಪ್ಪುವುದೇ ಇಲ್ಲ, ಕಾರಣ ಮೌಖಿಕವಾಗಿ ದಾಟಿಸಿದ ಯಾವುದೇ ಮಾಹಿತಿ ಕಾಲಕ್ಕೆ ಅನುಗುಣವಾಗಿ ವಿರೂಪಗೊಳ್ಳಲೇಬೇಕು. ಯಾಕೆಂದರೆ ಕೆಲವರ ತಲೆಯೊಳಗಿನ ಮೆದುಳು ಎಂಬ ಹಾರ್ಡ್ ಡಿಸ್ಕ್ ಮತ್ತು ಬುದ್ಧಿ ಎಂಬ ಸಾಫ್ಟ್‌ವೇರ್ ಕಡಿಮೆ ಕೆಪ್ಯಾಸಿಟಿಯದ್ದು ಅಥವಾ ಹಳೆಯ ಔಟ್-ಡೇಟೆಡ್ ಮಾಡೆಲ್ ಆಗಿರುತ್ತದೆ. ಇನ್ನು ಕೆಲವರ ತಲೆಯಲ್ಲಿಯ ಸಾಫ್ಟ್‌ವೇರ್ ಕೋಮು, ಜಾತಿ, ಮತ್ಸರ, ದ್ವೇಷ, ಸ್ವಾರ್ಥ ಎಂಬ ವೈರಸ್‌ಗಳಿಂದ ಕರಪ್ಟ್ ಆಗಿರುತ್ತದೆ. ಇಂತಹ ಪರಿಸ್ಥಿತಿಯಲ್ಲಿ ಒಂದು ಮಾಹಿತಿ ಅಥವಾ ಜ್ಞಾನ ಸಹ ಕರಪ್ಟ್ ಆಗಿಯೇ ವೈರಸ್ ಸಹಿತ ಮುಂದಿನ ಪೀಳಿಗೆಗೆ ದಾಟುತ್ತದೆ. ಇದಕ್ಕೆ ಅತ್ಯುತ್ತಮ ಉದಾಹರಣೆ ಮನುಸ್ಮೃತಿ.

ನಾನು 1973ರಲ್ಲಿ ಮುಂಬೈಯಲ್ಲಿ ಹೊಸದಾಗಿ ಬ್ಯಾಂಕ್ ಗುಮಾಸ್ತ ಕೆಲಸಕ್ಕೆ ಸೇರಿದಾಗ ಮೊದಲ ತರಬೇತಿಗಾಗಿ ನಮ್ಮ ಬ್ಯಾಂಕಿನ ತರಬೇತಿ ಕೇಂದ್ರಕ್ಕೆ ನನ್ನನ್ನು ಕಳುಹಿಸಿದರು. ಮೂರು ವಾರದ ಬ್ಯಾಂಕಿಂಗ್ ತರಬೇತಿಯ ನಂತರ ಕೊನೆಯ ದಿನ ನಮ್ಮ ದೈನಂದಿನ ಜೀವನದಲ್ಲಿ ಒಂದು ಮಾಹಿತಿ ಅಥವಾ ಸುದ್ದಿ ಯಾವ ರೀತಿ ವಿರೂಪಗೊಳ್ಳುತ್ತದೆ ಎಂಬುದಕ್ಕೆ ನಮ್ಮ ತರಬೇತುದಾರರು ಒಂದು ಪ್ರತ್ಯಕ್ಷ ಪ್ರಯೋಗ ಈ ರೀತಿ ಮಾಡಿ ತೋರಿಸಿದರು- ನಮ್ಮಲ್ಲಿಯ 40 ಅಭ್ಯರ್ಥಿಗಳಲ್ಲಿ ಎಂಟು ಜನರನ್ನು ಕ್ಲಾಸಿನ ಹೊರಗೆ ಕಳುಹಿಸಿ ಉಳಿದ 32 ಜನರಿಗೆ ಒಂದೊಂದು ಚೀಟಿ ಕೊಟ್ಟರು. ಎಲ್ಲರ ಚೀಟಿಯಲ್ಲೂ ಒಂದು ಘಟನೆ ಈ ಕೆಳಗಿನಂತೆ ವಿವರಿಸಲ್ಪಟ್ಟಿತ್ತು:

"ಆ ದಿನ ಬ್ಯಾಂಕ್ ಮ್ಯಾನೇಜರ್ ತಮ್ಮ ಹೆಂಡತಿಯ ಜನ್ಮದಿನ ಆಚರಿಸಲು ರಜೆಯಲ್ಲಿದ್ದರು. ಸಂಜೆ ಬಿಡುವ ಹೊತ್ತಿಗೆ ಅಸಿಸ್ಟೆಂಟ್ ಮ್ಯಾನೇಜ ಮ್ಯಾನೇಜರರಿಂದ ಒಂದು ಫೋನ್ ಬಂತು. ಕಚೇ ಸಿಬ್ಬಂದಿಯನ್ನೆಲ್ಲಾ ಕರೆದುಕೊಂಡು ಅವರ ಮನೆಗೆ ಪತ್ನಿಯ ಜನ್ಮದಿನದ ಪಾರ್ಟಿಗೆ ಬರಬೇಕೆಂದು ಮ್ಯಾನೇ ಆಹ್ವಾನಿಸಿದರು. ಆಗಲೇ ಮ್ಯಾನೇಜರರ ಕಾರ್ ಡ್ರೈ ಆಫೀಸಿಗೆ ಓಡುತ್ತಾ ಬಂದು ತಾನು ಎಲ್ಲಾ ಸಿಬ್ಬಂದಿ ಮ್ಯಾನೇಜರ್ ಮನೆಯ ಪಾರ್ಟಿಗೆ ತಕ್ಷಣ ಕರೆದುಕೊ ಹೋಗಲು ಬಂದಿರುವುದಾಗಿ ಹೇಳಿದನು. ಅಷ್ಟರಲ್ಲಿ ಗುಮಾಸ್ತ ಓಡಿಹೋಗಿ ಎಲ್ಲರ ಪರವಾಗಿ ಒಂದು ಕಟ್ಟಿಸಿಕೊಂಡು ಬಂದನು. ನಂತರ ಎಲ್ಲಾ ಸಿಬ್ಬಂದಿ ಡ್ರೈವರನೊಟ್ಟಿಗೆ ಮ್ಯಾನೇಜರರ ಮನೆಗೆ ಹೋಗಿ ಹೆಂಡತಿಗೆ ಜನ್ಮದಿನದ ಶುಭಾಶಯ ಸಲ್ಲಿಸಿ ಪಾರ್ಟಿ ಶಾಮೀಲಾದರು."

ಇದಿಷ್ಟೇ ಆ ಚೀಟಿಯಲ್ಲಿ ಬರೆದಿದ್ದ ಘಟನೆ. ಹೊ ಕಳುಹಿಸಲ್ಪಟ್ಟ ಎಂಟು ಜನರಿಗೆ ಈ ಚೀಟಿ ಬರೆದಿದ್ದೇನು ಎಂದು ಗೊತ್ತಾಗುವಂತಿರಲಿಲ್ಲ ಹಾಗೂ ಒಳಗೆ ಕ್ಲಾಸಿನಲ್ಲಿ ನಡೆಯುವ ಮಾತುಕತೆ ಸ್ಪ ಕೇಳಿಸಿಕೊಳ್ಳುವಂತೆಯೂ ಇರಲಿಲ್ಲ.

ಆ ನಂತರ ಹೊರಗಿದ್ದ ಎಂಟು ಜನ ಮೊದಲನೆಯವನನ್ನು ಒಬ್ಬಂಟಿಯಾಗಿ ಒಳಗೆ ಅವನಿಗೂ ಅದೇ ಚೀಟಿ ಕೊಟ್ಟು ಅದನ್ನು ಓದಿ ಅ ವಿವರಿಸಿರುವ ಘಟನೆ ಸರಿಯಾಗಿ ನೆನಪಿಟ್ಟುಕೊಳ್ಳಬೇ ಹೇಳಿ ಅವನಿಂದ ಆ ಚೀಟಿ ವಾಪಸು ಪಡೆಯಲಾಯ ಆಮೇಲೆ ಹೊರಗಿನಿಂದ ಎರಡನೆಯವನನ್ನು ಕರೆದು ಮೌಖಿಕವಾಗಿ ಮೊದಲನೆಯವನು ಆ ಚೀಟಿಯಲ್ಲಿ ಬ ಘಟನೆಯ ಬಗ್ಗೆ ತನಗೆ ನೆನಪಿರುವಷ್ಟು ವಿವರ ಕ್ಲಾಸಿನಲ್ಲಿ ಎದುರಲ್ಲಿಯೇ ಹೇಳಬೇಕಿತ್ತು. ಹೀಗೆ ಹೇಳುವಾಗ ಕ್ಲಾಸಿ ಬೇರೆ ಯಾರೂ ನಡುವೆ ಬಾಯಿ ಹಾಕುವಂತಿರಲಿಲ್ಲ ಅ ನಗುವಂತಿರಲಿಲ್ಲ. ಮೊದಲನೆಯವನು ಮೌಖಿಕ ಹೇಳಿದನ್ನು ಎರಡನೆಯವನು ನೆನಪಿಟ್ಟು ಹೊರಗಿ

ಕಾಂಗ್ರೆಸ್ ಮುಕ್ತ ಭಾರತದೆಡೆಗೆ ಕಾಂಗ್ರೆಸ್ಸಿಗರ ನ

ಸಿದ್ದರಾಮಯ್ಯ ತನ್ನ ಅಚ್ಚುಮೆಚ್ಚಿನ ಮುಖ್ಯಮಂತ್ರಿ ಎಂದು ಹೇಳುತ್ತಾ ತಿರುಗಾಡುತ್ತಿದ್ದ ಸಚಿವರುಗಳು ಸ ಪುನರ್ ರಚನೆಯಲ್ಲಿ ತಮ್ಮ ಸಚಿವಗಿರಿ ಕಳೆದುಕೊಂಡ ಕೂಡಲೇ ಅವರ ಕಣ್ಣಲ್ಲಿ ಸಿದ್ದು ಕೆಟ್ಟ ಮುಖ್ಯ ಆಗಿಬಿಟ್ಟರು. ಕಾಂಗ್ರೆಸ್ಸಿನಲ್ಲಿ ಎಂತೆಂತಹ ಆಷಾಢಭೂತಿಗಳು ಇದ್ದಾರೆ ನೋಡಿ. ಆದರೆ ಸಚಿವ ಪಟ್ಟ ಕಳೆದುಕೊಂ ಹಿರಿಯರಿಗೆ ಗೌರವ ಕೊಡುತ್ತಿರುವ ಕಿಮ್ಮನೆ ರತ್ನಾಕರರಿಂದ ಎಲ್ಲಾ ಕಾಂಗ್ರೆಸ್ಸಿಗರು ಕಲಿಯುವುದು ಬಹಳ




ಬಿಜೆಪಿಯು ಕ್ರೂರ ಕೋಮುವಾದಿಗಳ ಗುಂಪಾಗಿದ್ದರೆ ಕಾಂಗ್ರೆಸ್ ಶತಭ್ರಷ್ಟ ಸಮಯಸಾಧಕರ ಗುಂಪು ಎಂದು ಸಾಮಾನ್ಯ ನಂಬಿಕೆ. ಆದರೂ ಬಿಜೆಪಿಯವರು ತಾವು ಕೋಮುವಾದಿಗಳಲ್ಲ ಎಂದು ಸಿದ್ಧ ಮಾಡಲು ಶತಪ್ರ ಮಾಡುತ್ತಿದ್ದಾರೆ. ಆದರೆ ಕಾಂಗ್ರೆಸ್ ಮಾತ್ರ ತಮ್ಮ ಭ್ರಷ್ಟತೆ ಬಗೆಗಿನ ಜನರ ನಂಬಿಕೆ ತಪ್ಪು ಎಂದು ಸಿದ್ಧ ಮಾ ಎಂದೂ ಪ್ರಯತ್ನಿಸಿಲ್ಲ. ಹೌದು ತಾವು ಮಹಾಭ್ರಷ್ಟರು ಎಂದು ಕಾಂಗ್ರೆಸ್ಸಿನವರು ನಿರ್ಲಜ್ಜವಾಗಿ ಒಪ್ಪಿಕೊಂಡಂತಿ

ಮೂರು ವರ್ಷ ಫಲವತ್ತಾದ ಕಂದಾಯ ಸಚಿವರಾಗಿದ್ದ ಶ್ರೀನಿವಾಸ್ ಪ್ರಸಾದರು ತಮ್ಮ ಇಲಾಖೆಯಲ್ಲಿ ಭ್ರಷ್ಟಾ ಹುಲುಸಾಗಿ ಬೆಳೆಯುವಾಗ ಕಣ್ಣುಮುಚ್ಚಿಕೊಂಡಿದ್ದರು. ಅಕ್ರಮ ಸಕ್ರಮ ನೆಪದಲ್ಲಿ ಭೂಮಾಫಿಯಾ ಇನ್ನೂ ಶಕ್ತಿಯುತವಾಯಿತು. ಉಡುಪಿಯ ಜಿಲ್ಲಾಧಿಕಾರಿ ಮಣಿಪಾಲದ ಶಿಕ್ಷಣ ಸಂಸ್ಥೆಯ ಮೇಲೆ ಸರಕಾರಿ ಭೂಮಿ ದುರುಪಯೋಗಕ್ಕೆ 1,100 ಕೋಟಿ ರೂಪಾಯಿ ದಂಡ ಹಾಕಿದಾಗ ಇದೇ ಶ್ರೀನಿವಾಸ ಪ್ರಸಾದರು ಮಣಿಪಾ ಧಣಿಗಳಿಗೆ ಅಕ್ರಮ-ಸಕ್ರಮದ ಪ್ರಸಾದ ನೀಡಿ ಒಂದೇ ಏಟಿನಲ್ಲಿ ಸರಕಾರಕ್ಕೆ ಒಂದು ಸಾವಿರ ಕೋಟಿಗೂ ಹೆಚ್ಚು ನಷ್ಟ ಉಂಟುಮಾಡಿದರು. ಈಗ ಇಂತಹವರು ಕಾಂಗ್ರೆಸ್ಸಿನ ತತ್ವನೀತಿಗಳನ್ನು ರಕ್ಷಿಸುವ ಢಂಬಾಚಾರ ಮಾತಾಡುತ್ತಿ ಈ ಸ್ಥಿತಿಯಲ್ಲಿ ಕಾಂಗ್ರೆಸ್ ಮುಕ್ತ ಭಾರತ ಮಾಡಲು ಬಿಜೆಪಿಯವರು ಹೆಚ್ಚು ಶ್ರಮ ಪಡಬೇಕಿಲ್ಲ. ಸ್ವತಃ ಅಂಬರಿ ಖಮರುಲ್, ಚಿಂಚನ್ಸೂರ್, ಗುತ್ತೇದಾರ್, ಶ್ರೀನಿವಾಸ ಪ್ರಸಾದರಂತಹ ಕಾಂಗ್ರೆಸ್ಸಿಗರೇ ಅದನ್ನು ಮಾಡುತ್ತಿ ಸಂಪುಟ ಪುನರ್ ರಚನೆಯ ಕೇವಲ ಒಂದು ದಿನ ಮೊದಲು ಶ್ರೀನಿವಾಸ ಪ್ರಸಾದರು ಪ್ರಧಾನಿ ಮೋದಿಯ ಗಗನದೆತ್ತರಕ್ಕೆ ಹೊಗಳಿದ ಪರಿ ನೋಡಿದಾಗ ಇವರು ಒಳಗಿಂದೊಳಗೇ ಕಾಂಗ್ರೆಸ್ಸಿಗೆ ಬಾಂಬ್ ಇಡುತ್ತಿದ್ದಾರೆ ಅನುಮಾನ ಎಲ್ಲರನ್ನೂ ಕಾಡಿತ್ತು.

ಸಂಪುಟ ಪುನರ್ ರಚನೆಯ ನಂತರ ಸಚಿವಗಿರಿ ಕಳೆದುಕೊಂಡವರ ಪರವಾಗಿ ಬೀದಿಗಿಳಿದು ಗಲಾಟೆ ಮಾಡುತ್ತಿ ಎಲ್ಲಾ ಮಾಜಿ ಸಚಿವರ ಬೆಂಬಲಿಗರ ಹಿನ್ನೆಲೆ ನೋಡಿದಾಗ ಗೊತ್ತಾಗುವುದೇನೆಂದರೆ – ಇವರಲ್ಲಿ ಯಾರೂ ಪ್ರಾಮ ಕಾಂಗ್ರೆಸ್ ಕಾರ್ಯಕರ್ತರಿಲ್ಲ, ಬೆಂಬಲಿಗರೆಂದು ಹಣೆಪಟ್ಟಿ ಹೊಂದಿರುವ ಎಲ್ಲರೂ ಆ ಸಚಿವರಿಂದ ಸರಕಾರಿ ಗ ಅಥವಾ ಸರಕಾರಿ ಯೋಜನೆಗಳ ದುರ್ಲಾಭ ಪಡೆದಿರುವ ಪವರ್ ಬ್ರೋಕರುಗಳೇ ಆಗಿದ್ದಾರೆ ಅಥವಾ ಫಲವ ಲಂಚ ಸಿಗುವ ಜಾಗಕ್ಕೆ ವರ್ಗಾವಣೆ ಪಡೆದ ಸರಕಾರಿ ನೌಕರನ ಕುಟುಂಬಿಕರೇ ಆಗಿದ್ದಾರೆ. ಯಾವುದೇ ಪ್ರಾಮ ಮತದಾರ ಸಂಪುಟ ಪುನರ್‌ರಚನೆಯ ಬಗ್ಗೆ ತಲೆ ಕೆಡಿಸಿಕೊಳ್ಳುವುದಿಲ್ಲ. ಸಾಮಾನ್ಯರಿಗೆ ಯಾರೇ ಸಚಿವರಾ ಒಂದೇ. ಆದರೆ ಪ್ರಾಮಾಣಿಕರು ಮತ್ತು ದಕ್ಷರು ಮಾತ್ರ ಸಚಿವರಾದರೆ ಒಳ್ಳೆಯದು ಎಂದಷ್ಟೇ ಸಾಮಾನ್ಯ ಮತದ ಮನದಾಳದ ಬಯಕೆ. ಆದರೆ ಇದನ್ನು ಸಮಯಸಾಧಕ ರಾಜಕಾರಣಿಗಳು ಇನ್ನೂ ಅರ್ಥಮಾಡಿಕೊಳ್ಳದಿರು ನಮ್ಮ ದುರಾದೃಷ್ಟ.

- ಹರೀಶ್ ಎಮ್.ಆರ್, ಉ



...ರನೆಯವನನ್ನು ಒಳಗೆ ಕರೆದು. ಅವನಿಗೆ ಘಟನೆ ...ರಿಸಬೇಕಿತ್ತು, ಈ ರೀತಿ ಉಳಿದವರೂ ಒಬ್ಬೊಬ್ಬರೇ ...ಬಂದು ಮೌಖಿಕವಾಗಿ ಹಿಂದಿನವನಿಂದ ಘಟನೆಯ ...ರ ಕೇಳಿಸಿಕೊಳ್ಳುತ್ತಾ ಅದನ್ನು ಮುಂದಿನವನಿಗೆ ...ಬಿಮಾತಲ್ಲೇ ದಾಟಿಸುತ್ತಾ ಹೋಗಬೇಕಿತ್ತು, ಹೊರಗಿದ್ದ ...ಟನೆಯವನನ್ನು ಒಳಗೆ ಕರೆದು ಏಳನೆಯವನು ಆ ...ಟನೆ ಬಗ್ಗೆ ತನಗೆ ನೆನಪಿದ್ದಷ್ಟು ಹೇಳಿದ ನಂತರ ...ಟನೆಯವನು ಕೊನೆಗೆ ತಾನು ಘಟನೆಯ ಬಗ್ಗೆ ...ರ್ಥಮಾಡಿಕೊಂಡಿದ್ದೇನು ಎಂದು ಎಲ್ಲರೆದುರು ಹೇಳಿದಾಗ ...ಮ್ಮ ಕ್ಲಾಸಿನಲ್ಲಿದ್ದವರೆಲ್ಲಾ ಹೊಟ್ಟೆ ಹಿಡಿದು ...ಯವಂತಾಯಿತು. ಕಾರಣ ಎಂಟು ಜನರೊಳಗಿನ ಮೌಖಿಕ ...ವಹನದಲ್ಲಿ ಒಂದೇ ಘಟನೆ ಒಬ್ಬನಿಂದ ಇನ್ನೊಬ್ಬನಿಗೆ ...ಟುವಾಗ ಕ್ರಮೇಣ ವಿರೂಪಗೊಂಡು ಎಂಟನೆಯವನು ...ರ್ಥ ಮಾಡಿಕೊಂಡಿದ್ದು ಹೀಗಿತ್ತು:

"ಇವತ್ತು ಮ್ಯಾನೇಜರರ ಹೆಂಡತಿಯ ಜನ್ಮದಿನ, ಆದರೆ ...ನೇಜರರ ಹೆಂಡತಿ ಅವರ ಕಾರ್ ಡ್ರೈವರ್‌ನೊಂದಿಗೆ ...ಡಿಹೋದಳಂತೆ, ಅದಕ್ಕಾಗಿ ಮ್ಯಾನೇಜರ್ ಪಾರ್ಟಿ ...ಟ್ಟುಕೊಂಡಿದ್ದರು. ಹಾಗಾಗಿ ಸಿಬ್ಬಂದಿಯೆಲ್ಲಾ ಗಿಫ್ಟಿನೊಂದಿಗೆ ...ವರ ಮನೆಗೆ ಹೋಗಿ ಶುಭಾಶಯ ಹೇಳಿದರು."

ನಮ್ಮ ನಡುವೆ ಮೌಖಿಕ ಮಾಹಿತಿ ಹೇಗೆ ...ಕಾರಗೊಳ್ಳುತ್ತದೆ ಎಂದು ನಾನು ಪ್ರತ್ಯಕ್ಷ ಕಂಡ ಆ ...ಯೋಗ 43 ವರ್ಷದ ನಂತರವೂ ತಾಜಾ ಆಗಿದ್ದು ...ವತ್ತಿಗೂ ಇದು ಎಲ್ಲರ ನಿಜಜೀವನದಲ್ಲಿ ಮೌಖಿಕ ...ಂವಹನದಲ್ಲಿಯ ದೋಷದಿಂದ ಆಗುವ ವಿರೂಪಕ್ಕೆ ...ಡಂಬನಾತ್ಮಕ ಸಾಕ್ಷಿಯಾಗಿದೆ.

ಕೇವಲ ಇಪ್ಪತ್ತು ನಿಮಿಷದಲ್ಲಿ ಎಂಟೇ ಎಂಟು ಜನರ ...ಡುವೆ ನಡೆದ ಮೌಖಿಕ ಮಾಹಿತಿ ವರ್ಗಾವಣೆಯಲ್ಲಿ ...ತಿಸಣ್ಣ ವಿಷಯವೊಂದು ಇಷ್ಟು ವಿರೂಪವಾದರೆ ...ಸಾವಿರಾರು ವರ್ಷದಲ್ಲಿ ಸಾವಿರಾರು ತಲೆಮಾರಿನಲ್ಲಿ ಕೇವಲ ...ಮೌಖಿಕವಾಗಿ ವರ್ಗಾವಣೆಯಾದ ಸಂಸ್ಕೃತ ಭಾಷೆಯ ಬೃಹತ್ ...ಪುರಾಣ ವೇದ ಉಪನಿಷತ್ತುಗಳು ಎಷ್ಟೊಂದು ಬದಲಾವಣೆ ...ಆಗಿರಬಹುದು ಊಹಿಸಿ. ಆದರೆ ಸಂಸ್ಕೃತ ಪ್ರಿಯ ವೈದಿಕರು ...ಮ್ಮ ಸಂಸ್ಕೃತ ಭಾಷೆಯಲ್ಲಿದ್ದ ಪುರಾಣ ಕಥೆಗಳು ಸಾವಿರಾರು ...ರ್ಷಗಳ ಹಿಂದೆ ಮೂಲದಲ್ಲಿ ಹೇಗಿದ್ದವೊ ಇವತ್ತಿಗೂ ...ಕ್ಷರಶಃ ಹಾಗೆಯೇ ಇವೆಯೆಂದು ವಿತಂಡವಾದ ...ಮಾಡುತ್ತಿದ್ದಾರೆ. ಇದನ್ನು ಪ್ರಜ್ಞಾವಂತರು ಒಪ್ಪುವುದಿಲ್ಲ.

ಮೇಲಾಗಿ ಹಿಂದಿನ ಕಾಲದಲ್ಲಿ ಹರಿಕಥೆ ಶಿವಕಥೆ ...ದಾಸರು ಊರಿಂದೂರಿಗೆ ಹೋಗಿ ಪುರಾಣ ಕಥೆ ಹೇಳಿಯೇ ...ತಮ್ಮ ಹೊಟ್ಟೆ ಹೊರೆದುಕೊಳ್ಳುತ್ತಿದ್ದರು. ಪ್ರತಿ ಸಾರಿ ...ಒಂದೇ ಕಥೆ ಕೇಳಿಕೇಳಿ ಊರಿನವರಿಗೆ ಬೋರ್ ಆಗುತ್ತದೆ ...ಎಂದು ಹರಿಕಥೆದಾಸರು ಜನರಲ್ಲಿ ಆಸಕ್ತಿ ಹೆಚ್ಚಿಸಲು ಈ ...ಪುರಾಣ ಕತೆಗಳನ್ನು ಪ್ರತಿ ಸಾರಿ ಸ್ವಲ್ಪ ಸ್ವಲ್ಪ ...ಬದಲಾಯಿಸುವುದು ಅಗತ್ಯವಾಗಿತ್ತು, ಮೇಲಾಗಿ ಜನರ ...ಮನಸ್ಸು ಗೆಲ್ಲಲು ಹರಿಕಥೆದಾಸರಲ್ಲಿಯೇ ಸ್ಪರ್ಧೆ ಇದ್ದುದರಿಂದ ...ಅವರು ಒಬ್ಬರಿಗಿಂತ ಇನ್ನೊಬ್ಬರು ಮೇಲು ಎಂದು ...ತೋರಿಸಲು ಹಾಗೂ ಕಥೆಯಲ್ಲಿ ರೋಚಕತೆ ಉಂಟುಮಾಡಿ ...ಕೇಳುಗರನ್ನು ಸೆಳೆಯಲು ತಾವು ಹೇಳುವ ಕಥೆಯಲ್ಲಿ ...ಪ್ರತಿ ಸಾರಿ ಅನೇಕ ಮಸಾಲೆಗಳನ್ನು ಅಥವಾ ಉಪಕತೆಗಳನ್ನು ...ಸೇರಿಸುತ್ತಿದ್ದರು. ಹೀಗೆ ಬಾಯಿಂದಬಾಯಿಗೆ ಹರಿದುಬಂದ ...ಕಾಲ್ಪನಿಕ ಪುರಾಣ ಕತೆ ಹಾಗೂ ಉಪಕಥೆಗಳನ್ನೇ ಕೊನೆಗೆ ...ಸುಮಾರು 1700 ವರ್ಷಗಳ ಹಿಂದೆ ಕೆಲವು ವಿದ್ವಾಂಸರು ...ಕ್ರೋಢೀಕರಿಸಿ ಸಂಪಾದಿಸಿ ಸಂಸ್ಕೃತದಲ್ಲಿ ಬರೆದಿರಬಹುದು. ...ಅದನ್ನೇ ನಾವು ಈಗ ಮೂಲ ಕೃತಿಗಳು ಎಂದು ...ಹೇಳುವುದು. ಮೂರು-ನಾಲ್ಕು ಸಾವಿರ ವರ್ಷಗಳ ಹಿಂದೆ ...ಸಂಸ್ಕೃತಕ್ಕೆ ಲಿಪಿಯೇ ಇಲ್ಲದಿರುವಾಗ ಅದನ್ನು ಯಾರಾದರೂ ...ಅದು ಸ್ವಲ್ಪವೂ ಬದಲಾಗದಂತೆ ಮೌಖಿಕವಾಗಿ ಅಥವಾ ...ಬರಹರೂಪದಲ್ಲಿ ಮುಂದಿನ ತಲೆಮಾರಿಗೆ ದಾಟಿಸಲು ...ಹೇಗೆ ಸಾಧ್ಯ? ಮೌಖಿಕವಾಗಿ ದಾಟಿಸಿದ ಪ್ರತಿಯೊಂದು ...ವಿಷಯವೂ ವಿರೂಪಗೊಳ್ಳಲೇ ಬೇಕು. ಋಷಿ-ಮುನಿಗಳ ...ಅಂತರ್ಜ್ಞಾನವೆಲ್ಲಾ ಬರೀ ಕಾಲ್ಪನಿಕ ಅಷ್ಟೇ.

- ಪ್ರವೀಣ್ ಎಸ್ ಶೆಟ್ಟಿ, ಮಂಗಳೂರು

ಯೋಗ ಸಮಾಜದ ಮನಸ್ಸನ್ನು ವಿಶಾಲಗೊಳಿಸಲಿ

ಜರ್ಮನಿಯ ಸರ್ವಾಧಿಕಾರಿ ಹಿಟ್ಲರ್ ಪೌಲ್ ...ಜೋಸೆಫ್ ಗೋಬೆಲ್ಸ್‌ನನ್ನು ಪ್ರೊಪಗಾಂಡಾ ಮತ್ತು ...ಸಾರ್ವಜನಿಕ ಪ್ರಸಾರ ಮಂತ್ರಿ ಎಂದು ನಿಯುಕ್ತಿ ಮಾಡಿದ ...ಮೇಲೆ ಈ ಗೋಬೆಲ್ಸ್ ಹಿಟ್ಲರ್‌ನನ್ನು ಹೊಗಳಿ ಹಲವಾರು ...ಸುಳ್ಳು ಕತೆಗಳನ್ನು ಹೆಣೆದು ಮಾಧ್ಯಮದಲ್ಲಿ ತೂರಿಬಿಡುತ್ತಿದ್ದ. ...ಆಗಿನ ಮಾಧ್ಯಮ ಎಂದರೆ ಕೇವಲ ರೇಡಿಯೋ ಮತ್ತು ...ಪತ್ರಿಕೆಗಳು ಮಾತ್ರ ಆಗಿದ್ದವು. ಆಗ ಈಗಿನಂತೆ ಟಿವಿ ಮತ್ತು ಸಾಮಾಜಿಕ ಜಾಲತಾಣಗಳು ಇರಲಿಲ್ಲ, ಹಾಗಾಗಿ ಗೋಬೆಲ್ಸ್ ಐದು ಸಾವಿರ ವೈಯಕ್ತಿಕ ಪ್ರಚಾರಕರನ್ನೂ ನಿಯುಕ್ತಿ ಮಾಡಿ ಅವರನ್ನು ಊರೂರಿಗೆ ಕಳುಹಿಸಿ ಸಣ್ಣ ಸಭೆಸಂವಾದಗಳನ್ನು ಆಯೋಜಿಸಿ ಪ್ರಚಾರಕರ ನಾಲಿಗೆ ಶಕ್ತಿಯನ್ನು ಪರಿಣಾಮಕಾರಿಯಾಗಿ ಬಳಸಿಕೊಂಡನಂತೆ. ಕಡೆಗೆ ಈ ಗೋಬೆಲ್ಸ್ ಹೊಸೆಯುತ್ತಿದ್ದ ಸುಳ್ಳು ಸುದ್ದಿಗಳನ್ನು ಸ್ವತಃ ಹಿಟ್ಲರನೇ ಸತ್ಯ ಎಂದು ನಂಬತೊಡಗಿ ಆತ್ಮರತಿಯಲ್ಲಿ ಮುಳುಗಿಹೋಗುತ್ತಿದ್ದನಂತೆ. ಗೂಬೆಲ್ಸ್‌ನ ಒಳಗುಟ್ಟು ಅರಿಯದ ನಾಜೀ ಪಕ್ಷದ ಸಾಮಾನ್ಯ ಕಾರ್ಯಕರ್ತರೂ ಈ ಸುಳ್ಳುಗಳನ್ನು ಸತ್ಯವೆಂದು ನಂಬಿ ವಿಶ್ವ ವಿಜೇತನಾಗುವ ಹಿಟ್ಲರನ ಮಹತ್ವಾಕಾಂಕ್ಷೆಗೆ ಪೂರ್ಣ ನೀರೆರೆದರಂತೆ. ಕೊನೆಗೆ ಗೋಬೆಲ್ಸ್ ಹುಟ್ಟು ಹಾಕಿದ್ದ ಹಿಟ್ಲರನ ಈ ಆತ್ಮರತಿಯೇ ಅವನ ಮನಸ್ಸನ್ನು ಆವರಿಸಿ ತಾನು ಜಗತ್ತನ್ನು ಬದಲಾಯಿಸಲು ದೇವರೇ ಕಳುಹಿಸಿದ ಪ್ರವಾದಿ ಎಂದು ನಂಬಿಕೊಂಡು ಅವನನ್ನು ಎರಡನೇ ವಿಶ್ವಯುದ್ಧಕ್ಕೆ ದೂಡಿ ಅವನ ಸ್ವಂತ ನಾಶಕ್ಕೆ ಹಾಗೂ ಜರ್ಮನಿಯ ಸೋಲಿಗೆ ಕಾರಣವಾಯಿತಂತೆ.

ಈಗ ಮೋದಿಯ ಭಕ್ತರು ಮತ್ತು ಸಂಘ ಪರಿವಾರದ ಸೈಬರ್ ವಿಂಗ್‌ನವರೂ ಗೋಬೆಲ್ಸ್ ಮಾಡಿದ ಅನರ್ಥಕಾರಿ ಕೆಲಸವನ್ನೇ ಮಾಡುತ್ತಿದ್ದಾರೆ. ಇತ್ತೀಚಿನ ನಾಲ್ಕು ವರ್ಷಗಳಲ್ಲಿ ಸಂಘಪರಿವಾರದವರು ಮೋದಿ ಬಗ್ಗೆ ತಾವೇ ಸೃಷ್ಟಿ ಮಾಡಿ ಸೋಷಿಯಲ್ ಮೀಡಿಯಾದಲ್ಲಿ ಹರಿಯ ಬಿಟ್ಟಷ್ಟು ಸುಳ್ಳು ಹೊಗಳಿಕೆಗಳನ್ನು ಭಾರತದಲ್ಲಿ ಈ ಹಿಂದೆ ಯಾರೂ ಮಾಡಿಲ್ಲ. ಸಂಘ ಪರಿವಾರಕ್ಕೆ ಲಗತ್ತಾಗಿರದ ಬಿಜೆಪಿಯ ಇತರ ಸಾಮಾನ್ಯ ಕಾರ್ಯಕರ್ತರು ಸಂಘಿಗಳ ಈ ಎಲ್ಲಾ ಸುಳ್ಳುಗಳನ್ನು ಸತ್ಯವೆಂದೇ ನಂಬಿದ್ದಾರೆ. ಮೋದಿಯ ಬಗ್ಗೆ ಉತ್ಪ್ರೇಕ್ಷಿತ ಕತೆಗಳನ್ನು ಸೋಷಿಯಲ್ ಮೀಡಿಯಾದಲ್ಲಿ ಹರಿಯಬಿಡುವ ಒಂದು ವೃತ್ತಿಪರರ ಗುಂಪೇ ದೊಡ್ಡ ಬಿಪಿಓ (ಕಾಲ್‌ಸೆಂಟರ್) ತರಹ ಕಾರ್ಯಾಚರಿಸುತ್ತಿದೆ. ಈ ವೃತ್ತಿಪರರ ಭರ್ಜರಿ ಸಂಬಳಕ್ಕಾಗಿ ಆ ಕೇಸರಿ ಕಾಲ್ಸೆಂಟರ್‌ಗೆ ಕೋಟ್ಯಾಂತರ ಹಣ ಒದಗಿಸುತ್ತಿರುವವರು ಅಂಬಾನಿ ಅದಾನಿಯಂತಹ ಮೋದಿ ಚೇಲಾ ಉದ್ಯಮಿಗಳಂತೆ. ಇವರಿಂದಾಗಿಯೇ ಯುನೆಸ್ಕೋ ಮೋದಿಯನ್ನು ಜಗತ್ತಿನ ಅತ್ಯುತ್ತಮ ಪ್ರಧಾನಿ (?) ಹಾಗೂ ಅಮಿತ್ ಶಾನನ್ನು ಜಗತ್ತಿನ ಅತ್ಯುತ್ತಮ (ನಕಲಿ) ಎನ್‌ಕೌಂಟರ್ ಸ್ಪೆಶಾಲಿಷ್ಟ ಎಂದು ನಾಮಕರಣ ಮಾಡಿದ್ದು!

ಸ್ವಚ್ಛ ಭಾರತ್ ನಾಟಕವಾಡಿ ತೆರಿಗೆದಾರರ ಮೇಲೆ ಸೆಸ್ ವಿಧಿಸಿದಂತೆ, ಕೃಷಿಯ ಹೆಸರಲ್ಲಿ ಕೃಷಿ ಕಲ್ಯಾಣ್ ಸೆಸ್ ಹೇರಿದಂತೆ ಯೋಗಾ ಸೆಸ್ ಎಂಬ ಹೊಸ ತೆರಿಗೆ ಬರಲಿದೆಯಂತೆ. ವಿಶ್ವಯೋಗ ದಿನಕ್ಕಾಗಿ ಮೋದಿ ಸರಕಾರ ಖರ್ಚು ಮಾಡಿರುವ 1000 ಕೋಟಿ ರೂಪಾಯಿ ಹೇಗಾದರೂ ವಸೂಲು ಮಾಡಬೇಕಲ್ಲವೇ!

ಯೋಗ ಮಾಡಿದರೆ ಭೋಗದ ಮೇಲೆ ಮನಸ್ಸಾಗುವುದಿಲ್ಲ ಅಂತಾರೆ. ಹೀಗೆ ಭೋಗ ಮರೆತರೆ ಹಿಂದೂಗಳ ಸಂಖ್ಯೆ ಏರುವ ಬದಲು ಕಡಿಮೆಯಾಗುವುದಿಲ್ಲವೇ? ಹಿಂದೂ ಮಹಿಳೆಯರು ಏಳೆಂಟು ಮಕ್ಕಳನ್ನು ಹೆತ್ತು ಹಿಂದೂ ಜನಸಂಖ್ಯೆ ಹೆಚ್ಚಿಸಬೇಕೆಂದು ಬಿಜೆಪಿಯ ಸಾಧ್ವಿ-ಸಾಧು-ಮಹಾರಾಜ್‌ಗಳು ಆಗಾಗ ಕೊಡುತ್ತಿರುವ ಭಯಂಕರ ಕರೆ ನಿರರ್ಥಕ ಆಗುವುದಿಲ್ಲವೇ? ಯೋಗದಿಂದ ಜನರ ಮನಸ್ಸು ಶುದ್ಧವಾಗುವುದು ನಿಜವಾಗಿದ್ದರೆ ಯೋಗ ಮಾಡುವ ವೈದಿಕರ ಮತ್ತು ಸಂಘ ಪರಿವಾರದವರ ಕುತಂತ್ರ ಬುದ್ಧಿ ಯುಗ ಯುಗಗಳಿಂದ ಶುದ್ಧ ಯಾಕಾಗಿಲ್ಲ?

ನಿನ್ನ ಈ ಕೆಳಜಾತಿಯ ಹುಟ್ಟಿಗೆ ನಿನ್ನ ಹಿಂದಿನ ಜನ್ಮದ ಕರ್ಮಯೋಗ ಕಾರಣ, ಹಾಗಾಗಿ ಈ ಜನ್ಮದ ಬದುಕು ಚೆನ್ನಾಗಲು ಯೋಗ ಮಾಡು ಅಂತಾರೆ ನಮಗೆ ಮೋದಿ ಭಕ್ತ ಪುರೋಹಿತರು-ಸ್ವಾಮೀಜಿಗಳು. ಹಾಗಾದರೆ ಯೋಗ ಮಾಡದ ಪುರೋಹಿತರ-ಸ್ವಾಮೀಜಿಗಳ ಬದುಕು ಯಾಕೆ ಚೆನ್ನಾಗಿದೆ? ಅಥವಾ ಅವರು ಮುಂದಿನ ಜನ್ಮದಲ್ಲಿ ದಲಿತರಾಗಿ ಹುಟ್ಟಿ ಕರ್ಮಯೋಗ ಸವೆಸುತ್ತಾರೆಯೇ? ಇದರ ಅರ್ಥ ನಾವು ದಲಿತರು ಹಿಂದಿನ ಜನ್ಮದಲ್ಲಿ ವೈದಿಕ ಪುರೋಹಿತರಾಗಿ ಅಥವಾ ಸ್ವಾಮೀಜಿಗಳಾಗಿ ಇದ್ದೆವು ಎಂದಂತಾಯಿತು ತಾನೇ! ಹಾಗಿದ್ದರೆ ಈಗಿನ ನಮ್ಮ ದಲಿತರೇ ತಮ್ಮ ಹಿಂದಿನ ಜನ್ಮದಲ್ಲಿ ಇಂದಿನ ವೈದಿಕರ ಪೂರ್ವಜರಾಗಿದ್ದರು ಎಂದಂತಾಯಿತು. ಹಾಗಿರುವಾಗ ತಮ್ಮ ಪೂರ್ವಜರನ್ನೇ ಈಗ ಮುಟ್ಟಲು ಹೇಸುವ ಪೇಜಾವರರಂತಹ ಮಠಾಧೀಶರು-ಅರ್ಚಕರು ಕರ್ಮ ಸಿದ್ಧಾಂತದ ನಿಯಮದಂತೆ ಮುಂದಿನ ಜನ್ಮದಲ್ಲಿ ನಮ್ಮಂತಹ ದಲಿತರ ಮಕ್ಕಳ ಗರ್ಭದಲ್ಲಿ ದಲಿತರಾಗಿಯೇ ಹುಟ್ಟುವುದೂ ಖಂಡಿತ ಅಲ್ಲವೇ!


ವಿಶ್ವಯೋಗ ದಿನವೆಂಬುದು ಕೇವಲ ಚೆಂದುಳ್ಳಿ ಹೆಣ್ಣುಗಳಿಂದ ದೈಹಿಕ ವ್ಯಾಯಾಮ ಪ್ರದರ್ಶಿಸುವ ಸಮಾರಂಭ ಮಾತ್ರ ಆಗದೇ ಅದು ಸಮಾಜದ ಮನಸ್ಸನ್ನು ವಿಶಾಲಗೊಳಿಸುವ ಮನಸ್ಸಿನ ವ್ಯಾಯಾಮ ಸಹ ಆಗಲಿ. ಸಮಾಜದ ವಿಕಾರ ಜಾತಿವಾದಿ ಕೊಳಕುರೋಗವನ್ನು ಗುಡಿಸಿ ಹಾಕುವ ಸಾಧನವಾಗಲಿ ಈ ಮನಸ್ಸಿನ ಯೋಗ.

- ವೀರಪ್ಪ ದಿ.ಎನ್, ಮಡಿಕೇರಿ


ವಿ.ಸೂ. : ನಿಮ್ಮ ಅನಿಸಿಕೆಗಳನ್ನು ...ankesh70@rediffmail.com ಗೆ ನುಡಿ ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು. ನಿಮ್ಮ ಪ್ರತಿಕ್ರಿಯೆಗಳನ್ನು 9980331427 ನಂಬರ್‌ಗೂ ...ವಾಗಿ ಮತ್ತು ಚೊಕ್ಕದಾಗಿ SMS ಕಳುಹಿಸಬಹುದು.

ಅರ್ಧ ಶತಕ ಸಿಡಿಸಿದ ಆರ್ಮುಗಂ

ಸ್ಯಾಂಡಲ್‌ವುಡ್‌ನಲ್ಲಿದ್ದ ಖಳನಟರ ಕೊರತೆಯನ್ನು ನೀಗಿಸಿದವರು ಸಾಯಿಕುಮಾರ್ ಅವರ ಸಹೋದರ ರವಿಶಂಕರ್. ಮೂಲತಃ ಇವರು ಡಬ್ಬಿಂಗ್ ಕಲಾವಿದರಾಗಿದ್ದರೂ ನಟರಾಗಿ ಹೆಚ್ಚು ಫೇಮಸ್ ಆಗಿದ್ದು ಕನ್ನಡದಲ್ಲಿ. ಈಗವರು ಐವತ್ತನೇ ಸಿನಿಮಾ ಪೂರೈಸಿದ್ದಾರೆ. ಈ ಅನುಭವವನ್ನು ಅವರು ಇಲ್ಲಿ ಹಂಚಿಕೊಂಡಿದ್ದಾರೆ.



ಸುದೀಪ್ ನಟನೆಯ 'ಕೆಂಪೇಗೌಡ' ಸಿನಿಮಾದ ಮೂಲಕ ಕನ್ನಡಕ್ಕೆ ಕಾಲಿಟ್ಟ ನಟ ರವಿಶಂಕರ್. ಈ ಸಿನಿಮಾದಲ್ಲಿ ಇವರ ಆರ್ಮುಗಂ ಪಾತ್ರವನ್ನು ಮೆಚ್ಚದ



ಪ್ರೇಕ್ಷಕರೇ ಇಲ್ಲ. ಕಂಠದಾನ ಕಲಾವಿದರಾಗಿದ್ದ ರವಿಶಂಕರ್, ಈಗ ಆ ವೃತ್ತಿಯನ್ನೇ ಮರೆಯುವಷ್ಟು ನಟನೆಯಲ್ಲಿ ಬಿಜಿ ಆಗಿದ್ದಾರೆ. ಕಳೆದ ವಾರ ರಿಲೀಸ್ ಆದ 'ಜಿಗರ್ ಥಂಡ' ಇವರು ಐವತ್ತನೇ ಸಿನಿಮಾ ಅನ್ನುವುದು ಮತ್ತೊಂದು ವಿಶೇಷ.

** ಐವತ್ತನೇ ಸಿನಿಮಾದ ಹೊಸ್ತಿಲಲ್ಲಿದ್ದೀರಿ. ನಡೆದುಬಂದ ಹಾದಿಯನ್ನೊಮ್ಮೆ ತಿರುಗಿ ನೋಡಿದರೆ?*

ನಿಜ ಹೇಳುತ್ತೇನೆ. ನಾನು ಈವರೆಗೂ ನಡೆದುಬಂದ ಹಾದಿಯನ್ನು ನೆನಪಲ್ಲಿಟ್ಟುಕೊಂಡಿಲ್ಲ. ಹೊಸ ದಾರಿಯನ್ನು ಹುಡುಕುತ್ತಾ ಹೋಗುವವನು ನಾನು. ಎಂದಿಗೂ ನಾನು ಬೇಸರಿಸಿಕೊಂಡು ಕೂತಿಲ್ಲ, ಸಿನಿಮಾ ಇಲ್ಲ ಅಂತ ಕೊರಗಿಲ್ಲ. ಕೊಟ್ಟ ಅವಕಾಶವನ್ನು ಸಮರ್ಥವಾಗಿ ನಿಭಾಯಿಸಿದ್ದೇನೆ. ಹೀಗಾಗಿಯೇ ನಾನು ಕೈಯಿಟ್ಟ ಕಡೆಗೆಲ್ಲ ಸಕ್ಸಸ್ ಕಂಡಿದ್ದೇನೆ. ನಾನು ನಡೆದ ಹಾದಿ ನನಗೆ ತೃಪ್ತಿ ಕೊಟ್ಟಿದೆ. ಒಳ್ಳೆಯ ಹೆಜ್ಜೆಗಳನ್ನೇ ಇಟ್ಟಿದ್ದೇನೆ ಎಂಬ ಹೆಮ್ಮೆ ಇದೆ.

** ಕನ್ನಡ ಸಿನಿಮಾರಂಗದಲ್ಲಿ ನೆಲೆಯೂರುತ್ತೀರಿ ಅಂತ ಅನ್ನಿಸಿತ್ತಾ?*

ನನ್ನ ಸಹೋದರ ಸಾಯಿಕುಮಾರ್ ಕನ್ನಡ ಸಿನಿಮಾರಂಗದಿಂದಲೇ ಬದುಕನ್ನು ಕಟ್ಟಿಕೊಂಡವರು. ಈ ರಂಗವನ್ನು ನಾನು ತೀರಾ ಹತ್ತಿರದಿಂದ ನೋಡಿದ್ದೆ. ಹೀಗಾಗಿ ಎಲ್ಲೋ ಒಂದು ಕಡೆ ಸ್ಯಾಂಡಲ್‌ವುಡ್‌ಗೆ ಹೋಗುತ್ತೇನೆ ಅಂತ ಅನ್ನಿಸಿತ್ತು. ಯಾರ ಚಿತ್ರದಲ್ಲಿ ಮೊದಲು ನಟಿಸುತ್ತೇನೆ ಅಂತ ಗೊತ್ತಿರಲಿಲ್ಲ. 'ಹಳ್ಳಿ ಕೃಷ್ಣ ಡೆಲ್ಲಿ ರಾಧಾ' ಕನ್ನಡದ ನನ್ನ ಮೊದಲ ಚಿತ್ರವಾದರೂ ಹೆಚ್ಚು ಫೇಮಸ್ ಆಗಿದ್ದು 'ಕೆಂಪೇಗೌಡ' ಸಿನಿಮಾದಿಂದ.

** ಸುದೀಪ್ ನಿಮ್ಮನ್ನು ಕನ್ನಡಕ್ಕೆ ಬರುವಂತೆ ಕರೆದಾಗ ಹೇಗನ್ನಿಸಿತು?*

ತುಂಬಾ ಖುಷಿ ಆಯಿತು. ಇಷ್ಟು ಬೇಗ ನನಗೆ ಅವಕಾಶ ಸಿಗುತ್ತದೆ ಅಂತ ಅಂದುಕೊಂಡಿರಲಿಲ್ಲ. ಕನ್ನಡದಲ್ಲಿ ಸಾಕಷ್ಟು ಚಿತ್ರಗಳನ್ನು ಮಾಡಿದ್ದೇನೆ. ಆದರೆ ಜನ ನನ್ನನ್ನು ಗುರುತಿಸುವುದು 'ಕೆಂಪೇಗೌಡ' ಸಿನಿಮಾದ ಆರ್ಮುಗಂ ಪಾತ್ರದಿಂದಲೇ. ಹೀಗಾಗಿ ನನ್ನ ಉಸಿರು ಇರುವತನಕ ಆ ಸಿನಿಮಾ ಮತ್ತು ಆ ಪಾತ್ರವನ್ನು ನಾನು ಮರೆಯುವುದಿಲ್ಲ.

** ಕಂಠದಾನ ಕಲಾವಿದರಾಗಿದ್ದವರು ಈಗ ಅದನ್ನು ಮರೆಯುತ್ತಿದ್ದೇನೆ ಅಂತ ಅನಿಸ್ತಾ ಇದೆಯಾ?*

ಹಾಗೇನೂ ಇಲ್ಲ. ನಟನೆಯಲ್ಲಿ ಸದ್ಯ ಬಿಜಿ ಆಗಿದ್ದೇನೆ. ಹೀಗಾಗಿ ಯಾರೂ ಆ ಕೆಲಸಕ್ಕೆ ಕರೆಯುತ್ತಿಲ್ಲ. ಬಿಡುವಾದಾಗ ಖಂಡಿತಾ ಡಬ್ಬಿಂಗ್ ಮಾಡುತ್ತೇನೆ. ಆ ಖುಷಿಯೇ ಬೇರೆ. ಸಖತ್ ಎಂಜಾಯ್ ಮಾಡಿದ ಕ್ಷೇತ್ರವದು.

** ಐವತ್ತನೇ ಸಿನಿಮಾದ ಬಗ್ಗೆ ಹೇಳಿ?*

ಕಿಚ್ಚ ಕ್ರಿಯೇಷನ್ ಮತ್ತು ರಘುನಾಥ್ ನಿರ್ಮಾಣದಲ್ಲಿ ಮೂಡಿಬಂದಿರುವ 'ಜಿಗರ್ ಥಂಡ' ನನ್ನ ಐವತ್ತೇ ಸಿನಿಮಾ.



ಕನ್ನಡಕ್ಕೆ ನನ್ನನ್ನು ಪರಿಚಯಿಸಿದ ಸುದೀಪ್ ಅವರ ಬ್ಯಾನರ್‌ನಲ್ಲೇ ಐವತ್ತನೇ ಸಿನಿಮಾವನ್ನೂ ಕಂಪ್ಲೀಟ್ ಮಾಡು ತ್ತಿದ್ದೇನೆ. ಇದನ್ನು ನಾನು ಗೌರವವೆಂದೇ ಭಾವಿಸು ತ್ತೇನೆ. ಇಲ್ಲಿ ವಿಭಿನ್ನ ಪಾತ್ರ ಮಾಡುತ್ತಿದ್ದೇನೆ. ಆ ಪಾತ್ರ ಇಡೀ ಸಿನಿಮಾವನ್ನೇ ಆವರಿಸಿಕೊಂಡಿದೆ. ಮತ್ತೆ ಅಲ್ಲಿ ಅಬ್ಬರವಿದೆ.

** ಖಳನಟರಿಗೆ ಅಭಿಮಾನಿ ಸಂಘ ಇರುವುದು ತೀರಾ ಕಡಿಮೆ. ನಿಮಗಿದೆ. ಆ ಬಗ್ಗೆ ಹೇಳಿ?*

ಸಿನಿಮಾರಂಗಕ್ಕೆ ನನ್ನ ಸೇವೆ ತೀರಾ ಕಡಿಮೆ. ಆದರೂ ಅಭಿಮಾನಿಗಳು ಸಂಘ ಕಟ್ಟಿಕೊಂಡು ಒಳ್ಳೆಯ ಕೆಲಸಗಳನ್ನು ಮಾಡುತ್ತಿದ್ದಾರೆ. ಇದು ನನಗಲ್ಲ, ಕನ್ನಡದ ಅಷ್ಟೂ ಖಳ ನಟರಿಗೂ ಸಲ್ಲಿಸುತ್ತಿರುವ ಗೌರವ. ಅಭಿಮಾನಿಗಳು ಒಳ್ಳೆಯ ಕೆಲಸ ಮಾಡಲಿ ಅಂತ ಕೇಳಿಕೊಳ್ಳುತ್ತೇನೆ.

** ಶ್ರೀನಿವಾಸ್ ರಾಜು ನಿರ್ದೇಶನದ ಚಿತ್ರಕ್ಕೆ ನೀವು ಹೀರೋ ಅಂತೆ?*

ಹೀರೋ ಅನ್ನುವುದಕ್ಕಿಂತ ಪ್ರಮುಖ ಪಾತ್ರ ಎಂದು ಹೇಳಲು ಇಷ್ಟಪಡುತ್ತೇನೆ. ನಾನು ಈ ಸಿನಿಮಾದಲ್ಲಿ ಡ್ರಾಮಾ ಕಂಪನಿಯ ಮಾಲೀಕನಾಗಿ ನಟಿಸುತ್ತಿದ್ದೇನೆ. ಅವನ ಸುತ್ತ ಸಿನಿಮಾದ ಕತೆ ಇದೆ. ಹೀಗಾಗಿ ಹೀರೋ ಅಂತ ಕರೆಯುತ್ತಿದ್ದಾರೆ. ●



ಅಜ್ಞಾತವಾಸದಿಂದ ಅಜ್ಞಾತವಾಸಕ್ಕೆ

ದೀಪಾ ಸನ್ನಿಧಿ ಮತ್ತೆ ಕನ್ನಡಕ್ಕೆ ಬಂದ ಸುದ್ದಿ ಜೋರಾಯಿತು. ಆದರೆ ಅವರು ಮಾತ್ರ ಯಾರ ಕಣ್ಣಿಗೂ ಬೀಳಲಿಲ್ಲ. ದರ್ಶನ್ ಜತೆ ಸದ್ಯ 'ಚಕ್ರವರ್ತಿ' ಸಿನಿಮಾದ ಶೂಟಿಂಗ್‌ನಲ್ಲಿ ಬಿಜಿ ಆಗಿರುವ ಅವರು, ಯಾವ ಮಾಧ್ಯಮದೊಂದಿಗೂ ಸಿನಿಮಾದಲ್ಲಿನ ತಮ್ಮ ಪಾತ್ರದ ಬಗ್ಗೆ ಮಾತಾಡುತ್ತಿಲ್ಲ. ಕಾರಣ, ಏನೂ ಮಾತಾಡದಂತೆ ಕಟ್ಟಪ್ಪಣೆ ಹೊರಡಿಸಿದೆ ಸಿನಿಮಾ ತಂಡ.

ದರ್ಶನ್ ಸಿನಿಮಾಗಳಲ್ಲಿ ದರ್ಶನ್‌ಗಿಂತಲೂ ಅವರ ಸಿನಿಮಾದ ಹೀರೋಯಿನ್‌ಗಳು ಹೆಚ್ಚು ಸದ್ದು ಮಾಡುತ್ತಾರೆ. ಅವರೇ ಹೆಚ್ಚು ಹೈಲೈಟ್ ಆಗುತ್ತಾರೆ. ಹಾಗಾಗಿ ಎರಡ್ಮೂರು ಸಿನಿಮಾಗಳಿಂದ ಇದಕ್ಕೆ ಬ್ರೇಕ್ ಹಾಕಲಾಗುತ್ತಿದೆ. ಕೇವಲ ದರ್ಶನ್ ಸುದ್ದಿಯಾಗುವಂತೆ ನೋಡಿಕೊಳ್ಳಲಾಗುತ್ತಿದೆ. ಹಾಗಾಗಿ ದೀಪಾ ಬಂದ ಸುದ್ದಿಯಂತೆ, ಅವರು ಯಾವ ರೀತಿಯ ಪಾತ್ರ ನಿರ್ವಹಿಸುತ್ತಿದ್ದಾರೆ ಅನ್ನುವುದು ಸುದ್ದಿಯಾಗಲಿಲ್ಲ. ದೀಪಾ ಕೂಡ ಬಹಿರಂಗವಾಗಿ ಕಾಣಿಸಿಕೊಂಡಿಲ್ಲ. ದೀಪಾ ಸನ್ನಿಧಿಯನ್ನು ಸ್ಯಾಂಡಲ್‌ವುಡ್‌ಗೆ ಪರಿಚಯಿಸಿದ್ದೇ ದರ್ಶನ್. ಆನಂತರ ಮೂರು ವರ್ಷಗಳ ಕಾಲ ದೀಪಾ ಸ್ಯಾಂಡಲ್‌ವುಡ್‌ನಲ್ಲೇ ಕಾಣಿಸಿಕೊಳ್ಳಲಿಲ್ಲ. ಈಗ ಮತ್ತೆ ಅವರನ್ನು ಅಜ್ಞಾತವಾಸದಿಂದ ಕರೆತಂದಿದ್ದಾರೆ.

ದನ ಕಾಯೋನ್ ತಂದು



ಯೋಗರಾಜ್ ಭಟ್ ಹಾಡುಗಳಿಗೆ ಬೇಡಿಕೆ ಇದ್ದಂತೆ ಅವರ ಸಿನಿಮಾಗಳಿಗಿಲ್ಲ. ಇವರ ನಿರ್ದೇಶನದ 'ದನ ಕಾಯೋನು' ಚಿತ್ರ ರೆಡಿಯಾಗಿ ಮೂರ್‍ನಾಲ್ಕು ತಿಂಗಳುಗಳೇ ಕಳೆದಿವೆ. ಆದರೂ ಅದು ಥಿಯೇಟರ್‌ಗೆ ಬರುತ್ತಿಲ್ಲ. ಕಾರಣ ನಿಗೂಢವಾಗಿದೆ.

ಗಾಂಧಿನಗರದಲ್ಲಿ ಈ ಕುರಿತು ಎರಡು ರೀತಿಯ ಮಾತುಗಳು ಕೇಳಿಬರುತ್ತಿವೆ. ಒಂದು, ಭಟ್‌ರ ಸಿನಿಮಾಗಳಿಗೆ ಬೇಡಿಕೆ ಕಡಿಮೆಯಾಗಿದೆ. ಮತ್ತೊಂದು ಮಾತೆಂದರೆ, ನಿರ್ಮಾಪಕರಿಗೆ ಈ ಸಿ[illegible] ಮೇಲೆ ನಂಬಿಕೆ ಬರದ ಕಾರಣ ರಿಲೀಸ್ ಮಾಡಲು ಮುಂದೆ ಬರುತ್ತಿ[illegible] ಹೀಗಾಗಿ 'ದನ ಕಾಯೋನು' ಡಬ್ಬಾದಲ್ಲಿ ಕುಳಿತಿದೆ. ಯಾವುದು ನಿಜ[illegible] ಯಾವುದು ಸುಳ್ಳೋ ದನ ಕಾಯೋನೇ ಹೇಳಬೇಕು.

ಒಂದಂತೂ ನಿಜ. 'ದನ ಕಾಯೋನು' ಸಿನಿಮಾದ ಕೆಲಸವನ್ನು ನಿಲ್ಲಿಸಿ, ಹೊಸ ಸಿನಿಮಾದತ್ತ ಮುಖ ಮಾಡಿದ್ದಾರೆ ಯೋಗರಾಜ್ ಸದ್ಯ ಅವರು 'ನನ್ನ ಹೆಸರೇ ಅನುರಾಗಿ' ಸಿನಿಮಾದ ಶೂಟಿಂಗ್‌ಗೆ ಹೊ[illegible] ಸಜ್ಜಾಗಿದ್ದಾರೆ.

ಬಾದ್‌ಷಾ ಬರ್‍ತಾನೆ

'ಲಕ್ಷ್ಮಣ' ಸಿನಿಮಾ ಇನ್ನೂರಕ್ಕೂ ಹೆಚ್ಚು ಚಿತ್ರಮಂದಿರಗಳಲ್ಲಿ ತೆರೆ ಕಂಡಿದೆ. ಆ ಖುಷಿಯಲ್ಲಿ ತೇಲುತ್ತಿರುವ ನಿರ್ದೇಶಕ ಆರ್.ಚಂದ್ರು ಮತ್ತೊಂದು ಸಿಹಿ ಸುದ್ದಿ ಕೊಟ್ಟಿದ್ದಾರೆ. ಸದ್ಯದಲ್ಲೇ ಶಿವರಾಜ್‌ಕುಮಾರ್ ಜತೆ ಮತ್ತೊಂದು ಸಿನಿಮಾ ಮಾಡಲಿದ್ದಾರೆ. ಚಿತ್ರಕ್ಕೆ ಈಗಾಗಲೇ 'ಬಾದ್‌ಷಾ' ಎಂದು ಹೆಸರಿಡಲಾಗಿದೆ.ಎಲ್ಲವೂ ಅಂದುಕೊಂಡಂತೆ ಆಗಿದ್ದರೆ, 'ಲಕ್ಷ್ಮಣ'ಗಿಂತ ಮುಂಚೆಯೇ 'ಬಾದ್‌ಷಾ' ಆಗಬೇಕಿತ್ತು. ಕಾರಣಾಂತರದಿಂದ ಮುಂದೂಡಲಾಗಿತ್ತು. ಈಗ ಮತ್ತೆ ಈ ಚಿತ್ರವನ್ನು ಕೈಗೆತ್ತಿಕೊಂಡಿದ್ದಾರೆ. ಸ್ಕ್ರಿಪ್ಟ್ ಕೆಲಸದಲ್ಲಿ ಬಿಜಿ ಆಗಿರುವ ಚಂದ್ರು ಈ ನಡುವೆಯೇ ತೆಲುಗು ಸಿನಿಮಾವೊಂದನ್ನು ನಿರ್ದೇಶನ ಮಾಡುವ ತಯಾರಿ ಕೂಡ ಮಾಡಿಕೊಂಡಿದ್ದಾರೆ. ಶಿವರಾಜ್‌ಕುಮಾರ್ ಕಾಲ್‌ಶೀಟ್‌ನಲ್ಲಿ ವ್ಯತ್ಯಾಸವಾದರೆ, ತೆಲುಗು ಸಿನಿಮಾ ಮಾಡುವ ಪ್ಲಾನ್ ಇದರ ಹಿಂದಿದೆ. ಹಾಗಾಗಲ್ಲ ಅನ್ನುತ್ತಿದ್ದಾರೆ ಚಂದ್ರು ಸ್ನೇಹಿತರು. ಇನ್ನೆರಡು ತಿಂಗಳಲ್ಲಿ 'ಬಾದ್‌ಷಾ' ಸೆಟ್ಟೇರುತ್ತಾನೆ ಅನ್ನುವ ನಂಬಿಕೆ ಅವರದ್ದು.

ಚೇತನ್ ಸ್ಟೂಡೆಂಟ್

ಸಿನಿಮಾ ರಂಗದಿಂದ ದೂರವಾಗಿ ಸಮಾಜಮುಖಿ ಕೆಲಸಗಳಲ್ಲಿ ತೊಡಗಿದ್ದ 'ಆ ದಿನಗಳು' ಖ್ಯಾತಿಯ ಚೇತನ್ ಮತ್ತೆ ಸಿನಿಮಾರಂಗದಲ್ಲಿ ಕಾಣಿಸಿಕೊಂಡಿದ್ದಾರೆ. ಮರಾಠಿಯ 'ದುನಿಯಾ ದಾರಿ' ಸಿನಿಮಾದ ರೀಮೇಕ್



ಚಿತ್ರದಲ್ಲಿ ಇವರು ನಟಿಸುತ್ತಿದ್ದಾರೆ. ಇದು ಕಾದಂಬರಿ ಆಧಾರಿತ ಸಿನಿಮಾ ಕೂಡ ಆಗಿದ್ದರಿಂದ, ಚೇತನ್ ಚಿತ್ರಕ್ಕೆ ಗ್ರೀನ್‌ಸಿಗ್ನಲ್ ಕೊಟ್ಟಿದ್ದಾರೆ. ಈ ಚಿತ್ರದಲ್ಲಿ ಇವರು ಸ್ಟೂಡೆಂಟ್ ಪಾತ್ರವನ್ನು ನಿರ್ವಹಿಸುತ್ತಿದ್ದಾರೆ. ಇದು ಹೋರಾಟದ ಹಿನ್ನೆಲೆ ಇರುವ ಸ್ಟೂಡೆಂಟ್ ಅನ್ನುವುದು ಮತ್ತೊಂದು ವಿಶೇಷ.

ನಿರ್ದೇಶಕರಾಗಬೇಕು ಎಂಬ ಕಾರಣಕ್ಕಾಗಿ ನಟನೆಯಿಂದ ದೂರವಿದ್ದ ಚೇತನ್, ಅದು ಸಾಧ್ಯವಾಗದೇ ಮತ್ತೆ ನಟನೆಯತ್ತ ಹೊರಳಿದ್ದಾರೆ. ಹಾಗಂತ ಅವರು ಸುಮ್ಮನೆ ಕುಳಿತಿಲ್ಲ. ಹೊಸ ಸಿನಿಮಾ ಮುಗಿಯುತ್ತಿದ್ದಂತೆಯೇ ನಿರ್ದೇಶನದ ಸಿನಿಮಾದತ್ತ ಆಲೋಚನೆ ಮಾಡುತ್ತಾರಂತೆ.

ಅಂದಹಾಗೆ ಹೊಸ ಸಿನಿಮಾದ ನಿರ್ದೇಶಕ ಕುಮರೇಶ್. ಇದು ಇವರ ಚೊಚ್ಚಲು ಸಿನಿಮಾ. ಆಗಸ್ಟ್‌ನಿಂದ ಚಿತ್ರವು ಸೆಟ್ಟೇರಲಿದೆ. ಮೇಘನಾ ರಾಜ್ ಸಿನಿಮಾದ ನಾಯಕಿ.

ಗೆಸ್ಟ್ ಅಪಿರಿಯನ್ಸ್!



ನೂತನ್ ಉಮೇಶ್ ನಿರ್ದೇಶನದ 'ಅಸ್ತಿತ್ವ' ಸಿನಿಮಾದಲ್ಲಿ ಇಬ್ಬರು ನಾಯಕಿಯರು ಅತಿಥಿ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ದುನಿಯಾ ರಶ್ಮಿ ಒಂದು ದೃಶ್ಯದಲ್ಲಿ ಬಂದುಹೋದರೆ, ಒಂದೂವರೆ ದೃಶ್ಯದಲ್ಲಿ ಸೋನು ಗೌಡ ನಟಿಸಿದ್ದಾರೆ. ಈ ಇಬ್ಬರೂ ನಟಿಯರು ಹಿಟ್ ಚಿತ್ರಗಳನ್ನು ಕೊಟ್ಟವರು ಅನ್ನುವುದು ವಿಶೇಷ.

ರಶ್ಮಿ ಮತ್ತು ಸೋನು ಗೌಡಗೆ ಸದ್ಯ ಯಾವ ಸಿನಿಮಾಗಳೂ ಇಲ್ಲ. ಸೆಕೆಂಡ್ ಇನ್ನಿಂಗ್ಸ್ ಶುರು ಮಾಡಿರುವ ರಶ್ಮಿಯ ಎರಡ್ಮೂರು ಚಿತ್ರಗಳು ನೆಲಕಚ್ಚಿದವು. ಸೋನು ಗೌಡ ಅವರ 'ಹಾಫ್‌ಮೆಂಟ್ಲು' ಸಿನಿಮಾ ಕೂಡ ಬಾಕ್ಸ್ ಆಫೀಸ್‌ನಲ್ಲಿ ಸೋತಿತು. ಹೀಗಾಗಿ ಗೆಸ್ಟ್ ಅಪಿರಿಯನ್ಸ್ ಆಗಿಯೇ ಸಿನಿಮಾ ಜರ್ನಿಯನ್ನು ಇವರು ಮುಂದುವರೆಸುತ್ತಿದ್ದಾರೆ. ಅದನ್ನು ಇಬ್ಬರೂ ಒಪ್ಪಿಕೊಳ್ಳುತ್ತಾರೆ. ಇಬ್ಬರಿಗೂ ಮತ್ತೆ ಒಳ್ಳೊಳ್ಳೆ ಚಿತ್ರಗಳು ಸಿಗಲಿ.

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427,
Fax : 26604536, E-mail :lankesh70@rediffmail.com